6. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮುಂದುವರೆದ ಚರ್ಚೆ

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ರಾಮನಗರ):- ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ಘನತೆವೆತ್ತ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ನನ್ನ ಭಾವನೆಗಳನ್ನು ವ್ಯಕ್ತಡಿಸಲಿಕ್ಕೆ ಅವಕಾಶ ಕೊಟ್ಟಿರುವುದಕ್ಕೆ ಮೊಟ್ಟ ಮೊದಲಿಗೆ ತಮಗೆ ನನ್ನ ವಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು ಪ್ರಮುಖವಾಗಿ ಮೊದಲನೆ ಪುಟದಲ್ಲಿ ಈ ಒಂದು ಸರ್ಕಾರದ ಬಗ್ಗೆ, "ರಾಜ್ಯದ ಸಮಸ್ತ ನಾಗರೀಕರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಜನಪರ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ" ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಆ ಒಂದು ವಿಷಯಕ್ಕೆ ನಾನು ನಂತರ ಕೆಲವು ವಿಷಯಗಳನ್ನು ಹೇಳಲೇಬೇಕಾಗುತ್ತದೆ. ಪ್ರಮುಖವಾಗಿ ನಮ್ಮ ರಾಜ್ಯದಲ್ಲಿ ಯಾವೊಂದು ರೈತರು ಸಂಕಷ್ಟದಲ್ಲಿದ್ದಾರೆ, ರೈತರ ಸಂಕಷ್ಟಗಳಿಗೆ, ರೈತರ ಸಮಸ್ಯೆಗಳಿಗೆ ಈ ಸರ್ಕಾರ ಎಷ್ಟರಮಟ್ಟಿಗೆ ಸ್ಪಂದಿಸಿದ್ದಾರೆ ಎನ್ನುವುದಕ್ಕೆ ಹಲವಾರು ಬಾರಿ ನಮ್ಮ ಪುಟ್ಟಣ್ಣಯ್ಯನವರು ಸ್ವಲ್ಪ ಸರ್ಕರದ ಪರವಾಗಿ ಮಾತನಾಡಿದ್ದಾರೆ, ನಾವು ಹಲವಾರು ಬಾರಿ ಸರ್ಕಾರಕ್ಕೆ ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದಲೇ ಸಹಕಾರ ಕೊಟ್ಟಿದ್ದೇವೆ. ಬಹುಶಃ ಇತ್ತೀಚೆಗೆ ನಾನು ಮಾನ್ಯ ಪುಟ್ಟಣ್ಣಯ್ಯನವರ ಎರಡು ಮೂರು ಹೇಳಿಕೆಗಳನ್ನು ಗಮನಿಸಿದ್ದೇನೆ. ನಮ್ಮ ರೈತ ಕುಟುಂಬಗಳಲ್ಲಿನ ಹೆಣ್ಣು ಮಕ್ಕಳು ಮೈ ಮಾರಿಕೊಂಡು ಜೀವನ ಮಾಡಬೇಕಾದಂಥ ಪರಿಸ್ಥಿತಿಗೆ ಬಂದಿದೆ ಎನ್ನುವ ರೀತಿಯಲ್ಲಿ ಭಾಷಣ ಮಾಡಿದಿರಿ. ಪುಟ್ಟಣ್ಣಯ್ಯನವರು ಮಾತನಾಡಿರತಕ್ಕಂಥದ್ದನ್ನು ನಾನು ಗಮನಿಸಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅದು ಆ ರೀತಿ ಅಲ್ಲ. ಈಗಾಗಲೇ ಪರಿಸ್ಥಿತಿ ಮನಾದಲ್ಲಿ, ಕರ್ನಾಟಕದ ಖುಷ್ಕಿ ಪ್ರದೇಶದ ಬಹಭಾಗ ಹೆಣ್ಣು ಮಕ್ಕಳು ಆ ಸ್ಥಿತಿಗೆ ಬಂದಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಯಾವ ದುಡಿಯುವ ರೈತರ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಬೇಕಾಗಿತ್ತೋ ಆ ಹೆಣ್ಣು ಮಕ್ಕಳನ್ನು

ರಕ್ಷಿಸದೆ ಈ ಸ್ಥಿತಿ ಬಂದಿರುವುದು. ಅದು ನಮ್ಮ ಮಕ್ಕಳಿಗೆ ಬಂದಿರತಕ್ಕಂಥ ಸ್ಥಿತಿ ಎನ್ನತಕ್ಕಂಥ ಭಾವನೆಯ ಮೇಲೆ ಮಾತನಾಡಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಗೊತ್ತಾಯಿತು. ರೈತರ ಪರಿಸ್ಥಿತಿ ಏನೀದೆ ಎಂಬುದನ್ನು ನೀವು ಹೇಳಿದ್ದೀರಿ. ಇಂದು ಯಾವ ಅನ್ನದಾತನ ಬಗ್ಗೆ ನಾವು ಚರ್ಚೆ ಮಾಡುತ್ತೇವೆ, ಆ ಕುಟುಂಬಗಳ ಪರಿಸ್ಥಿತಿಗಳು ಎಲ್ಲಿಗೆ ದೂಡುತ್ತಿದ್ದೇವೆ, ನಮ್ಮ ಕೆಲವು ಆರ್ಥಿಕ ಕಾರ್ಯಕ್ರಮಗಳಿಂದ ಎನ್ನುವ ಭಾವನೆಯಲ್ಲಿ ನೀವು ಹೇಳಿದ್ದೀರಿ. ಸರ್ಕಾರ ಕೃಷಿ ಭಾಗ್ಯ ಯೋಜನೆಯನ್ನು ಘೋಷಿಸಿದೆ. 500 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಲಾಗಿದೆ ಎಂದು ಘನತೆವೆತ್ತ ರಾಜ್ಯಪಾಲರ ಭಾಷಣದ ಪುಸ್ತಕದ 6ನೇ ಪ್ಯಾರಾದಲ್ಲಿ ಹೇಳಿದ್ದಾರೆ. "ರಾಜ್ಯದ ಮಳೆಯಾಧಾರಿತ ಪ್ರದೇಶಗಳಲ್ಲಿ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮಪಡಿಸಲು 500 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿಕೊಂಡಿದ್ದಾರೆ." "ತೋಟಗಾರಿಕೆ ಕ್ಷೇತ್ರದಲ್ಲಿ ಕರ್ನಾಟಕವು ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದೆ. ಕಡಿಮೆ ಮಳೆ, ಬರಪೀಡಿತ ಪ್ರದೇಶಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದು, ಹೆಚ್ಚು ಆದಾಯಗಳಿಸಬಹುದಾಗಿದ್ದು, ಹೆಚ್ಚು ರೈತರು ತೋಟಗಾರಿಕೆ ಬೆಳೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ" ಎಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಪ್ರಮುಖವಾಗಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಬೆಳೆಗಳನ್ನು ಬೆಳೆಯತಕ್ಕಂಥ ಕೃಷಿಕರನ್ನು ನಾವು ಕಾಣಬಹುದು. ನಾವು ಉತ್ತರ ಕರ್ನಾಟಕದ ಭಾಗಕ್ಕೆ ಹೋದರೆ ಅಲ್ಲಿಯ ಜನತೆ ಹೆಚ್ಚಿನ ರೀತಿಯಲ್ಲಿ ಕೃಷಿಯನ್ನೇ ಅವಲಂಭಿತರಾಗಿ ಜೀವನ ಮಾಡುತ್ತಿದ್ದಾರೆ. ಭೂಮಿಯ ಮಾಲೀಕರಿರಬಹುದು, ಕೃಷಿ ಕಾರ್ಮಿಕರಿರಬಹುದು. ಇವತ್ತಿನ ದಿವಸ ಆ ಭಾಗದಲ್ಲಿನ ಒಂದೊಂದು ಜಿಲ್ಲೆಯಲ್ಲಿ ಕೂಡ ಒಂದೊಂದು ರೀತಿಯ ಬೆಳೆ ಬೆಳೆಯುವ ರೈತರನ್ನು ನಾವು ಕಂಡಿದ್ದೇವೆ. ಕಬ್ಬು ಬೆಳೆಗಾರರ ವಿಷಯವನ್ನು ನೆನ್ನೆದಿವಸ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಈ ವಿಷಯವನ್ನು ಮತ್ತೆ ಎಳೆಯುವದಕ್ಕೆ ಹೋಗುವುದಿಲ್ಲ. ಕೇವಲ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. 2500 ರೂಪಾಯಿಗಳನ್ನು ಒಂದು ಟನ್

ಕಬ್ಬಿಗೆ ಕೊಡುತ್ತೇವೆಂದು ಸರ್ಕಾರ ಕಳೆದ ವರ್ಷ ಘೋಷಣೆ ಮಾಡಿತ್ತು. ಆದರೆ, ಕಳೆದ ವರ್ಷ ಸರಬರಾಜು ಮಾಡಿರತಕ್ಕಂಥ ಕಬ್ಬಿಗೆ ದಿನಾಂಕ 31.01.2015 ಕ್ಕೆ ಸುಮಾರು 1277 ಕೋಟಿ ರೂಪಾಯಿಯನ್ನು ಸಕ್ಕರೆ ಕಾರ್ಖಾನೆಯ ಮಾಲೀಕರು ಇನ್ನೂ ಕೊಟ್ಟಿಲ್ಲ. ಹಲವಾರು ಕಾರ್ಖಾನೆಯ ಮಾಲೀಕರು ಒಂದು ಟನ್ ಕಬ್ಬಿಗೆ 700, 800 ರೂಪಾಯಿಗಳಷ್ಟು balance ಉಳಿಸಿಕೊಂಡಿದ್ದಾರೆ. ಡಿಸೆಂಬರ್ ತಿಂಗಳಲ್ಲಿ 200 ರೂಪಾಯಿ ಕೊಡಿಸಲು ನಿರ್ಧಾರ ಮಾಡಲಾಗಿದೆ, ಉಳಿದ 200 ರೂಪಾಯಿಯನ್ನು ಮಾರ್ಚ್ ತಿಂಗಳಲ್ಲಿ ಕೊಡಿಸುತ್ತೇವೆಂಬ ಮಾತನ್ನು ಸರ್ಕಾರ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಇವತ್ತಿಗೂ ಕೂಡ 1200 ಕೋಟಿ ರೂಪಾಯಿ ಬಾಕಿ ಉಳಿದುಕೊಂಡಿದೆ. 2014–15 ನೇ ಸಾಲಿನಲ್ಲಿ ಕಬ್ಬನ್ನು ಬೆಳೆದಿರುವಂಥ ರೈತರು ತಾವು ಬೆಳೆದಿರುವ ಕಬ್ಬು ಹೊಲದಿಂದ ಕಾರ್ಖಾನೆಗಳಿಗೆ ಹೋಗಿ ತಲುಪಿದರೆ ಸಾಕೆಂಬ ಚಿಂತೆ ಇವತ್ತಿನದಿವಸ ರೈತರಿಗೆ ಇದೆ. ನಮ್ಮ ರೈತ ಅತ್ಯಂತ ಅಲ್ಪ ತೃಪ್ತಿಯನ್ನು ಹೊಂದಿರತಕ್ಕಂಥವನು ಎಂಬುದಕ್ಕೆ ಉದಾಹರಣೆ ಏನೆಂದರೆ, ಆತನ ಜೀವನ ಎಷ್ಟೇ ಕಷ್ಟ ಇರಲಿ ಬಿತ್ತು ಉಳುವುದನ್ನು ಬಿಡುವುದಿಲ್ಲ ಎಂಬ ಮಾತನ್ನು ಕುವೆಂಪುರವರು ರೈತನ ಬಗ್ಗೆ ಹೇಳುತ್ತಾರೆ. ಮಳೆ ಬರಲಿ, ಮಳೆ ಬಾರದೆ ಇರಲಿ ಆತನಿಗೆ ಕೇವಲ ಭೂಮಿ ಕಡೆ ಮಾತ್ರ ಜ್ಞಾನ ಇರುತ್ತದೆ. ಇವತ್ತಿನ ದಿವಸ ಸರ್ಕಾರಗಳು ರೈತನ ಕುಟುಂಬಗಳನ್ನು ಎಷ್ಟರಮಟ್ಟಿಗೆ ರಕ್ಷಣೆ ಮಾಡುತ್ತಿದ್ದೇವೆಂಬ ಬಗ್ಗೆ ಚಿಂತನೆ ಮಾಡಬೇಕು. ಇವತ್ತಿನದಿವಸ ಮೆಕ್ಕೆಜೋಳ ಬೆಳೆಯತಕ್ಕಂಥ ಬೆಳೆಗಾರರ ಪರಿಸ್ಥಿತಿ ಏನಾಗಿದೆ ಎಂದರೆ, ಕಳೆದ ವರ್ಷ ಒಂದು ಕ್ವಿಂಟಲ್ ಮೆಕ್ಕೆಜೋಳಕ್ಕೆ 1,310 ರೂಪಾಯಿ ಕೊಟ್ಟಿದ್ದೀರಿ. ಈ ವರ್ಷ ಕೇಂದ್ರ ಸರ್ಕಾರ ನಮಗೆ ಕೆಲವು ಮಾರ್ಗಸೂಚಿಗಳನ್ನು ಹೇಳಿದೆ. ನಾವು 1,100 ರೂಪಾಯಿಗಿಂಥ ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ಕಳೆದ ವರ್ಷ ನೀವು ಸುಮಾರು 7.25 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೆಕ್ಕೆ ಜೋಳವನ್ನು ಖರೀದಿ ಮಾಡಿ ಅದನ್ನು ಗೋಡೌನ್ ಮತ್ತು ಇತರೇ ಸಿಕ್ಕ ಸಿಕ್ಕ ಜಾಗದಲ್ಲಿಟ್ಟಿದ್ದೀರಿ. ಯಾವ ಹಂತಗಳಲ್ಲಿ ಅದನ್ನು ಮಾರಾಟ ಮಾಡಿ ಈ ವರ್ಷ ಮೆಕ್ಕೆಜೋಳ ಬೆಳೆಯತಕ್ಕಂಥ ರೈತರು ಸಂಕಷ್ಟಕ್ಕೆ ಒಳಗಾಗದ ರೀತಿಯಲ್ಲಿ ಆತನಿಗೆ ರಕ್ಷಣೆ

ಕೊಡಬೇಕೆಂಬುದರ ಬಗ್ಗೆ ಮುಂದಾಲೋಚನೆ ಮಾಡಿಕೊಳ್ಳಲಿಲ್ಲ. ಬಾಗಲಕೋಟೆಯಲ್ಲಿ ಸುಮಾರು 1 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೆಕ್ಕೆ ಜೋಳವನ್ನು ಬಾಂಗ್ಲಾದೇಶಕ್ಕೆ exort ಮಾಡಲಾಗಿದೆ. ನಮ್ಮ ರೈತ ಬೆಳೆದಂಥ ಬೆಳೆಗಳನ್ನು ಯಾವರೀತಿಯಾಗಿ ಬೆಲೆ ನಿಗದಿ ಮಾಡಬೇಕೆಂಬ ಬಗ್ಗೆ ತಾವು ಒಂದು ಮಾತನ್ನು ಹೇಳಿದ್ದೀರಿ. ಅದೇನೆಂದರೆ, ದೇಶಕ್ಕೆ ಮಾದರಿಯಾಗತಕ್ಕಂಥ ಕೃಷಿ ಬೆಲೆ ಆಯೋಗವನ್ನು ನಾವು ರಚನೆ ಮಾಡುತ್ತಿದ್ದು, ರೈತನೇ ಅದರ ಸದಸ್ಯನಾಗಿರುತ್ತಾನೆ. ರೈತ ಆಯಾ ವರ್ಷ ಬೆಳೆದಂಥ ಬೆಳೆಯ ಖರ್ಚುವೆಚ್ಚಗಳನ್ನು ಆತನೇ ನಿಗದಿ ಮಾಡಿಕೊಂಡು ಆತ ಯಾವ ಬೆಲೆಯನ್ನು ನಿಗದಿ ಮಾಡುತ್ತಾನೆಯೋ ಆ ಒಂದು ಬೆಲೆಯನ್ನು ಕೊಡತಕ್ಕಂಥ ಐತಿಹಾಸಿಕವಾದಂಥ ಒಂದು ಕೃಷಿ ಬೆಲೆ ಆಯೋಗವನ್ನು ನಾವು ದೇಶಕ್ಕೆ ಮಾದರಿಯಾಗಿ ಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ 2 ವರ್ಷಗಳ ನಿಮ್ಮ ಅಧಿಕಾರವನ್ನು ಸಂಪೂರ್ಣಗೊಳಿಸುತ್ತಿದ್ದೀರಿ. ಈ ಕೃಷಿ ಬೆಲೆ ಆಯೋಗ ಎಲ್ಲಿದೆ? ಕೇಂದ್ರ ಸರ್ಕಾರ ನಿಗದಿ ಮಾಡಿರುವ 1,100, 1,050 ರೂಪಾಯಿಯ MSP ಅನ್ನು ನೀವು ಕೊಡುತ್ತೇವೆಂದರೂ ರೈತ ಈಗಾಗಲೇ ಮಧ್ಯವರ್ತಿಗಳಿಗೆ 850, 900 ರೂಪಾಯಿಗೆ ಮಾರಾಟ ಮಾಡಿರತಕ್ಕಂಥ ನಿದರ್ಶನಗಳು ರಾಜ್ಯದಲ್ಲಿವೆ. ಇಂಥ ಒಂದು ಪರಿಸ್ಥಿತಿ ಮೆಕ್ಕೆ ಜೋಳ ಬೆಳೆದಂಥ ರೈತರದ್ದು ಇದೆ. ಇನ್ನು ಕಬ್ಬು ಬೆಳೆಗಾರರ ಬಗ್ಗೆ ಹೇಳುವುದಾದರೆ,

ಶ್ರೀ ವೈ.ಎನ್. ರುದ್ರೇಶ್ ಗೌಡ:- ನಮ್ಮ ಸರ್ಕಾರ ಬಂದ ಮೇಲೆ ಕಳೆದ ವರ್ಷ 2000 ಕೋಟಿ ರೂಪಾಯಿಯನ್ನು ಬೆಂಬಲ ಬೆಲೆಗೋಸ್ಕರ ಕೊಟ್ಟಿತ್ತು. ಹಿಂದೆ ಯಾವುದೇ ಸರ್ಕಾರ ಇಷ್ಟೊಂದು ಹಣವನ್ನು ಕೊಟ್ಟಿರಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ರುದ್ರೇಶ್ ಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ನೀವು ಏನೇನು ಕೊಟ್ಟಿದ್ದೀರೆಂಬ ಬಗ್ಗೆ ಆಮೇಲೆ ಅವರು ಹೇಳುತ್ತಾರೆ. ನೀವು ತಲೆಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಮೆಕ್ಕೆ ಜೋಳದ ಬಗ್ಗೆ ಹೇಳುವುದಾದರೆ, ಕೇಂದ್ರ ಸರ್ಕಾರ 1,310 ರೂಪಾಯಿ MSP ಅನ್ನು ನಿಗದಿ ಮಾಡಿದೆ. ರಾಜ್ಯ ಸರ್ಕಾರ 1,100 ರೂಪಾಯಿಯಂತೆ ಖರೀದಿ ಮಾಡುತ್ತಿದೆ. ಕೇಂದ್ರ ಸರ್ಕಾರ ನಿಗದಿ ಮಾಡಿರುವುದು ಏನಾಗಿದೆ ಎಂದು ಇವತ್ತಿನವರೆಗೂ ಗೊತ್ತಾಗಲಿಲ್ಲ ಹಾಗೆಯೇ ರಾಜ್ಯ ಸರ್ಕಾರ ಏನು ಮಾಡುತ್ತೀರೆಂಬುದನ್ನು ಹೇಳಿಲ್ಲ. ರೈತರು 1,050, 1,000 ರೂಪಾಯಿಗೆ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಹಾಗೆಯೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತೆಗೆದುಕೊಂಡು ಬನ್ನಿ ಎಂದು ಭಾರತೀಯ ಜನತಾ ಪಾರ್ಟಿಯವರಿಗೂ ಸಹ ಹೇಳಿದ್ದೇವೆ. ಆದ್ದರಿಂದ ಯಾವುದಾದರೊಂದು ನಿರ್ಧಾರವನ್ನು ಈ ಸದನದಲ್ಲಿ ಹೇಳಬೇಕು. ನಾವು ಕೇವಲ ರೈತರ ಪರವಾಗಿ ಮಾತನಾಡಿದರೆ ಆಗುವುದಿಲ್ಲ. ಈ ಬಗ್ಗೆ ಸರ್ಕಾರ ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಕಬ್ಬು ಬೆಳೆಗಾರರದ್ದು ಕೂಡ ಒಂದು ರೀತಿಯ ಸಮಸ್ಯೆ ಇದೆ. ಈ ವರ್ಷ ಕೇಂದ್ರ ಸರ್ಕಾರದ FRP ಬೆಲೆಯನ್ನು ತಾವು ಘೋಷಣೆ ಮಾಡಿ ಎಲ್ಲಾ ಕಾರ್ಖಾನೆಗಳ ಮಾಲೀಕರಿಗೆ ಕಳುಹಿಸಿರುವುದನ್ನು ನಾನು ಗಮನಿಸಿದ್ದೇನೆ. ಕಳೆದ ವರ್ಷ ಕಬ್ಬಿನ ಇಳುವರಿಯ ಆಧಾರದ ಮೇಲೆ ಯಾವ್ಯಾವ ಕಾರ್ಖಾನೆಗಳು ಹಣ ಕೊಡಬೇಕಾಗಿದೆ ಎಂಬ ಬಗ್ಗೆ ನೋಟಿಫಿಕೇಷನ್ ಅನ್ನು ಪ್ರಕಟಣೆ ಮಾಡಿರುವುದು ಸಂತೋಷ. ಆದರೆ, ಇವತ್ತು ರೈತರನ್ನು ಇಂಥ ಒಂದು ಪರಿಸ್ಥಿಗೆ ತಂದು ನಿಲ್ಲಿಸುತ್ತಿದ್ದೀರಿ. ಕಳೆದ ಬೆಳಗಾವಿ ಅಧಿವೇಶನದಲ್ಲಿ ಕಬ್ಬು ಬೆಳೆಗಾರರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇನೆ. ಆದ್ದರಿಂದ, ಮತ್ತೆ ಅದೇ ವಿಷಯವನ್ನು ಹೇಳಿ ಸಮಯವನ್ನು ವ್ಯರ್ಥ ಮಾಡುವುದಕ್ಕೆ ಹೋಗುವುದಿಲ್ಲ. ಅಂದರೆ, ಆ ವಿಷಯವನ್ನು ಇಲ್ಲಿ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. 1 ಟನ್ ಕಬ್ಬನ್ನು 1,200 ರೂಪಾಯಿಯಂತೆ ಸಾಗಾಣಿಕೆ ಮಾಡಿ ಇವತ್ತಿಗೆ ಒಂದೂಕಾಲು

ವರ್ಷವಾಗಿದೆ. ಕಾರ್ಖಾನೆಗಳಿಗೆ ಕಬ್ಬನ್ನು ಮಾರಾಟ ಮಾಡಿ ಇಂತಿಷ್ಟು ದಿನಗಳಲ್ಲಿ ಅಂದರೆ, 15 ದಿವಸಗಳಲ್ಲಿ ಕಾರ್ಖಾನೆಯ ಮಾಲೀಕರು ರೈತನಿಗೆ ದುಡ್ಡು ಕೊಡದೇ ಇದ್ದರೆ 14% ನಷ್ಟು interest ಸಮೇತ ಕೊಡಿಸುತ್ತೇವೆಂದು ಇದೇ ಸದನದಲ್ಲಿ ನೀವೇ ಕಾನೂನನ್ನು ತಂದಿದ್ದೀರಿ. ನಿಜಕ್ಕೂ ನೀವು ಆತನಿಗೆ interest ಕೊಡಿಸುತ್ತೀರಾ? ಆತನಿಗೆ ಅಸಲನ್ನೆ ಕೊಡಿಸುವುದಕ್ಕೆ ಸಾಧ್ಯವಾಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನೀವಿರುವಾಗ ಆತನಿಗೆ interest ಅನ್ನು ಯಾರು ಕೊಡುತ್ತಾರೆ? ಆತನ ಬಗ್ಗೆ ಯಾರು ಕೇಳುವುದಕ್ಕೆ ಆಗುತ್ತಿದೆ? ಯಾವ ನಂಬಿಕೆಯಲ್ಲಿ ಆ ರೈತರು ಕಬ್ಬನ್ನು ಮುಂದಿನ ದಿನಗಳಲ್ಲಿ ಬೆಳೆಯಬೇಕಾಗುತ್ತದೆ ಎಂಬ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಇನ್ನು ಭತ್ತ ಬೆಳೆದಿರುವವರ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಕಳೆದ ಬಾರಿ ₹ 1,600 ಕೊಟ್ಟಿದ್ದೀರಿ. ಈ ವರ್ಷ 1,300, 1,320 ರೂಪಾಯಿಯನ್ನು ನಿಗದಿ ಮಾಡಿಕೊಂಡಿದ್ದೀರಿ. ಆದರೆ, ಮಾರುಕಟ್ಟೆಯಲ್ಲಿ 1,050, 1,100 ರೂಪಾಯಿ ಇದೆ. ಮೊನ್ನೆದಿವಸ ಕೆ.ಆರ್. ನಗರದಲ್ಲಿನ ಒಂದು ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ವಯಸ್ಸಾದ ಒಬ್ಬ ಮುದಕರು ಕೂಗಿ 1,300 ರೂಪಾಯಿ ಎಲ್ಲಿದೆ, ಇವತ್ತು 1,050 ರೂಪಾಯಿಗೂ ಕೊಂಡುಕೊಳ್ಳುವವರು ಇಲ್ಲವೆಂದು ಮೈಸೂರು ಜಿಲ್ಲೆಗೆ ಸೇರಿದವರೇ ಹೇಳುತ್ತಾರೆ. ಕಳೆದ ವರ್ಷ 1,600 ರೂಪಾಯಿ ತೆಗೆದುಕೊಂಡಂಥ ರೈತ ಇವತ್ತು 1,050, 1,100 ರೂಪಾಯಿಗೆ ಭತ್ತ ಮಾರಾಟ ಮಾಡಿ ಎಂದರೆ ನಾವು ಎಷ್ಟರಮಟ್ಟಿಗೆ ರೈತರನ್ನು ಕಾಪಾಡುತ್ತಿದ್ದೇವೆಂಬ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಕಳೆದ ವರ್ಷ 2.25 ಲಕ್ಷ ಮೆಟ್ರಿಕ್ ಟನ್ ಅನ್ನು 1,600 ರೂಪಾಯಿಗೆ ತೆಗೆದುಕೊಂಡು ಅದನ್ನು ಯಾವುದೋ ರೈಸ್ ಮಿಲ್‌ಗಳಲ್ಲಿ ಅಥವಾ ಯಾವುದೋ ಗೋಡೌನ್‌ನಲ್ಲಿ ಅಥವಾ ಸಿಕ್ಕ ಸಿಕ್ಕ ಜಾಗದಲ್ಲಿಟ್ಟುಕೊಂಡಿದ್ದೀರಿ. ಈ ವರ್ಷ ರೈತ ಬೆಳೆದಂಥ ಭತ್ತದ ಬೆಳೆ ಬರತಕ್ಕಂಥ ಸಮಯದವರೆಗೆ ಸ್ಟಾಕ್ ಇಟ್ಟಿರುವುದನ್ನು ನೀವು ಉಪಯೋಗ ಮಾಡಿಕೊಳ್ಳದೆ, ರೈತ ಈ ವರ್ಷದ ಬೆಳೆಯನ್ನು ಮಾರುಕಟ್ಟೆಗೆ ತರತಕ್ಕಂಥ ಸಮಯದಲ್ಲಿ ಟೆಂಡರ್‌ನಲ್ಲಿ 1,050, 1,100 ರೂಪಾಯಿ ದರವನ್ನು ಖರೀದಿದಾರರು ಕೋಟ್ ಮಾಡಿಕೊಂಡರೆ ರೈತ ಈ ವರ್ಷ ಬೆಳೆದ ಬೆಳೆ ಏನಾಗಬೇಕು? ರೈತ ಬೆಳೆದಂಥ ಈ ಬೆಳೆಗಳ

ವೆಚ್ಚ ಕಳೆದ ವರ್ಷಕ್ಕೂ ಮತ್ತು ಈ ವರ್ಷಕ್ಕೂ ಕಡಿಮೆ ಆಗಿದೆಯೋ ಅಥವಾ ಜಾಸ್ತಿ ಆಗಿದೆಯೋ ಎಂಬ ಬಗ್ಗೆ ಮಾನ್ಯ ಪುಟ್ಟಣ್ಣಯ್ಯನವರು ಗಮನ ಸೆಳೆಯಬೇಕು. 2013 ನೇ ಸಾಲಿನ ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿದ್ದೇನೆ. ಅದೇನೆಂದರೆ, ಉತ್ತರ ಕರ್ನಾಟಕದ ಭಾಗಗಳಾದ ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಗಳ ಭಾಗದಲ್ಲಿ ದ್ರಾಕ್ಷಿ ಬೆಳೆಯುವ ರೈತರು 510 ಕೋಟಿ ರೂಪಾಯಿ ಸಾಲ ಮಾಡಿಕೊಂಡಿದ್ದಾರೆ. ಮಾನ್ಯ ಎಂ.ಬಿ. ಪಾಟೀಲ್‌ರವರ ಜಿಲ್ಲೆಯಲ್ಲಿ ಪ್ರಮುಖವಾಗಿ ಉತ್ತಮವಾದ ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತಾರೆ. ಆದರೆ, ಕಳೆದ 10 ವರ್ಷದಲ್ಲಿ ಕೇವಲ 3–4 ವರ್ಷ ಮಾತ್ರ ಬೆಳೆ ಬೆಳೆಯುವುದಕ್ಕೆ ಆಯಿತು. ಹಲವಾರು ರೀತಿಯ ರೋಗಗಳಿಂದ ಬೆಳೆ ರೈತನ ಕೈಗೆ ಸಿಗದೆ ಇರತಕ್ಕಂಥ ಪರಿಸ್ಥಿತಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮಾಡಿಕೊಂಡಿದ್ದಾರೆ, ಸಹಕಾರಿ ಬ್ಯಾಂಕಿನಲ್ಲಿ ಸಾಲ ಮಾಡಿಕೊಂಡಿದ್ದಾರೆ, ಅವರ ತಲೆಯ ಮೇಲೆ 160 ರಿಂದ 180 ಕೋಟಿ ರೂ. ಗಳವರೆಗೆ ಬಡ್ಡಿ ಇದೆ. 2013 ರಲ್ಲಿ ನಾನು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ, ಅವರು ಉತ್ತರ ಕೊಟ್ಟಿದ್ದಾರೆ. ಕೇಂದ್ರ ಆರ್ಥಿಕ ಸಚಿವರಿಗೆ ಪತ್ರ ಬರೆದಿದ್ದೇವೆ ಮತ್ತು ಆವತ್ತಿನ ಕೇಂದ್ರೀಯ ಕೃಷಿ ಸಚಿವರಿಗೆ ಮನವಿ ಮಾಡಿದ್ದೇವೆ. ಕೇಂದ್ರ ಸರ್ಕಾರ ಸ್ವಲ್ಪ ಸಹಾಯ ಮಾಡಬಹುದೆಂದು ನಂಬಿಕೆ ಇಟ್ಟಿದ್ದೇವೆ ಎಂದರು. ಆವತ್ತು ಆ ಸಂದರ್ಭದಲ್ಲಿ ನಾನು ಹೇಳಿದೆ. ಕೇಂದ್ರ ಸರ್ಕಾರ ಇವತ್ತು ರೈತರ ಪಾಲಿಗೆ ನೆರವು ಕೊಡುತ್ತಾರೆ ಎನ್ನತಕ್ಕಂಥದ್ದನ್ನು ನೀವು ಅವರ ಕಡೆಗೆ ನೋಡಿಕೊಂಡು ಆ ರೈತನ ಆತ್ಮಸ್ಥೈರ್ಯವನ್ನು ಕುಗ್ಗಿಸಬೇಡಿ ಎಂದು ಮನವಿಯನ್ನು ಮಾಡಿದೆ. ಕೊಪ್ಪಳ ಭಾಗದಲ್ಲಿ ದಾಳಿಂಬೆ ಬೆಳೆ ಬೆಳೆಯುತ್ತಾರೆ. ಅವರೂ ಸಂಕಷ್ಟದಲ್ಲಿದ್ದಾರೆ ಅವರೂ ಸುಮಾರು 250 ಕೋಟಿ ರೂ. ಗಳ ಸಾಲವನ್ನು ಮಾಡಿಕೊಂಡಿದ್ದಾರೆ. ಎರಡು ವರ್ಷವಾಯಿತು ಇವತ್ತಿನವರೆಗೂ ಇವರು ಯಾರ ಕಷ್ಟಗಳನ್ನೂ ಬಗೆಹರಿಸತಕ್ಕಂಥ ಸರ್ಕರ ಗಮನ ಕೊಡತಕ್ಕಂಥ ನಿರ್ಧಾರಗಳನ್ನು ನಾವು ಕಾಣಲಿಲ್ಲ. ಕಲಬುರ್ಗಿ ಭಾಗದಲ್ಲಿ ತೊಗರಿ ಕೆಲವು ಭಾಗದಲ್ಲಿ ಬೆಳೆ ಬಂತು ಬೆಲೆ ಇಲ್ಲ, ಕೆಲವರು ಬಿತ್ತನೆ ಮಾಡಿದರೂ ಮಳೆ ಇಲ್ಲ, ಬೆಳೆ ಹೋಯಿತು. ಬೆಳೆ ವಿಮೆ ಬಿಡುಗಡೆ ಆಗಬೇಕೆಂದು ರೈತರ

ಹೋರಾಟದಲ್ಲಿ ಕಲಬುರ್ಗಿಯಲ್ಲಿ ಬಿ.ಆರ್. ಪಾಟೀಲ್‌ರು ಹೋರಾಟ ಮಾಡಿದ್ದೀರಿ. ಹತ್ತಿ ಬೆಳೆಯ ಬೆಳೆಗಾರರು ನನಗೆ ಒಂದು ರಾತ್ರಿ 12.30 ರ ಸುಮಾರಿನಲ್ಲಿ ಬಳ್ಳಾರಿಯಿಂದ ಫೋನ್ ಮಾಡುತ್ತಾರೆ, ನಮ್ಮನು ಕೇಳುವವರೆ ಇಲ್ಲ. ಇವತ್ತು ಹತ್ತಿ ಬೆಳೆದು ನಾವು ಎಣ್ಣೆ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಾರೆ, ಎಣ್ಣೆ ಎಂದರೆ ಅವರ ಭಾಷೆಯಲ್ಲಿ ವಿಷ! ಜೇವರ್ಗಿ ರೈತರ ಪರಿಸ್ಥಿತಿಯೂ ಅದೇ ಇದೆ. ಇಬ್ಬರು ಆತ್ಮಹತ್ಯೆ ಮಾಡಿಕೊಂಡರು. ಇನ್ನೂ 4 ಜನ ಆತ್ಮಹತ್ಯೆ ಮಾಡಿಕೊಂಡವರು ಉಳಿದುಕೊಂಡರು. ಇವತ್ತು ರಾಜ್ಯದ ಹಲವಾರು ಭಾಗದಲ್ಲಿ ಆತ್ಮಹತ್ಯೆಯ ಪ್ರಕರಣಗಳು ಪ್ರಾರಂಭವಾದವು. ರಾಜ್ಯದ ಹಲವಾರು ಭಾಗಗಳಲ್ಲಿ ಬೆಳೆದ ರೈತರ ಬೆಳೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಈರುಳ್ಳಿ ಬೆಳೆಗಾರರು ಇರಬಹುದು, ಮೆಣಸಿನಕಾಯಿ ಬೆಳೆದವರು ಇರಬಹುದು ರೈತರ ಭೂಮಿಗೆ ಹೋಗಿ ನೋಡಿದ್ದೇವೆ. ಮೆಣಸಿನಕಾಯಿ ಬೆಳೆ ಬೆಳೆದವರು ಏನಾದರೂ ಹುಬ್ಬಳ್ಳಿ–ಧಾರವಾಡದಲ್ಲಿ ಕೊಳೆತ ಈರುಳ್ಳಿಯನ್ನೂ ರೈತರು ರಸ್ತೆಯಲ್ಲಿ ಆಯ್ದುಕೊಂಡು ಕುಳಿತಿದ್ದರು ಆ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದಕ್ಕೆ ಅದನ್ನೂ ನೋಡಿದೆವು. ಟೊಮೆಟೋ ಬೆಳೆ ಇರಬಹುದು. ಮುಖ್ಯಮಂತ್ರಿಗಳಿಗೆ 17.09.2014 ಕ್ಕೆ ಒಂದ ಪತ್ರವನ್ನು ಬರೆದೆ. ಕಳೆದ ವರ್ಷ ಕೆಲವು ಭಾಗದಲ್ಲಿ ಆಲಿಕಲ್ಲು ಮಳೆ, ಕೆಲವು ಭಾಗದಲ್ಲಿ ಅತೀವೃಷ್ಟಿ ಮತ್ತೆ ಕೆಲವು ಭಾಗದಲ್ಲಿ ಅನಾವೃಷ್ಟಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ನಾನು 6–7 ಜಿಲ್ಲೆಗಳಿಗೆ ಪ್ರವಾಸ ಮಾಡಿ ಪತ್ರ ಬರೆದೆ. ಅತೀವೃಷ್ಟಿ ಅನಾವೃಷ್ಟಿಯಿಂದ ಈ ವರ್ಷ ಕನಿಷ್ಠ 5000 ಕೋಟಿ ರೂ. ಗಳು ಆ ಭಾಗದಲ್ಲಿರತಕ್ಕಂಥ ಮೂಲಭೂತ ಸೌಕರ್ಯಗಳು, ರೈತರ ಬೆಳೆ ನಷ್ಟ ಮನೆಗಳು ಬಿದ್ದಿರತಕ್ಕಂಥದ್ದು ಇದರ ಹಿನ್ನೆಲೆಯಲ್ಲಿ ನಷ್ಟವಾಗಿದೆ, ರೈತನಿಗೆ ಒಂದು ವಿಶೇಷವಾದ ಪ್ಯಾಕೇಜ್ ಅನ್ನು ಕೊಡುವುದಕ್ಕೆ ಈಗಾಗಲೇ ನಿರ್ಧಾರ ಮಾಡಿಕೊಳ್ಳಿ, ಸಿದ್ಧತೆ ಮಾಡಿಕೊಳ್ಳಿ ಎಂದು ಒಂದು ಪತ್ರವನ್ನು ಬರೆದೆ. ಮುಖ್ಯಮಂತ್ರಿಗಳು ಒಂದು ಉತ್ತರವನ್ನು ಮಾಧ್ಯಮಗಳಿಗೆ ಕೊಟ್ಟರು, ನನಗೆ ಅಲ್ಲ. ಅವರು ಹೇಳುತ್ತಾರೆ, ಹೆಚ್.ಡಿ.ಕೆ. ಸಮೀಕ್ಷೆ ಮಾಡಿದ್ದರಾ? ಪ್ರವಾಹ ಪೀಡಿತ ಜಿಲ್ಲೆಗಳಿಗೆ 5000 ಕೋಟಿ ರೂ. ಗಳು ವಿಶೇಷ ಪ್ಯಾಕೇಜ್

ಘೋಷಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕೇಳಿರುವುದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯನವರು ನಷ್ಟದ ಬಗ್ಗೆ ಕುಮಾರಸ್ವಾಮಿ ಏನಾದರೂ ಖುದ್ದು ಸಮೀಕ್ಷೆ ಮಾಡಿದ್ದರಾ? ಸಮೀಕ್ಷೆ ಮಾಡಿದ್ದು ಸರ್ಕಾರದ ಅಧಿಕಾರಿಗಳು. ರಾಜಕೀಯ ಹೇಳಿಕೆ ನೀಡಬೇಕು ಎನ್ನುವ ಕಾರಣಕ್ಕೆ ಆ ರೀತಿ ಹೇಳಿದ್ದಾರಷ್ಟೆ ಎಂದು ಹೇಳಿದ್ದಾರೆ. ನನಗೆ ಬೇರೆ ಕೆಲಸ ಇಲ್ಲವಾ? ನಾನು 5–6 ದಿವಸ ಆ ಭಾಗದಲ್ಲಿ ಪ್ರವಾಸ ಮಾಡಿದ್ದೇನೆ. ಹಲವಾರು ಹಳ್ಳಿಗಳಿಗೆ ಭೇಟಿ ಮಾಡಿದೆ. ನನ್ನ ಕೈಲಾದ ಮಟ್ಟಿಗೆ ಅತ್ಯಂತ ಸಂಕಷ್ಟಕ್ಕೆ ಒಳಗಾದವರಿಗೆ ಆರ್ಥಿಕ ನೆರವೂ ಕೊಟ್ಟು ಬಂದಿದ್ದೇನೆ. ನಾನು ಖಾಲಿ ಕೈಯಲ್ಲಿ ಹೋಗಿರಲಿಲ್ಲ. ಕಲಬುರ್ಗಿ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಸುಮಾರು 12 ಎಕರೆ ಭೂಮಿ ಇರತಕ್ಕಂಥ ರೈತ, ಅಲ್ಲಿ ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬಂದಂಥ ಸಂದರ್ಭದಲ್ಲಿ ಬೆಳೆ ನಾಶವಾಗಿದೆ. ಮನೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಆ 12 ಎಕರೆ ಜಮೀನು ಮಾಲೀಕನ ಕುಟುಂಬ ಸ್ಥಳ ಇಲ್ಲದೆ ಊರಿನ ಜಗುಲಿಯ ಮೇಲೆ ಮಲಗಿದೆ. ಅವರಿಗೆ ನೀವು ಎಷ್ಟು ಪರಿಹಾರ ಕೊಡುತ್ತೀರಿ? ಕುಮಾರಸ್ವಾಮಿಯವರು ಯಾವ ಎಸ್ಟಿಮೇಟ್ ಮಾಡಿಕೊಂಡು ಬಂದು ಹೇಳಿದಿರಲ್ಲಾ, ನೀವು ಎರಡು ಪುಸ್ತಕಗಳನ್ನು ಮಾಡಿಸಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಲ್ಲಾ ಎಷ್ಟು ಕೋಟಿ ರೂ. ಗಳ ಎಸ್ಟಿಮೇಟ್ ಹೇಳಿದ್ದೀರಿ? ಕೇಂದ್ರ ಸರ್ಕಾರಕ್ಕೆ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಎರಡು ಬುಕ್‌ಗಳನ್ನು ಮಾಡಿ ಮನವಿ ಕೊಟ್ಟಿದ್ದೀರಿ. ಸುಮಾರು 4800 ಕೋಟಿ ರೂ. ಗಳ ನಷ್ಟವಾಗಿರತಕ್ಕಂಥ ಮಾಹಿತಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಿ. ನಾನು ಸುಮ್ಮನೆ ಪ್ರಚಾರ ಪಡೆಯಲಿಕ್ಕೆ ಈ ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರಲಿಲ್ಲ. ನಾನು ಹೋದಂಥ ಪ್ರದೇಶಗಳ ಪರಿಸ್ಥಿತಿಯನ್ನು ನೋಡಿ ಇರತಕ್ಕಂಥ ವಾಸ್ತವಾಂಶದ ಬಗ್ಗೆ ನಿಮ್ಮ ಗಮನವನ್ನು ಸೆಳೆದಿದ್ದೇನೆ. ಈ ಜಾಗದಲ್ಲಿ ಕುಳಿತು ಕೆಲಸ ಮಾಡಬೇಕೆಂದರೆ ಅದು ನನ್ನ ಕರ್ತವ್ಯ ಅಷ್ಟೆ. ಅದರಿಂದ ನಮ್ಮ ಮುಖ್ಯಮಂತ್ರಿಗಳಿಗೆ ವಿರೋಧ ಪಕ್ಷಗಳವರು ಹೇಳಿದಾಗ ನಾವು ಬಾಯಿಚಪಲಕ್ಕೆ ಹೇಳುತ್ತೇವೆ ಎನ್ನತಕ್ಕಂಥ ಭಾವನೆ ತಮೆ ಬೇಡ. ಕೃಷಿ ಮಂತ್ರಿಗಳು ತುಮಕೂರಿಗೆ ಹೋಗಿದ್ದರು. ಅಲ್ಲಿ ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. Krishnabyregowda takes

officials to task. Minister of State for Agriculture Krishnabyregowda on Friday took officials to task for not giving correct report to the Govt. regarding draught in Tumkur Distict. ಇದು ನಮ್ಮ ಗೌರವಾನ್ವಿತ ಕೃಷಿ ಸಚಿವರು ಮಾಧ್ಯಮಗಳ ಮುಂದೆ ಅಧಿಕಾರಿಗಳ ಬಗ್ಗೆ ಹೇಳಿರುವುದನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ. ನಾನು ಬೀದರ್ ಜಿಲ್ಲೆಯ ಜಿಲಾಧಿಕಾರಿಗಳಿಗೆ ಫೋನ್ ಮಾಡಿದ್ದೆ, ಬೀದರ್ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಅತ್ಯಂತ ದೊಡ್ಡ ಮಟ್ಟದ ಅನಾಹುತವಾಗಿದೆ. ಫಲವತ್ತಾದ ಭಮಿಗಳು ಏನಿವೆ ಆ ಭೂಮಿಗಳಿಗೆ ಕೆಲವು ಕೆರೆಕಟ್ಟೆಗಳು ಒಡೆದು ಹೋಗಿ ಪ್ರವಾಹವಾಗಿ ನೀರು ನುಗ್ಗಿತು ಆ ಗುಡ್ಡಗಳಲ್ಲಿರುವಂಥ ಕಲ್ಲುಗಳು ಬಂದು ರೈತನ ಜಮೀನಿನಲ್ಲಿ ತುಂಬಿ ನಿಂತಿದೆ. ಆ ರೈತ ಕಲ್ಲುಗಳನ್ನು ತೆಗೆದು ಹಾಕಿ ಆ ಭೂಮಿಯನ್ನು ಫಲವತ್ತತೆಗೆ ತರಬೇಕಾದರೆ ಒಂದು ಎಕರೆಗೆ 50 ಸಾವಿರ ರೂ. ಗಳಿಂದ 01 ಲಕ್ಷ ರೂ. ಗಳು ಬೇಕು. ನಾನು ಅಲ್ಲಿಗೆ ಹೋಗಿ ಆ ಪರಿಸ್ಥಿತಿಗಳನ್ನು ನೋಡಿದ್ದೇನೆ. ಕಳೆದವಾರ ಬೀದರ್ ಜಿಲ್ಲಾಧಿಕಾರಿಗೆ ಕೇಳಿದೆ. ಆ ರೈತನಿಗೆ ಎಷ್ಟು ಪರಿಹಾರ ಕೊಟ್ಟಿದ್ದೀರೆಂದು ಕೇಳಿದೆ. ಅವರು ಸರ್ಕಾರಕ್ಕೆ ಗಮನ ಸೆಳೆದಿದ್ದೇವೆಂದು ಹೇಳಿದರು. 18 ಸಾವಿರ ರೂ. ಗಳನ್ನು ಕೊಡಬೇಕೆಂದು ಮನವಿ ಮಾಡಿದ್ದೇವೆ ಮತ್ತು ಕೇಂದ್ರ ಸರ್ಕಾರದಿಂದ ನೆರವು ತೆಗೆದುಕೊಂಡು ಕನಿಷ್ಠ 25 ಸಾವಿರ ರೂ. ಗಳನ್ನಾದರೂ ಕೊಡಬೇಕೆಂದು ಒಂದು ರಿಪೋರ್ಟ್‌ನ್ನು ಕಳುಹಿಸಿದ್ದೇವೆಂದು ಹೇಳಿದರು. ನಾನು ಹೋದವಾರ ಅವರನ್ನು ಕೇಳಿದೆ, ಈಗಾಗಲೇ 8 ತಿಂಗಳಾಗಿದೆ. ಈ ವರ್ಷ ಮತ್ತೆ ರೈತ ಬೆಳೆ ಬೆಳೆಯಲಿಕ್ಕೆ ಭೂಮಿ ರೆಡಿ ಮಾಡಿಕೊಳ್ಳಬೇಕು. ಅವನಿಗೆ 1100–1200 ರೂ. ಗಳನ್ನು ಕೊಟ್ಟಿದ್ದೀರಿ. ರಾಯಚೂರು ಜಿಲ್ಲೆಯಲ್ಲಿ ಹಲವಾರು ಕಡೆ ಮನೆಗಳು ಬಿದ್ದಿರುವುದನ್ನು ನೋಡಿದೆ. ಮುಖ್ಯಮಂತ್ರಿಗಳು ಅಲ್ಲಿಗೆ ಭೇಟಿ ಕೊಟ್ಟಿದ್ದರು. 1400 ರೂ. ಗಳ ಚೆಕ್ ಕೊಟ್ಟಿದ್ದೀರಿ. ಅವನು ಅದನ್ನು ಬ್ಯಾಂಕಿಗೆ ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಜನಧನ್ ಯೋಜನೆ ಬಂದಿರುವುದರಿಂದ ಒಂದು ಅಕೌಂಟ್ ಮಾಡಿಕೊಂಡಿರುವುದರಿಂದ ಅದನ್ನೂ ಹಾಕಿಕೊಂಡು ಹಣ ತೆಗೆದುಕೊಳ್ಳಬಹುದೇನೋ ಗೊತ್ತಿಲ್ಲ. ಬಿದ್ದು ಹೋಗಿರುವ ಮನೆಗಳಿಗೆ ನೀವು

1,400 ರೂ. ಗಳ ಚೆಕ್ ಕೊಟ್ಟರೆ ಮನೆ ಎಲ್ಲಿಂದ ರಿಪೇರಿ ಮಾಡಿಕೊಳ್ಳುತ್ತಾರೆ. ಇಲ್ಲಿಯವರೆಗೆ ನೀವು ಎಷ್ಟು ಹಣ ಬಿಡುಗಡೆ ಮಾಡಿದಿರಿ. ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ವಾಸ್ತವಾಂಶ ಏನಿದೆ, ಇವತ್ತು ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡತಕ್ಕಂಥ ಸನಿವೇಶದಲ್ಲಿ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯ ಬಗ್ಗೆ ಏನು ಹೇಳಿದ್ದೀರಿ. ಹೌದು, ನಮ್ಮ ರಾಜ್ಯ ತೋಟಗಾರಿಕೆ ಬೆಳೆ ಬೆಳೆಯತಕ್ಕಂಥ ಒಬ್ಬ ರೈತನಿಗೆ ಉತ್ತಮವಾದಂಥ ಸೌಲಭ್ಯಗಳು ದೊರಕಿದರೆ ಆ ಪ್ರಕೃತಿಯ ಸಹಕಾರ ದೊರಕಿದರೆ ಬಹುಶಃ ಇವತ್ತು ದೇಶಕ್ಕೆ ಮಾದರಿಯಾಗತಕ್ಕಂಥ ರೀತಿಯಲ್ಲಿ ಮೊದಲನೆಯ ಸ್ಥಾನದಲ್ಲಿ ನಮ್ಮ ರೈತ ನಿಲ್ಲಬಹುದು. ಆದರೆ ಇವತ್ತು ಆ ರೈತ ಆರ್ಥಿಕ ಸಂಕಷ್ಟಕ್ಕೆ ಏನು ಒಳಗಾಗಿದ್ದಾನೆ, ಪುನಃ ಮತ್ತೆ ಆ ದ್ರಾಕ್ಷಿ ಗಿಡಗಳು ಸಂಪೂರ್ಣ ಏನು ನಾಶವಾಗಿವೆ, ಅವನು ಬೇರೆ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಎಕರೆಗೆ ಬಹುಶಃ ಒಂದು ಲಕ್ಷ ರೂ. ಗಳು, ಒಂದೂವರೆ ಲಕ್ಷ ರೂ. ಗಳನ್ನು ಖರ್ಚು ಮಾಡಿಕೊಂಡಿರುತ್ತಾರೆ. ಕೆಲವು ಭಾಗದಲ್ಲಿ ನೀರು ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಪುನಃ ಅವರಿಗೆ ಪುನಃಶ್ಚೇತನ ನಿರ್ಮಾಣ ಮಾಡುವುದಕ್ಕೆ, ಬಾಡಿಗೆಗೆ ಉಪಕರಣಗಳನ್ನು ತೆಗೆದುಕೊಳ್ಳುವುದಕ್ಕೆ ನೀವು 500 ಕೋಟಿ ರೂ. ಗಳನ್ನು ಮೀಸಲಿಟ್ಟಿದ್ದೀರಿ. ಇದರಲ್ಲಿ ನೀವು ಆ ರೈತರಿಗೆ ಪ್ರೋತ್ಸಾಹ ಕೊಡಲು ಸಾಧ್ಯವೇ? ನಿಮ್ಮ ಕೃಷಿ ಭಾಗ್ಯದಲ್ಲಿ ಬಹುಶಃ ಒಂದೊಂದು ತಾಲ್ಲೂಕಿಗೆ 100-200 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳುತ್ತೀರ. ಈಗ 400 ಜನ. ನಾವು ಫಲಾನುಭವಿಗಳನ್ನು ಆಯ್ಕೆ ಮಾಡಬೇಕಲ್ಲಾ, ಆಯ್ಕೆ ಮಾಡಬೇಕಾದರೆ ನಾವು ಜನರ ವಿರೋಧವನ್ನು ಕಟ್ಟಿಕೊಳ್ಳಬೇಕು. ಲಾಟರಿ ಎತ್ತಬೇಕು. ಆದರೂ ರೈತ ಎಲ್ಲಾ ಶಾಸಕರಿಗೆ pressure ಹಾಕುತ್ತಾರೆ. ಇವತ್ತು ಗಂಗಾ ಕಲ್ಯಾಣ ಯೋಜನೆ ಇರಬಹುದು, ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೊಡುವಂತಹ ಫಲಾನುಭವಿಗಳ ಸಂಖ್ಯೆ ಇದೆಯಲ್ಲಾ, ಅರ್ಜಿಗಳನ್ನು ಏನು ಕೊಡುತ್ತಾರೆ, ಬೇರೆ ಬೇರೆ ಇಲಾಖೆಯಿಂದ ಕ್ರೋಢೀಕರಿಸಿ ಸಮಾಜ ಕಲ್ಯಾಣ ಇಲಾಖೆಯಿಂದ 15,000 ಕೋಟಿ ರೂ. ಗಳನ್ನು ಖರ್ಚು ಮಾಡುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಇಲ್ಲಿಯವರೆಗೂ ಅದು ಎಷ್ಟು ಹಣ

ಬಿಡುಗಡೆಯಾಗಿದೆ ನನಗೆ ಗೊತ್ತಿಲ್ಲ. ಮಾಹಿತಿಯನ್ನು ತೆಗೆದುಕೊಂಡು ಬಂದು ಮುಂದಿನ ಬಜೆಟ್ ಅಧಿವೇಶನದಲ್ಲಿ ಅದರ ಬಗ್ಗೆ ಗಮನಸೆಳೆಯಲು ಪ್ರಯತ್ನಪಡುತ್ತೇನೆ. ಇವತ್ತು ನಾನು ಸರ್ಕಾರಕ್ಕೆ ಏತಕ್ಕೆ ಮನವಿ ಮಾಡುತ್ತಿದ್ದೇನೆ ಎಂದರೆ, ಮಾನ್ಯ ರುದ್ರೇಶಗೌಡರು ನಮ್ಮ ರೈತರಿಗೆ 2,000 ಕೋಟಿ ರೂ. ಗಳ ಬೆಂಬಲ ಬೆಲೆಯನ್ನು ನೀಡಿದ್ದೇವೆ ಎಂದು ಹೇಳಿದರು. ಅದರಿಂದ ಇವತ್ತು ಏನು ರೈತರ ಬಾಳನ್ನು ಉತ್ತಮ ಪರಿಸ್ಥಿತಿಗೆ ತಂದಿದ್ದೇವಾ? ಆಗಿದೆಯೇ? ಇವತ್ತು ಕೃಷಿ ಬೆಲೆ ಆಯೋಗದ್ದು ಮಾರುಕಟ್ಟೆಯ ನೀತಿಯನ್ನು ಅನುಷ್ಠಾನಗೊಳಿಸಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಅವೆಲ್ಲವನ್ನೂ ನಾನು ಸುದೀರ್ಘವಾಗಿ ಚರ್ಚೆ ಮಾಡುವುದಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿವಯರೇ ನಮ್ಮನ್ನೆಲ್ಲಾ ರೇಗಿಸಿದರು. ತಾವು ಮೊದಲನೆ ಬಾರಿ ಇಲಿ ಬಜೆಟ್ ಮಂಡನೆ ಮಾಡಬೇಕಾದರೆ, ಅನ್ನಭಾಗ್ಯ ಯೋಜನೆ ಬಗ್ಗೆ ಹೇಳುವಾಗ 'ನಿಮ್ಮ ಕಾಲದಲ್ಲಿ ತಲಾವಾರು ಅಕ್ಕಿ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೀರಿ. ನಾನು ಈಗ ಈ ರಾಜ್ಯದ ಯಾವುದೇ ಬಡ ಕುಟುಂಬಗಳು ಹಸಿವೆಯಲ್ಲಿರಬಾರದು ಎಂಬ ತೀರ್ಮಾನದಿಂದ ತಲಾವಾರು ಪದ್ಧತಿಯನ್ನು ತೆಗೆದುಹಾಕಿ 30 ಕೆ.ಜಿ. ಅಕ್ಕಿಯನ್ನು ಎಲ್ಲಾ BPL card holders ಗೆ ಕೊಡುವಂತಹ ನಿರ್ಧಾರ ಮಾಡಿದ್ದೇವೆ' ಎನ್ನುವ ಮಾತನ್ನು ಹೇಳಿದಿರಿ. ಆ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಮಹದೇವಪ್ರಸಾದ್ ಆಹಾರ ಇಲಾಖೆಯ ಸಚಿವರಾಗಿದ್ದರು. ಆಗಲೇ ನೀವುಗಳೇ ತಲಾವಾರು ತರಬೇಕೆಂದು ನಿರ್ಧಾರ ಮಾಡಿಕೊಂಡಿದ್ದೀರಿ. ನಮ್ಮ ಕಾಲದಲ್ಲಿ ಅದನ್ನು implement ಮಾಡಿಕೊಂಡಿದ್ದು, ಈಗ ತಾವು ರಾಜ್ಯಪಾಲರ ಭಾಷಣದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಪ್ರತಿ ಕೆ.ಜಿ. ಗೆ ಒಂದು ರೂಪಾಯಿಯಂತೆ ಕನಿಷ್ಟ 10 ಕೆ.ಜಿ. ಹಾಗೂ ಗರಿಷ್ಠ 30 ಕೆ.ಜಿ. ಆಹಾರಧಾನ್ಯಗಳನ್ನು ಪ್ರತಿ ಕುಟುಂಬಕ್ಕೆ ಸದಸ್ಯರ ಸಂಖ್ಯೆಯ ಆಧಾರದ ಮೇಲೆ ವಿತರಿಸಲಾಗುತ್ತದೆ ಎಂದು ಹೇಳಿದ್ದೀರಿ. ಈಗ ನೀವು ಏನು ಮಾಡಿದ್ದೀರಿ? ಇಷ್ಟು ಅಕ್ಕಿ ಬೇಡ ಜಾಸ್ತಿಯಾಯಿತು ಎಂದು ಬಡ ರೈತರೇ ಹೇಳಿದ್ದಾ? ಏಕೆಂದರೆ, ಆ ಭಾಗದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರೇ ನಮ್ಮನ್ನು ಟೀಕೆ ಮಾಡಿದರು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಕುಮಾರಸ್ವಾಮಿಯವರೆ, ಒಬ್ಬರಿದ್ದರೆ 10 ಕೆ.ಜಿ., ಇಬ್ಬರು ಇದ್ದರೆ 20 ಕೆ.ಜಿ., ಇಬ್ಬರಿಗಿಂತ ಜಾಸ್ತಿ ಇದ್ದರ 30 ಕೆ.ಜಿ., ಎಂದು ಹೇಳಿರುವಂಥದ್ದು. ಕನಿಷ್ಠ 10 ಕೆ.ಜಿ. ಗರಿಷ್ಠ 30 ಕೆ.ಜಿ. ಎಂದು ಅಲ್ಲ. ಗರಿಷ್ಠ 30 ಕೆ.ಜಿ. ಇದ್ದರೂ ಸಹ ಬಿಪಿಎಲ್ ಕಾರ್ಡ್‌ಗೆ 30 ಕೆ.ಜಿ. ಇರುತ್ತದೆ. ಒಂದು ಕುಟುಂಬದಲ್ಲಿ ಒಬ್ಬರೇ ಒಬ್ಬರು ಇದ್ದರೆ 10 ಕೆ.ಜಿ. ಕೊಡುವುದು. ಅದರಲ್ಲಿ ಗೋಧಿ ಮತ್ತು ಅಕ್ಕಿ ಎರಡನ್ನೂ ಸೇರಿಸಿ ಕೊಡುತ್ತಾರೆ. ಇಬ್ಬರು ಇದ್ದರೆ 20 ಕೆ.ಜಿ. ಕೊಡುತ್ತಾರೆ. ಇಬ್ಬರಿಗಿಂಥ ಜಾಸ್ತಿ ಇದ್ದರೆ ಗರಿಷ್ಠ 30 ಕೆ.ಜಿ. ಕೊಡುತ್ತಾರೆ.

ಶ್ರೀ **ಹೆಚ್.ಡಿ. ಕುಮಾರಸ್ವಾಮಿ**:- ನನಗೆ ಗೊತ್ತಾಯಿತು. ತಾವು ಮೊದಲನೆ ಬಜೆಟ್‌ನಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನ ಸಮ್ಮಿಶ್ರ ಸರ್ಕಾರದಲ್ಲಿ ತಲಾವಾರು ಪದ್ಧತಿ ತಂದಿದ್ದೀರಿ ಎಂದು ಹೇಳಿದಿರಿ. ಅದಕ್ಕೆ ನಿಮಗೆ ನೆನಪಿಸಿಕೊಟ್ಟೆ ಅಷ್ಟೆ. ಈಗ ನೀವು ತಂದಿರುವುದೂ ತಲಾವಾರು ಪದ್ಧತಿಯೇ. ಕೈಗಾರಿಕೆ ಬಗ್ಗೆ ಮುಂದೆ ಬಜೆಟ್ ಅಧಿವೇಶನದಲ್ಲಿ ಮಾತನಾಡೋಣ. ಏಕೆಂದರೆ ಆಗಲೇ 4.00 ಗಂಟೆ ಆಗಿದೆ. ಬೆಂಗಳೂರು ನಗರ ಜಿಲ್ಲೆಗೆ ಎರಡು ವಿಶೇಷ ಜಿಲ್ಲಾಧಿಕಾರಿಗಳ ಹುದ್ದೆಗಳನ್ನು ಸೃಜಿಸಲಾಗಿದೆ. ಸರ್ಕಾರಿ ಭೂಮಿ ಒತ್ತುವರಿ ನಿಷೇಧ ಕಾಯ್ದೆ 2011 ರ ಅಡಿಯಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇವತ್ತು ನಾನು ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ, ಬೆಂಗಳೂರಿನಲ್ಲಿ ಅಲ್ಲೊಂದು ಇಲ್ಲೊಂದು ಭೂ ಒತ್ತುವರಿ ತೆರವುಗೊಳಿಸುವಂತಹ ಕೆಲಸಗಳು ಆಗುತ್ತಿವೆ. ನನಗೆ ಬಂದಿರುವ ಮಾಹಿತಿ ಪ್ರಕಾರ, ಈ ಕಾಡು ಪ್ರಾಣಿಗಳನ್ನು ಊರಿನೊಳಗೆ ಬರದಂತೆ ಅರಣ್ಯ ಇಲಾಖೆಯವರು trench ಹೊಡೆಯುತ್ತಾರಲ್ಲಾ, ಆ ರೀತಿ ಯಾರು ಭೂಮಿಯನ್ನು ಒತ್ತುವರಿಗೊಳಿಸುತ್ತಿದ್ದಾರೆ. ಅದಕ್ಕೆ trench ಹೊಡೆಯುತ್ತಿದ್ದಾರೆ. ಇವತ್ತು ಇವರು ಭೂ ಒತ್ತುವರಿ ಏನು ಮಾಡುತ್ತಾರೆ, ನಾನು ಕೆಲವು ಫೋಟೋಗಳನ್ನು ಇಲ್ಲಿ ತರಲಿಲ್ಲ. ಬಡವರು ಯಾರು ಇರುತ್ತಾರೆ ಅವರು ಕಟ್ಟಿರುವ ಸಣ್ಣಪುಟ್ಟ ಕಟ್ಟಡವನ್ನು ಒಡೆದುಹಾಕುತ್ತಾರೆ. ದೊಡ್ಡ ದೊಡ್ಡ ಕಟ್ಟಡಗಳನ್ನು ಹಾಗೆಯೇ ಬಿಟ್ಟಿರುತ್ತಾರೆ. 1995 ರಲ್ಲಿ ಒಂದು

ತೀರ್ಮಾನವಾಯಿತು. ನಾನು ಕಡತವನ್ನು ಇಲ್ಲಿ ತಂದಿಲ್ಲ. ಮುಂದಿನ ಬಜೆಟ್ ಅಧಿವೇಶನದಲ್ಲಿ ಎಲ್ಲಾ detail ಆಗಿ ಹೇಳುತ್ತೇನೆ. Special D.C. ಯವರು ಎಲ್ಲಾ ರೀತಿಯಲ್ಲಿ ನೋಟಿಸ್ ಕೊಟ್ಟು ತನಿಖೆ ನಡೆಸಿ, ಬಾಣಸವಾಡಿ ಎಂದು ಒಂದು ಭಾಗ, ನಾವು ಸರ್ಕಾರಿ ದಾಖಲೆಯನ್ನು ತೆಗೆದು ನೋಡಿದರೆ, 47 ಎಕರೆ ಕೆರೆ ಅಚ್ಚುಕಟ್ಟು ಪ್ರದೇಶ ಎಂದು ಇದೆ. ಒಂದು ಭಾಗದಲ್ಲಿ ಬಿಡಿಎ ಅಧಿಕಾರಿಗಳು ಬಡಾವಣೆಯನ್ನು ಮಾಡಿದ್ದಾರೆ. ಇನ್ನೂ 17 ಎಕರೆ, ಭೂ ಕಬಳಿಕೆ ಆಗಿದೆ. ಈಗಾಗಲೇ ಒಂದು ಬಾರಿ ಅದನ್ನು ವಶಪಡಿಸಿಕೊಂಡಿದ್ದೇವೆ ಎಂದು ತೋರಿಸುತ್ತಾರೆ. ಮತ್ತೆ ಕೋರ್ಟ್‌ಗೆ ಹೋಗಿ ಸ್ಟೇ ಅನ್ನು ತೆಗೆದುಕೊಂಡು ಬರುವುದು. ಬೆಳಿಗ್ಗೆ ನಾನು ಹೇಳಿದೆ, ಇವತ್ತು ನಿಜಕ್ಕೂ ದೇವರೇ ಕಾಪಾಡಬೇಕು. ಈ ದೇಶಕ್ಕೆ ಆ ಪುಣ್ಯಾತ್ಮ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು 3 constitutional ವ್ಯವಸ್ಥೆಗಳನ್ನು ಕೊಟ್ಟರು, ಏಕೆಂದರೆ ನಾವು ಅವರನ್ನು ಟೀಕೆ ಮಾಡುವ ಹಾಗೆ ಇಲ್ಲ. At least ನಾವು ಜನಪ್ರತನಿಧಿಗಳಾದರೂ ಐದು ವರ್ಷಕ್ಕೆ ಒಮ್ಮೆಯಾದರೂ ಪರೀಕ್ಷೆಗೆ ಒಳಗಾಗಬೇಕು. ಇನ್ನು ಆ ಭಾಗದಲ್ಲಿ ಕುಳಿತಿರುವ ಸರ್ಕಾರದ ಅಧಿಕಾರಿಗಳು ಒಂದು ಬಾರಿ ಅವರು ಬಂದರೆ ಆಯಿತು. ಅವರನ್ನು ಯಾರೂ ಕೇಳುವುದಿಲ್ಲ. ಇನ್ನು ಕೆಂಪು ಬಿಲ್ಡಿಂಗ್‌ನಲ್ಲಿದ್ದಾರಲ್ಲಾ ಅವರು ಒಂದು ಬಾರಿ ಗೌರವಾನ್ವಿತ ಪೀಠದಲ್ಲಿ ಕುಳಿತುಕೊಂಡರೆ ಅವರನ್ನೂ ಯಾರು ಕೇಳುವ ಹಾಗೆ ಇಲ್ಲ. ನಾವು ಮಾತ್ರ ಎಲ್ಲಾ ಟೀಕೆ–ಟಿಪ್ಪಣಿಗೆ ಒಳಗಾಗಬೇಕು. ಏನು ಮಾಡಿದರೂ ಈ ರಾಜಕಾರಣಿಗಳೆ. ಎಲ್ಲಾ ಇವರೇ ಕಳ್ಳರು. ಎಲ್ಲಾ ಇವರೇ ಪ್ರೋತ್ಸಾಹ ಕೊಡುವುದು, ಇದು ನಾವು.

ಶ್ರೀ ಸಿ.ಟಿ. ರವಿ:– ಮಾನ್ಯ ಕುಮಾರಸ್ವಾಮಿಯವರೆ, ಈಗ ಅಲ್ಲಿ ಕುಳಿತಿರುವ ಎರಡು ಜನರು, ಕೆಂಪು ಬಿಲ್ಡಿಂಗ್‌ನವರು, ಅಲ್ಲಿ ಒಬ್ಬರು ಒಬ್ಬರನ್ನು ಬಿಟ್ಟುಕೊಡುವುದಿಲ್ಲ. ಇಲ್ಲಿ ನಾವು ಒಬ್ಬರನ್ನೊಬ್ಬರನ್ನು ಬಿಡುವುದಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಈಗ ನಾವು ಯಾವುದೋ prestige ಎಂದು ಎಲ್ಲೋ ಒಂದು ಕಡೆ ಅವರ ಕಾಲನ್ನು ನಾವು ಎಳೆಯುವುದಕ್ಕೆ ಹೋಗುತ್ತೇವೆ. ನಮ್ಮ ಕಾಲನ್ನು ಅವರು ಎಳೆಯುವುದಕ್ಕೆ ನೋಡುತ್ತಾರೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಐದು ಎಕರೆ revenue land, 4 ಎಕರೆ forest land ಅನ್ನು ಕೊಡುವಂತೆ ಹೈಕೋರ್ಟ್‌ನಲ್ಲಿ ಆಗಿದೆ. ಹೈಕೋರ್ಟ್‌ನೇ ಹೇಳಿದೆಯಲ್ಲಾ, 5 ಎಕರೆ revenue land, 3 ಎಕರೆ forest land ಎಂದು.

ಉಪಾಧ್ಯಕ್ಷರು:– ಮಾನ್ಯ ರುದ್ರೇಶ್‌ಗೌಡರೆ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಲ್ಲಿ ಶ್ರೀಮಂತರಿಗೆ ಯಾರಿಗೂ ನೋಟಿಸ್ ಕೊಟ್ಟಿಲ್ಲ. ಬಾಲಸುಬ್ರಹ್ಮಣಿಯನ್ ವರದಿ ಎಂದು ಹೇಳಿದರಲ್ಲಾ, form 52, 53 ಯಾವುದರಲ್ಲೋ ಅರ್ಜಿ ಹಾಕಿಕೊಂಡಿದ್ದರಲ್ಲಾ ಅವೆಲ್ಲಾ ಡಿ.ಸಿ. ಆಫೀಸ್‌ನಲ್ಲಿತ್ತು. ಆ ಡಿ.ಸಿ. ಆಫೀಸ್‌ಗೆ ಹೋದರು ಅರ್ಜಿಗಳನ್ನು ನೋಡಿದರು. ಆ ಲೆಕ್ಕ ತೆಗೆದುಕೊಂಡು ಬಂದು ಇಲ್ಲಿ ಕೊಟ್ಟರು. ಇವರು ಯಾರೋ ಹೋಗಿ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿಕೊಂಡರು. ಒತ್ತುವರಿ ತೆರವುಗೊಳಿಸಿ ಎಂದು ಹೇಳುತ್ತಾರೆ. ಅಲ್ಲಿ 1,000 ಎಕರೆ, 1,500 ಎಕರೆ ಇಟ್ಟುಕೊಂಡಿದ್ದಾರಲ್ಲಾ ಅವರಿಗೆ ಯಾರಿಗೂ ಸಮಸ್ಯೆ ಇಲ್ಲ. ಎರಡು ಎಕರೆ, ಮೂರು ಎಕರೆ, 30 ಗುಂಟೆ ಹೊಂದಿರುವವರಿಗೆ ಸಮಸ್ಯೆ ಇರುವುದು. ಇವರಿಗೆ ನೋಟಿಸ್ ಕೊಡುವುದು. ಬೆಂಗಳೂರಿನಲ್ಲಿ ನಡೆಯುತ್ತಿದೆಯಲ್ಲಾ ಗುಡಿಸಲು ಹಾಕಿಕೊಂಡು ಟೈರ್ ಅಂಗಡಿಯೋ ಯಾವುದೋ ಶೀಟ್ ಹಾಕಿಕೊಂಡಿರುತ್ತಾರಲ್ಲಾ ಅದನ್ನು ಹೋಗಿ ಒಡೆಯುತ್ತಾರೆ. ಅದು ಒಡೆಯುವುದಕ್ಕೆ ಸುಲಭವಲ್ಲ. ಹಳ್ಳಿ ಕಡೆ ಒಂದು ಪರಿಸ್ಥಿತಿಯಾದರೆ ಇಲ್ಲಿ ಇನ್ನೊಂದು ರೀತಿಯ ಪರಿಸ್ಥಿತಿ. ವಿಶೇಷ ಭೂಸ್ವಾಧೀನಾಧಿಕಾರಿಗಳೆಂದು ಇಬ್ಬರನ್ನು ಹಾಕಿಕೊಂಡಿದ್ದೀರಿ. ಇಬ್ಬರು ಜಿಲ್ಲಾಧಿಕಾರಿಗಳನ್ನು ಹಾಕಿಕೊಂಡರೂ ಸಹ ಇವರುಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆಂದು ಇಲ್ಲಿಯವರೆವಿಗೆ ಅವರುಗಳು ನಡೆದುಕೊಂಡು ಬಂದಿರುವಂತಹ ನಡವಳಿಕೆಗಳನ್ನು ನೋಡಿದರೆ ಬಹಶಃ ನನಗಂತೂ ಎಲ್ಲೋ ಒಂದು ಕಡೆಯಲ್ಲಿ ವಿಶ್ವಾಸದ ಕೊರತೆ ಇದೆ ಎಂದು ಅನ್ನಿಸುತ್ತೆ. ಇವತ್ತು ಬೆಂಗಳೂರು ನಗರದಲ್ಲಿ

ನಡೆದಿರುವಂತಹ ಹಲವಾರು ಅಕ್ರಮಗಳು ಏನಿವೆ, ಅದಕ್ಕೆ ಯಾವ ಯಾವ ಸರ್ಕಾರಗಳು ಕಾರಣ ಎಂದು ದೋಷ ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಆಗಿರುವಂತಹದ್ದನ್ನು ಸರಿಪಡಿಸುವುದಕ್ಕೆ ಮಾನ್ಯ ಕಾನೂನು ಸಚಿವರಾದ ಶ್ರೀ ಟಿ.ಬಿ. ಜಯಚಂದ್ರರವರು ಈ ಬಗ್ಗೆ ಬಿಲ್ ಅನ್ನು ತಂದು ಬಹಳ defend ಮಡಿಕೊಳ್ಳುತ್ತಾ ಹೇಳಿದರು. ಇಲ್ಲಿಯವರೆಗೆ ಆಗಿರುವಂತಹ ಅನಾಹುತಗಳು ಇದೆಯಲ್ಲಾ, ಇದನ್ನು ನಾವು ಯಾವ ರೀತಿಯಲ್ಲಿ ಸರಿಪಡಿಸಿಕೊಳ್ಳಬೇಕು. ನಮ್ಮ ಕಾನೂನನ್ನು ಯಾವ ಅಧಿಕಾರಿಗಳು ಕೇಳುವದೇ ಇಲ್ಲ. ಇದು ಅವರಿಷ್ಟಬಂದ ಹಾಗೆ ಮಾಡಿರುವಂತಹ ಕಾನೂನಗಳು ಆಗಿವೆ. ಈ ರಾಜ್ಯದ ಜನತೆಗೆ ತಂದಿರುವಂತಹ ಕಾನೂನುಗಳಲ್ಲ. ಈಗ ನೀವು 79 (A) ಮತ್ತು 79 (B) ಕಾನೂನನ್ನು ತಂದಿದ್ದೀರಲ್ಲಾ, ಇದರಿಂದ ಯಾರಿಗೆ ಉಪಯೋಗವಾಗಿದೆ? ಅವನು ಯಾರೋ Assistant Commissioner ಗೆ ದುಡ್ಡು ಮಾಡಿಕೊಳ್ಳುವುದಕ್ಕೆ ನಾವು ಮಾಡಿಕೊಟ್ಟಿರುವ ಕಾನೂನಾಗಿದೆ. ಇದು ವಾಸ್ತವಾಂಶವಾಗಿದೆ, ಯಾವುದೋ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಶ್ರೀ ಕೆ.ಆರ್. ರಮೇಶ್ ಕುಮಾರ್‌ರವರು ಹೇಳಿದರು. ದುಡ್ಡು ಮಾಡುವಂತಹ ವಿಷಯದಲ್ಲಿ ನೀವು ಅಧಿಕಾರಿಗಳನ್ನು ಸೇರಿಸಿ ಹೇಳುತ್ತಿದ್ದೀರೋ ಅಥವಾ ಯಾರನ್ನು ಸೇರಿಸಿ ಹೇಳುತ್ತಿದ್ದೀರೋ? ಇಲ್ಲಿ ಏನಾಗುತ್ತಿದೆ ಎಂದರೆ, ರಾಜಕಾರಣಿಗಳಾದ ನಾವುಗಳು ದಾರಿತಪ್ಪಿಸಿ ದುಡ್ಡು ಮಾಡಿದರೂ ಕೂಡ ಆ ದುಡ್ಡು ರಾಜಕಾರಣಿಗಳ ಹತ್ತಿರ ಉಳಿಯುವುದಿಲ್ಲ. ಮತ್ತೆ ನಾವು ಅಲ್ಲಿಗೆ ಹೋಗಿ ಕೊಡಬೇಕು. Atleast ನಮ್ಮ ಹತ್ತಿರ ಬರುವಂತಹ ದುಡ್ಡಾದರೂ ಕೂಡ ಸಾರ್ವಜನಿಕರಿಗೆ ವಿನಿಯೋಗವಾಗುತ್ತದೆ. ನಮ್ಮ ಅಧಿಕಾರಿಗಳು ಮಾಡುತ್ತಾರಲ್ಲಾ ಆ ದುಡ್ಡು ಯಾರಿಗೂ ವಿನಿಯೋಗವಾಗುವುದಿಲ್ಲ ಅದು ಸದ್ವಿನಿಯೋಗವಾಗುವುದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅವರು retired ಆದ ಮೇಲೆ ಅವರುಗಳನ್ನು ಸಹ election ಗೆ ನಿಲ್ಲಿಸಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅವರು ಬಂದರೂ ಕೂಡ ದುಡ್ಡನ್ನು ಬಿಚ್ಚುವುದಿಲ್ಲ. ನೋಡಿ ಆ ಬಗ್ಗೆಯೂ experience ಆಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಕುಮಾರಸ್ವಾಮಿಯವರೆ ನೀವು ಎಲ್ಲಾ correct ಆಗಿ ಹೇಳುತ್ತಿದ್ದೀರಿ. ಕೆಂಪು ಬಿಲ್ಡಿಂಗ್‌ದು ಹೇಳಿದಿರಿ, ಇವರದು ಹೇಳಿದಿರಿ, ಇನ್ನು ಯಾವುದೋ ಮರೆತುಹೋದಂತೆ ಇದೆ. ಬೇಕೆಂದೇ ಬಿಡುತ್ತಿದ್ದಿರೋ ಏನೋ? ಆ ಕಡೆ ಕೆಲವರು ಇದ್ದಾರಲ್ಲ, ನೀವು ಅವರನ್ನು ಬೇಕಂತಲೇ ಬಿಡುತ್ತಿದ್ದೀರಾ? ಹೇಳಿ ಏನಂತೆ, ಅವರೂ ನಮ್ಮವರೇ ಅಲ್ಲವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಈಗಲೇ ನಾನು ಬಹಳ ಜನರನ್ನು ವಿರೋಧ ಹಾಕಿಕೊಂಡುಬಿಟ್ಟಿದ್ದೇನೆ. ಇವತ್ತು ನಾವು ಯಾವ ಒಂದು ಪರಿಸ್ಥಿತಿಯಲ್ಲಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಈಗಲೂ ಸಹ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ನಮ್ಮ ರೈತರ ವಿಷಯದಲ್ಲಿ ಕಾಲಹರಣ ಮಾಡಿಕೊಳ್ಳುವುದು ಬೇಡ. ಅದಕ್ಕಿಂತಲೂ ಪ್ರಮುಖವಾಗಿ ಇವತ್ತು ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಹೋದ ಬಾರಿ ಮಾನ್ಯ ರಮೇಶ್ ಕುಮಾರ್‌ರವರು ಬೆಂಗಳೂರು ನಗರದಲ್ಲಿ ಆ ಕೊಳಚೆ ನೀರು ಏನಿದೆ ಅದನ್ನಾದರೂ ಕೊಡಿ ನಾವು ಉಪಯೋಗಮಾಡಿಕೊಳ್ಳುತ್ತೇವೆ ಬದುಕುತ್ತೇವೆ ಎಂದು ಹೇಳಿದರು. ಆ ಮಾತುಗಳಲ್ಲಿ ಇರುವಂತಹ ನೋವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಇವತ್ತು ಯಾವುದೋ ಒಂದು project ಮಾಡಿಸುವುದಕ್ಕೆ ಪ್ರಯತ್ನಪಡುತ್ತಿದ್ದೀರಿ. ಆದರೆ ಆ project ಗೆ ಸಂಬಂಧಿಸಿದಂತೆ ಒಂದು ಸಮಯವನ್ನು ನಿಗಧಿಮಾಡಿಕೊಳ್ಳಿ. ಇವತ್ತು ಕಾಲಹರಣವನ್ನು ಮಾಡಿಕೊಂಡರೆ ಈಗ ಬಹಳ ಮಾನಸಿಕವಾಗಿ ಅತ್ಯಂತ ಕೆಟ್ಟಪರಿಸ್ಥಿತಿಯಲ್ಲಿದ್ದಾರೆ. ಇವತ್ತು ಕುಡಿಯುವ ನೀರಿನ ಸಮಸ್ಯೆಗಳು ಈ ಭಾಗದಲ್ಲಿ ಇದೆ. ಇಂತಹ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ನಾವು ಬೋರ್‌ವೆಲ್‌ಗಳ ಮುಖಾಂತರವೇ ಕುಡಿಯುವ ನೀರನ್ನು ಉಪಯೋಗ ಮಾಡುವಂತಹ ಪರಿಸ್ಥಿತಿಯಲ್ಲಿ ನಾವು ಯಾವ ರೀತಿಯಲ್ಲಿ ಆ

fluoride content ನಿಂದ ಆರೋಗ್ಯದ ತೊಂದರೆಗೆ ಒಳಗಾಗುವಂತಹ ಜನರಿಗೆ ವಿಷ ಏನು ಕೊಡುತ್ತಿದ್ದೇವೆ, ಎಲೆಮಲ್ಲಪ್ಪನಕೆರೆ, ವರ್ತೂರು ಕೆರೆ ಈ ಭಾಗದಲ್ಲಿ Tertiary Plant ಹಾಕಿಕೊಳ್ಳುವುದು ಒಳ್ಳೆಯದು. ಬೈರಮಂಗಲದು ಅಲ್ಲಿ ಶುರು ಆಗಿಬಿಟ್ಟಿದೆ. ಚನ್ನಪಟ್ಟಣದಲ್ಲಿ ಕೆರೆ ತುಂಬಿಸುತ್ತಿದ್ದಾರೆಂದು ಹೇಳಿದ್ದಾರೆ. ನಾವು ಹಿಂದೆ ಮಾಡಿರುವಂತಹ ಕೆಲಸವನ್ನು ಜನರು ಮರೆತುಬಿಟ್ಟಿದ್ದಾರೆ. ಬೈರಮಂಗಲದು ವೃಷಭಾವತಿಯಿಂದ ನೀರಾವರಿಯನ್ನು ತೆಗೆದುಕೊಂಡು ಬಾ ಎಂದು ನಾವು ದಿನ ಹಳ್ಳಿಕಡೆಗೆ ಹೋದರೆ ಅವರುಳು ಹೇಳುತ್ತಾರೆ. ಆ ನೀರನ್ನಾದರೂ ಕೊಡಿ ಎಂದು ಕೇಳುತ್ತಾರೆ. ಮೊನ್ನೆ ಚಿತ್ರಕಲಾ ಪರಿಷತ್ತಿನಲ್ಲಿ ಬೆಂಗಳೂರು ನಗರದ ವರ್ತೂರು ಕೆರೆಯಿಂದ ತಮಿಳುನಾಡಿಗೆ ಹೋಗತಕ್ಕಂತಹ ನೀರು, ಯಾರೋ ಒಬ್ಬ ನಾಗರೀಕನ ಬಗ್ಗೆ ನಾವು ನಿಜವಾಗಿಯೂ ಅಭಿನಂದಿಸಬೇಕು. ಅವನು ಸುಮಾರು 200 ರಿಂದ 300 ಕಿ.ಮೀ. ಹೋಗಿದ್ದಾನೆ. ಕೃಷ್ಣಗಿರಿ ಮತ್ತು ಧರ್ಮಪುಡಿ ಭಾಗದಲ್ಲಿ ಸುಮಾರು 250 ಕಿ.ಮೀ. ಭಾಗದಲ್ಲಿ ಮೂರು ಡ್ಯಾಂಗಳನ್ನು ಕಟ್ಟಿಕೊಂಡಿದ್ದಾರೆ. ನಾವು ಬೆಂಗಳೂರು ನಗರದಲ್ಲಿ ಉಪಯೋಗ ಮಾಡತಕ್ಕಂತಹ ನೀರು ಏನಿದೆ ಅಲ್ಲಿಗೆ ಹೋಗತಕ್ಕಂತಹ ನೀರಿನಲ್ಲಿ ಅವರುಗಳು ಮೂರು ಡ್ಯಾಂ ಅನ್ನು ಕಟ್ಟಿಕೊಂಡಿದ್ದಾರೆ. ಆ ಪುಣ್ಯಾತ್ಮರಿಗೆ ತಮಿಳುನಾಡಿನವರಿಗೆ ನಾವು ಮೇಕೆದಾಟಿನ ಹತ್ತಿರ ಒಂದು ಡ್ಯಾಂ ಕಟ್ಟಿಕೊಳ್ಳುತ್ತೇವೆಂದು ಹೇಳಿದರೆ ಆಗಲೇ ಒಂದು ಅರ್ಜಿಯನ್ನು ಹಾಕುತ್ತಾರೆ. ಅಲ್ಲಿ ಅವರುಗಳು ಮೂರು ಡ್ಯಾಂಗಳನ್ನು ಕಟ್ಟಿಕೊಂಡು ಅವರು ಬೆಳೆ ಬೆಳೆಯುವಂತಹ ಚಿತ್ರವನ್ನು ಸನ್ಮಾನ್ಯ ಉಪಾಧ್ಯಕ್ಷರೆ ತಾವು ನೋಡಿದರೆ ನಾನು ಬಹುಶಃ ತಮಗೆ ನಾಳೆ ತಲುಪಿಸುತ್ತೇನೆ. ಅವರು ನಮ್ಮ ಕೊಳಚೆ ನೀರನ್ನು ಉಪಯೋಗ ಮಾಡಿಕೊಂಡು ಸಂಪದ್ಭರಿತರಾಗಿದ್ದಾರೆ. ಅವರು ಅದರಲ್ಲಿಯೇ ಸ್ನಾನ ಮಾಡುತ್ತಾರೆ. ಆ ನೀರನ್ನೇ ಕುಡಿಯುವುದಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಬಹಳ ಉತ್ತಮವಾದ ರೀತಿಯಲ್ಲಿ ನಮ್ಮ ಕಣ್ಣನ್ನು ತೆರೆಸುವಂತಹ ಬೆಂಗಳೂರು ನಗರದ ಒಬ್ಬ ನಾಗರೀಕ ಮಾಡಿದ್ದಾನೆ. ಆ ಬಗ್ಗೆ ನಾನು ತಮಗೆ ಮಾಹಿತಿಗಳನ್ನು ಕೊಡುತ್ತೇನೆ. ಇವತ್ತು ನಮ್ಮನ್ನು ಯಾವ ರೀತಿಯಾಗಿ ಅಕ್ಕಪಕ್ಕದ ರಾಜ್ಯದವರು ನಾವು ಬದುಕುವುದಕ್ಕೆ ಒಂದು

ತೊಟ್ಟು ನೀರನ್ನು ಕೇಳಿದರೆ ಅದಕ್ಕೂ ಕಲ್ಲುಹಾಕುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆ ಪುಣ್ಯಾತ್ಮರಿಗೆ ಆ ಭಗವಂತನೆ ಬುದ್ಧಿಯನ್ನು ಕೊಡಬೇಕು. ಈ ಭಾಗದಲ್ಲಿರುವಂತಹ ಪರಿಸ್ಥಿತಿಯನ್ನು ನೋಡಿ ಆಗಲಾದರೂ ಸಹ ಅವರಿಗೆ ಮನವರಿಕೆಯಾಗಬಹುದೋ ಏನೋ ಗೊತ್ತಿಲ್ಲ ನನಗೆ. ಅವರ ಕಲ್ಲು ಹೃದಯ ಸರಿಯಾಗಬಹುದು. ಇವತ್ತು ನಾವು ಯಾವ ಒಂದು ಬೆಂಗಳೂರಿನಲ್ಲಿ ಉಪಯೋಗ ಮಾಡಿ ಬಿಡತಕ್ಕಂತಹ ನೀರನ್ನಾದರೂ ಕೊಡಪ್ಪಾ ಎನ್ನುವಂತಹ ಪರಿಸ್ಥಿತಿ ಕೆಲವು ಭಾಗದಲ್ಲಿ ಬಂದಿದ್ದೇವೆ. ಇವತ್ತು ಆ ವಿಷಯದಲ್ಲಿ ಸರ್ಕಾರವು ಎಷ್ಟು ಹಣವನ್ನಾದರೂ ಖರ್ಚು ಮಾಡಲಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ. ಬೇಕಾದರೆ ತಾವು 30 ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ಹೋಗಬೇಡಿ. ಸುಮ್ಮನೇ ನೀವು ಹೇಳಿರುವುದಕ್ಕಾಗಿ ನಾನು ಹೇಳಿದೆ ಅಷ್ಟೆ. ನೀವು 15 ಕೆ.ಜಿ. ಅಕ್ಕಿಯನ್ನು ಕೊಡಿ ಸಾಕು. ಅದರಿಂದ ಸುಮಾರು ಒಂದು-ಒಂದುವರೆ ಸಾವಿರ ಕೋಟಿ ರೂಪಾಯಿಗಳು ನಿಮಗೆ ಉಳಿಯಬಹುದು. ಆ ದುಡ್ಡನ್ನು ನಿಮ್ಮ ಕೋಲಾರ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಆ ಒಂದು ನೀರಿನ ಸೌಲಭ್ಯ ಕೊಡುವುದಕ್ಕೆ ಉಪಯೋಗ ಮಾಡಿಕೊಳ್ಳಿ. ನಾನು ಈ ಮಾತನ್ನು open ಆಗಿ ಹೇಳುತ್ತೇನೆ. ರಾಮನಗರದ್ದು ಹೇಳು ಎಂದರೆ ಹೇಳುತ್ತೇನೆ. ನಾವು ಯಾವ ಭಾಗದಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಅದರ ಕಡೆಗೆ ದಯವಿಟ್ಟು ಗಮನಕೊಡಿ ಎಂಬ ಮನವಿಯನ್ನು ಇವತ್ತು ಸರ್ಕಾರಕ್ಕೆ ವಿಶೇಷವಾಗಿ ಮಾಡುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು Tertiary Plant ಬಗ್ಗೆ ಗಮನ ಕೊಟ್ಟರೆ ಒಳ್ಳೆಯದು.

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, Tertiary Treatment Plant ಮಾಡಬೇಕೆಂದು DPR ಮಾಡುವ ಸಂಬಂಧ ಈಗಾಗಲೇ tender ಅನ್ನು ಕರೆದಿದ್ದೇವೆ. ಅದು ಪ್ರರಂಭವಾಗಿದೆ. ಮಾನ್ಯೆ ಮುಖ್ಯಮಂತ್ರಿಗಳೆ ವಿಶೇಷ ಗಮನಹರಿಸಿ ಆ ಭಾಗದ ಎಲ್ಲಾ ಶಾಸಕರು ಕೋಲಾರ, ಚಿಕ್ಕಬಳ್ಳಾಪುರ..................

ಶ್ರೀ ಹೆಚ್.ಸಿ. ಬಾಲಕೃಷ್ಣ:– ಕಳೆದ 10 ವರ್ಷಗಳಿಂದ ಮಾಡುತ್ತೇವೆಂದು ಹೇಳುತ್ತಲೇ ಬಂದಿದ್ದಾರೆ, ಆದರೆ ಏನೂ ಮಾಡಲಿಲ್ಲ. ನೀವು ಅದನ್ನು ಮಾಡಿದರೆ ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಶ್ರೀ ಶಿವರಾಜ್ ಎಸ್. ತಂಗಡಗಿ:– ಚಿಕ್ಕಬಳ್ಳಾಪುರ, ಕೋಲಾರ, ಎಲ್ಲೆಮಲ್ಲಪ್ಪನ ಕೆರೆ ಮತ್ತು ವರ್ತೂರು ಕೆರೆಯಿಂದ ತ್ಯಾಜ್ಯ ನೀರನ್ನು ಹೋಗಲಿಕ್ಕೆ Tertiary Treatment Plant ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳೆ interest ತೆಗೆದುಕೊಂಡಿದ್ದಾರೆ. ಅದಕ್ಕೆ ಈಗಾಗಲೇ tender ನ್ನು ಸಹ ಕರೆದಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಆ ಭಾಗಕ್ಕೆ ಮತ್ತು ಈ ಭಾಗಕ್ಕೆ ಎಂದು ಎರಡು ಭಾಗಕ್ಕೂ ಬಜೆಟ್‌ನಲ್ಲಿ ಇಷ್ಟು ಹಣವನ್ನು ಮೀಸಲಲಿಟ್ಟಿದ್ದೇವೆಂದು ಹೇಳಿ. ಅದು ಬಜೆಟ್‌ನಲ್ಲಿ ಪ್ರಕಟವಾಗಲಿ.

ಶ್ರೀ ಶಿವರಾಜ್ ಎಸ್. ತಂಗಡಗಿ:– DPR ಮಾಡಿದ ಮೇಲೆಯೇ ಎಷ್ಟು amount ಆಗುತ್ತದೆ ಎಂದು ಗೊತ್ತಾಗುತ್ತದೆಯಲ್ಲಾ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ನೀವು ಇದನ್ನು ಕಾರ್ಯರೂಪಕ್ಕೆ ತಂದರೆ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. (ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ಅದನ್ನು ಮಾಡುವುದಕ್ಕಾಗಿಯೇ DPR ಮಾಡುತ್ತಿರುವುದು.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಬಾಲಕೃಷ್ಣನಿಗೆ ಏನಾಗಿದೆ ಎಂದರೆ ಅಸೆಂಬ್ಲಿಗೆ ಬಂದಾಗ first time ಬಾಲಕೃಷ್ಣ. ಎಷ್ಟು ವರ್ಷಗಳಾಗಿದ್ದರೂ ಸಹ ಬಾಲಕನಾಗಿಯೇ ಇದ್ದುಬಿಟ್ಟಿದ್ದೇನೆ. ನೀನು ಬೆಳೆಯುವ ಕೃಷ್ಣನಾಗಬೇಪ್ಪಾ. ಸುಮಾರು ಕೆಲಸವನ್ನು ಮಾಡಿದ್ದೇವೆ. ಅವರು ಏನು ಹೇಳುತ್ತಾರೆಂದು ಕೇಳದೆಯೇ ನೀನು ಬಜೆಟ್, ಬಜೆಟ್ ಎಂದು

ಹೇಳುತ್ತಿದ್ದೀಯಾ, ನೀನು ಬಾಲಕೃಷ್ಣನಾಗಬಾರದು ಈಗ ನೀನು ಬೆಳೆದ ಕೃಷ್ಣನಾಗಿದ್ದೀಯಾ!

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಪಂಚಾಯತ್ ರಾಜ್ ಸಚಿವರು ಇಲ್ಲ. ಈಗ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ delimitation ಬಂದ ಮೇಲೆ ನಮ್ಮ ಪರಿಸ್ಥಿತಿ ಕನಕಪುರದ ಎರಡು ಹೋಬಳಿಗಳನ್ನು ತಂದು ರಾಮನಗರಕ್ಕೆ ಹಾಕಿದ್ದಾರೆ. ನನ್ನ ತಾಲ್ಲೂಕಿನ ಎರಡು ಹೋಬಳಿಗಳನ್ನು ತೆಗೆದುಕೊಂಡು ಮಾಗಡಿಗೆ ಹಾಕಿಬಿಟ್ಟಿದ್ದಾರೆ. ಈಗ ಕುಡಿಯುವ ನೀರಿನ ಬಗ್ಗೆ ಎರಡು ಕೋಟಿ ರೂಪಾಯಿಗಳನ್ನು release ಮಾಡಿದ್ದೀರಿ. ಈಗ ನನ್ನ ಪರಿಸ್ಥಿತಿ ಆ ಕನಕಪುರದ ಭಾಗದಲ್ಲಿ ಬರುವಂಥ ಹಾರೋಹಳ್ಳಿ, ಮರಳವಾಡಿ ಆ ಎರಡು ಹೋಬಳಿಗೆ ಕನಕಪುರಕ್ಕೆ ಕೊಟ್ಟಿರುವ ಹಣದಲ್ಲಿ 60.00 ಲಕ್ಷ ರೂಪಾಯಿಗಳು ಹಣ ಬರಬೇಕು. ನವೆಂಬರ್ ತಿಂಗಳಿನಲ್ಲಿ ನೀವು ಹಣ release ಮಾಡಿದ್ದೀರಿ. ಆ ಎರಡು ಭಾಗಕ್ಕೆ ನಾವು Task Force ನಲ್ಲಿ sign ಹಾಕಿ ಆಗಲೇ ಮೂರು ತಿಂಗಳುಗಳಾಯಿತು. ಅವರು ಈಗ ಅಲ್ಲಿ ಮಂತ್ರಿಗಳಾಗಿದ್ದಾರೆ. ಬಹಳ powerful ಆಗಿದ್ದಾರೆ. ಆ ಅಧಿಕಾರಿಗಳು ಹೆದರಿಕೊಳ್ಳುತ್ತಿದ್ದಾರೆ. ಆ ಎರಡು ಕೋಟಿ ರೂಪಾಯಿಗಳನ್ನು ನಮ್ಮ ಕನಕಪುರಕ್ಕೆ ತೆಗೆದುಕೊಳ್ಳುತ್ತೇನೆ. ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅವರು ನಿಮಗಷ್ಟೇ ಆತ್ಮೀಯ ಸ್ನೇಹಿತರಲ್ಲಾ, ನಮಗೂ ಸ್ನೇಹಿತರೇ. ಕುಡಿಯುವ ನೀರಿನಲ್ಲೂ ಈ ರೀತಿ ಮಾಡಿದರೆ ಹೇಗೆ? ಇಲ್ಲಿ ಬಾಲಕೃಷ್ಣ ಬಿಡುವುದಿಲ್ಲ. ಹಣ ಬರುವುದೇ ಕಾಯುತ್ತಿದ್ದೂ ನನಗಿಂತ ಮುಂಚೆ ನಿಂತುಬಿಡುತ್ತಾನೆ, ನಾನೆಲ್ಲಿ ಹೇಳಿಕೊಳ್ಳುವುದು? ನಮ್ಮ ಮುಖ್ಯಮಂತ್ರಿಗಳು ನೋಡಿದರೆ ಕುಮಾರಸ್ವಾಮಿಗೆ ನನ್ನ ಮೇಲೆ ದ್ವೇಷ ಎನ್ನುತ್ತಾರೆ. ಎಲ್ಲೋ ನೋಡಿದೆ. ಯಾಕೋ ರೇವಣ್ಣನವರು ಬೇಜಾರು ಮಾಡಿಕೊಂಡುಬಿಟ್ಟಿದ್ದಾರೆ. ಅವರಿಬ್ಬರು ಚೆನ್ನಾಗಿದ್ದರು.

ಶ್ರೀ ಸಿ.ಟಿ. ರವಿ:– ನಿಮಗೆ ಯಾರನ್ನಾದರೂ ಸರಿಮಾಡಬೇಕೆಂದು ಇದ್ದರೆ ರೇವಣ್ಣನವರನ್ನು ಕಳುಹಿಸಿ. ಅವರ ರಾಯಭಾರ 100% success ಆಗುತ್ತದೆ. ಅದಕ್ಕೆ ಬೇಕಾದ ಮದ್ದು ಎಲ್ಲಾ ಮಾಡಿಕೊಂಡು ಹೋಗಿರುತ್ತಾರೆ!

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಈ ಸರ್ಕಾರ 34 ತಾಲ್ಲೂಕುಗಳಿಗೂ ಎರಡೆರಡು ಕೋಟಿ ರೂಪಾಯಿಗಳನ್ನು ಕೊಟ್ಟಿದೆ. 70 ಕೋಟಿ ಹಣ ಕೊಟ್ಟಿದ್ದೇವೆ, ಆ ಹಣವನ್ನು ನಮ್ಮ ಸರ್ಕಾರವೇ ಕೊಟ್ಟಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಿಮ್ಮ ಸರ್ಕಾರ ಕೊಡದೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಾನು ಕೊಡಲಿಕ್ಕಾಗುತ್ತದೆಯೇ? ನಾನು ಏಕೆ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆಂದರೆ, ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ, ಬೋರ್‌ವೆಲ್ ಕೊರೆಯಲಿಕ್ಕೆ ಯಾರೂ ಬರುತ್ತಿಲ್ಲ. ನಮಗೆ ಹಣ ಬರುವುದೇ guarantee ಇಲ್ಲ. ನಾವು ಅಲ್ಲಿಗೆ ಬಂದು ಏಕೆ ಬೋರ್‌ವೆಲ್ ಕೊರೆಯಬೇಕು ಎಂದು ಕೇಳುತ್ತಾರೆ? ಆ ಭಾಗದಲ್ಲಿ ಬಹಳಷ್ಟು ಸಮಸ್ಯೆ ಇದೆ. ಆದ್ದರಿಂದ ನಾನು actually ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ನಮ್ಮ ಅಧಿಕಾರಿಗಳು ಯಾರಿದ್ದಾರೆ ಅವರಾದರೂ ಆ CEO ಗೆ direction ಕೊಡಲಿ. ಇರುವ ಪರಿಸ್ಥಿತಿಯ ಬಗ್ಗೆ ನಿಮ್ಮ ಮುಂದೆ ಇಟ್ಟಿದ್ದೇನೆ. ಇನ್ನೊಂದು ನೀವು ಇಲ್ಲಿ ಆರೋಗ್ಯದ ದೊಡ್ಡ ದೊಡ್ಡ Trauma Centres ಬಗ್ಗೆ ಹೇಳಿಕೊಂಡಿದ್ದೀರಿ. ಇಲ್ಲಿ ಪ್ರಶ್ನೆ, ಇವೆಲ್ಲಾ ಆಗಬೇಕು. Medical Colleges ಬಗ್ಗೆ ಎಲ್ಲಾ ಹೇಳಿಕೊಂಡಿದ್ದೀರಿ. ನಾನು ಒಂದೂವರೆ ವರ್ಷದಿಂದ ಈ ಸರ್ಕಾರ ಬಂದ ದಿವಸದಿಂದ ಹೇಳುತ್ತಿದ್ದೇನೆ. ನಾನು M.P. ಆಗಿದ್ದಾಗ ಗುಲಾಂನಬಿ ಆಜಾದ್‌ರವರಿಗೆ request ಮಾಡಿ ದೆಹಲಿಯಿಂದ ಹಣ 30.00 ಕೋಟಿ ರೂಪಾಯಿಗಳನ್ನು deposit ಮಾಡಿ ನಮ್ಮ Health ಇಲಾಖೆಯವರು ಬ್ಯಾಂಕ್‌ನಲ್ಲಿಟ್ಟುಕೊಂಡಿದ್ದಾರೆ. ಈಗಾಗಲೇ ಸುಮಾರು ಬಡ್ಡಿ ಎಲ್ಲಾ ಸೇರಿ 40–42 ಕೋಟಿ ರೂಪಾಯಿಗಳಷ್ಟು ಹಣ ಆ ಬ್ಯಾಂಕ್‌ನಲ್ಲಿದೆ. ಆಸ್ಪತ್ರೆ ಕಟ್ಟಲಿಕ್ಕೆ ಯಾವುದೋ ಒಂದು ಜಾಗ ಸಿಟಿಯಲ್ಲಿರಲಿ ಎಂದು ತೀರ್ಮಾನ ಮಾಡಿ ಕ್ಯಾಬಿನೆಟ್‌ಗೂ ನೀವು ತಂದಿರಿ, ಮಹದೇವಪ್ಪನವರು ಒಪ್ಪಿಗೆ ಕೊಟ್ಟಿದ್ದರು. ಮತ್ತೆ ಕ್ಯಾಬಿನೆಟ್‌ಗೆ ಎರಡು ಬಾರಿ ಬಂದು ವಾಪಸ್

ಕಳುಹಿಸಿದರಿ. ನಮಗೆ ಅಲ್ಲಿ ಜಿಲ್ಲಾ ಆಸ್ಪತ್ರೆ ತಕ್ಷಣ ಆಗದಿದ್ದರೆ ಆ ರಸ್ತೆಯಲ್ಲಿ accident ಆದರೆ ಬೆಂಗಳೂರಿಗೇ ಬರಬೇಕು, ಬಿ.ಜಿ.ಎಸ್. ಆಸ್ಪತ್ರೆಗೆ ಹೋಗಬೇಕು. ಬಿ.ಜಿ.ಎಸ್. ಆಸ್ಪತ್ರೆಗೆ ಹೋದರೆ ಕನಿಷ್ಠ 20–25 ಲಕ್ಷ ರೂಪಾಯಿಗಳಾಗದೆ ಆ patient ಹೊರಗೆ ಬರುವಂತಿಲ್ಲ. ಇಂಥ ಪರಿಸ್ಥಿತಿಗಳಿವೆ. ಆಸ್ಪತ್ರೆ ಕಟ್ಟುವ ಬಗ್ಗೆ ಕಳೆದ ಆರೂವರೆ ವರ್ಷಗಳಿಂದ ಸರ್ಕಾರದ ಗಮನವನ್ನು ಸೆಳೆಯುತ್ತಲೇ ಇದ್ದೇನೆ. ಇವತ್ತಿನವರೆಗೆ ಅದಕ್ಕೆ ಪರಿಹಾರ ದೊರೆಯಲಿಲ್ಲ. ನಾನು Rajeev Gandhi Health University ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಮಂತ್ರಿಗಳು ಬಂದಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್:– ನಾವು ಆಸ್ಪತ್ರೆ ಮಾಡಬಾರದೆಂದು ಏನೂ ಇಲ್ಲ. ಅಲ್ಲೇನಾಗಿದೆ ಎಂದರೆ, ಅಲ್ಲಿ existing ಜಿಲ್ಲಾ ಪಂಚಾಯಿತಿ ಆಫೀಸ್ ಹಿಂದೆಯೇ ಇದೆ. ಆ traffic ಗೆ ಅಲ್ಲಿ ಆಗಲಿ ಎಂದರೂ ನಮ್ಮದೇನೂ ಅಭ್ಯಂತರವೇನಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಏನೂ ತೊಂದರೆಯಿಲ್ಲ. ಇನ್ನೆಲ್ಲಿ ಜಾಗ ಹುಡುಕುತ್ತೀರಿ? ಊರಿನಿಂದ ಹೊರಗೆ ಮಾಡಲಿಕ್ಕೆ ಆಗುತ್ತದೆಯೇ?

ಶ್ರೀ ಡಿ.ಕೆ. ಶಿವಕುಮಾರ್:– ಈ turning ನಲ್ಲಿ ಬಹಳ emergency problem ಇದೆ. ನಾಳೆ ಬೆಳಿಗ್ಗೆ traffic ಮತ್ತೊಂದು ಆಗಬಾರದೆಂದು ಅಷ್ಟೇ. ನಿಮಗಲ್ಲೇ ಬೇಕು ಎಂದರೆ ನೀವು ಬಾಲಕೃಷ್ಣರವರು ಇಬ್ಬರೂ ಇಲ್ಲೇ ಇದ್ದೀರಿ. ನೀವಿಬ್ಬರೂ ಅಲ್ಲೇ ಬೇಕು ಎಂದರೆ ನಾನು ಮತ್ತೆ ಮಾನ್ಯ ಮುಖ್ಯಮಂತ್ರಿಗಳಿಗೆ proposal ಸಲ್ಲಿಸುತ್ತೇನೆ ನನ್ನದೇನಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹಳ್ಳಿಯಿಂದ ಬರುವವರೆಗೆ 6–7 ಕಿ.ಮೀ. ದೂರದಲ್ಲಿ ಆಸ್ಪತ್ರೆ ಮಾಡಿಸಿದರೆ ಹೇಗೆ? ದಯವಿಟ್ಟು ಬೇಗ clear ಮಾಡಿಸಿ, ಕೆಲಸ ಶುರು ಮಾಡಿಸಿ. ಅದರ ಜೊತೆಗೆ ನನ್ನ ಎರಡು ಹೋಬಳಿಗೆ ಹಣ release ಮಾಡಿಲ್ಲ. ನಿಮಗೇನು ತೊಂದರೆ ನನ್ನ 60.00 ಲಕ್ಷ ರೂಪಾಯಿಗಳು ಏಕೆ ಬೇಕು? ನೀವು ಬೇರೆ ಹಣ release ಮಾಡಿಸಿಕೊಳ್ಳಬಹುದು. ನನ್ನ share ಕೊಡದೆ ಎಲ್ಲಾ ತೆಗೆದುಕೊಂಡು ನೀವು

ಅಲ್ಲಿ ಹಾಕಿಕೊಂಡುಬಿಟ್ಟರೆ ನಾನೆಲ್ಲಿ ಹೋಗಲಿ? ಕುಡಿಯುವ ನೀರಿನ ವಿಚಾರ Task Force ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:- ಇಲ್ಲ, equal ಆಗಿ divide ಮಾಡಿದ್ದೇನೆ. ಏನಾದರೂ ಹೆಚ್ಚು ಕಡಿಮೆ ಆದರೆ setright ಮಾಡುತ್ತೇನೆ ಬಿಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಅಲ್ಲೇನಾಗಿದೆ ಎಂದರೆ ನನಗೆ ಬಂದಿರುವ information ಪ್ರಕಾರ, 2.60 ಲಕ್ಷ ರೂಪಾಯಿಗಳಿಗೆ ನೀವು proposal ಕೊಟ್ಟಿದ್ದೀರಿ, ನಿಮ್ಮ ಕನಕಪುರ ತಾಲ್ಲೂಕಿಗೆ 2.00 ಲಕ್ಷ ರೂಪಾಯಿಗಳಷ್ಟೇ ಇರುವುದು. ಅದು set right ಆಗದೆ ಅವರು release ಮಾಡುವುದಿಲ್ಲ. ಅಲ್ಲಿ problem ಆಗಿ ಹಾಗೇ ನಿಂತಿದೆ. ನೀವಿಬ್ಬರೂ ಕುಳಿತುಕೊಂಡು ತೀರ್ಮಾನ ಮಾಡಿ ನೀವಿಬ್ಬರೂ ಸೇರಿ ಎರಡಕ್ಕೆ ಕೊಟ್ಟರೆ ಆಗ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ಇನ್ನೂ 60.00 ಲಕ್ಷ ರೂಪಾಯಿಗಳನ್ನು ಹೊಸದಾಗಿ ಕೊಡಿ ಎಂದು ಅಧಿಕಾರಿಗಳಿಗೆ ಹೇಳಿದರೆ ಅವರು ಕೊಡಬೇಕಲ್ಲವೇ? ನವೆಂಬರ್ ತಿಂಗಳಿನಲ್ಲಿ ಹಣ release ಆಗಿ ಹಣ ಕೊಡದೆ ನಮ್ಮ ಕ್ಷೇತ್ರದಲ್ಲಿ ಕಂಟ್ರಾಕ್ಟರ್‌ಗಳು ಬೋರ್‌ವೆಲ್ ಹಾಕಲಿಕ್ಕೆ ಬರುತ್ತಿಲ್ಲ. ಸಧ್ಯ ಹಾರೋಹಳ್ಳಿ ಮತ್ತು ಮರಳವಾಡಿ ಎರಡು ಹೋಬಳಿಗಳನ್ನು ನೀವೇ ಇಟ್ಟುಕೊಂಡು ಬಿಟ್ಟಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ನೀವು ಮತ್ತು ಸಿಂಧ್ಯಾರವರು ಇಬ್ಬರೂ ಸೇರಿ shift ಮಾಡಿಕೊಂಡು ನನಗೆ ಇಲ್ಲಿ ಒಂದೂ ರೀತಿ ಹಿಂಸೆಯಾಗಿ ಹೋಗಿದೆ.

ಶ್ರೀ ಡಿ.ಕೆ. ಶಿವಕುಮಾರ್:- ಹಾರೋಹಳ್ಳಿ ಮತ್ತು ಮರಳವಾಡಿ ಯಾರು ಇಟ್ಟುಕೊಂಡಿದ್ದೂ? ನಾನು ಇಟ್ಟುಕೊಂಡಿದ್ದೇನೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ಸಿಂಧ್ಯಾರವರು ಸೇರಿ ಚರ್ಚೆ ಮಾಡಿದರೆ ಆ ಬಗ್ಗೆ ಗೊತ್ತಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಇವರ ತಂದೆಯವರೆ De-limitation Committee Member. ನನ್ನ ಭಾಗಕ್ಕೆ ಬರುವುದನ್ನು ಕಿತ್ತುಹಾಕಿಸಿಬಿಟ್ಟರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಲ್ಲಿ ಅವರದೇನೂ ನಡೆಯಲಿಲ್ಲ. ಉಪಾಧ್ಯಕ್ಷರೆ, ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡುವುದಿದೆ. ನಮಗೆ ಪರಿಸ್ಥಿತಿ ಏನಾಗಿದೆ ಎಂದರೆ ಈಗ ಪ್ರಮುಖವಾಗಿ ನಿಮ್ಮ ಅರ್ಕಾವತಿ ಬಗ್ಗೆ ಚರ್ಚೆ ಮಾಡಬೇಕು. ನಮ್ಮ ಗೌರವಾನ್ವಿತ ಅಧ್ಯಕ್ಷರು de-notification ಬಿಟ್ಟು ಬೇರೆ ಮಾತನಾಡಿ ಎನ್ನುತ್ತಾರೆ. ಇಲ್ಲಿ ಪರಿಸ್ಥಿತಿ ಹೀಗಿದೆ. ನಿಮ್ಮ Housing Society ಗಳಿಗೆ ಬಂದರೆ ಅದೊಂದು ದೊಡ್ಡ ಕರ್ಮಕಾಂಡಗಳಿವೆ. ರಾಜೀವ್‌ಗಾಂಧಿ ಯುನಿವರ್ಸಿಟಿಯದ್ದೂ ಬಾಲಗ್ರಹಪೀಡಿತವಾಗಿ ಹೋಯಿತು. ಇನ್ನು ಸ್ವಲ್ಪ ದಿವಸ ಜೊತೆಯಲ್ಲಿದ್ದುಬಿಟ್ಟಿದ್ದರೆ ಅದನ್ನು ಮುಗಿಸಿಬಿಡುತ್ತಿದ್ದೆವು. ಏನು ಮಾಡುವುದು ಅದಾಗಲಿಲ್ಲ. ಮುಖ್ಯಮಂತ್ರಿಗಳು ಅದರ ಬಗ್ಗೆ..

ಶ್ರೀ ಡಿ.ಕೆ. ಶಿವಕುಮಾರ್:– ನಾವೇನು ನಿಮಗೆ 20 ತಿಂಗಳು ಕೊಡಬೇಡಿ ಎಂದು ಹೇಳಿದ್ದೇವೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹೇಳಿದ್ದು ಅಷ್ಟೇ. ಏನು ಮಾಡುವುದು ಒಂದೊಂದು ಸಾರಿ ಮನುಷ್ಯನ ಸಹಜ ಗುಣ.

ಶ್ರೀ ಡಿ.ಕೆ. ಶಿವಕುಮಾರ್:– ನೋಡಿ ಶೆಟ್ಟರ್‌ರವರೆ, ಈಗ ವ್ಯಥೆ ಮಾಡಿಕೊಳ್ಳುತ್ತಿದ್ದಾರೆ. ಒಂದು ಸಾರಿ ನಾನು ಮಾಡಿದ್ದು ತಪ್ಪು ಎಂದು ಹೇಳಿದರು. ಇನ್ನೊಂದು 20 ದಿವಸ ಇದ್ದಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಂದರೆ ನಾನು ಇನ್ನೊಂದು ಇಪ್ಪತ್ತು ದಿವಸ ಇದ್ದಿದ್ದರೆ ನನ್ನ ಅಜೆಂಡಾ ಎಲ್ಲಾ ಮುಗಿದುಹೋಗುತ್ತಿತ್ತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಕುಮಾರಸ್ವಾಮಿಯವರೆ, ಡಿ.ಕೆ. ಶಿವಕುಮಾರ್‌ರವರು ಹೇಳಿದರಲ್ಲಾ, ನಿಮಗೇನು ಕೊಡಬೇಡ ಎಂದು ಹೇಳಿದ್ದೇವೆ ನಿಮ್ಮ ಸ್ಥಾನವನ್ನು ನೀವೇ ಕಿತ್ತು ಹಾಕಿಕೊಂಡುಬಿಟ್ಟಿರಿ, ಆ ಗ್ರಹಗತಿಗಳು ಹಾಗಿರುತ್ತದೆ. ಏಕೆಂದರೆ ರಾಮನಿಗೆ ಚಿನ್ನದ ಜಿಂಕೆ

ಆಗಿರುವುದಿಲ್ಲವೆಂದು ಗೊತ್ತಿದ್ದರೂ ಆ ಜಿಂಕೆಯ ಬೆನ್ನಟ್ಟಿ ಹೋದ. ಹಾಗೆ ಆ ಗ್ರಹಗತಿಗಳು ಹೋಗಿ ಅಲ್ಲಿ ನಿಲ್ಲಿಸುತ್ತವೆ ಏನು ಮಾಡಲಿಕ್ಕಾಗುತ್ತದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವತ್ತು ಚರ್ಚೆ ಮಾಡಲಿಕ್ಕೆ ಸಾಕಷ್ಟು ವಿಷಯಗಳಿವೆ. ಯಾರೂ ಅನ್ಯಥಾ ಭಾವಿಸುವುದು ಬೇಡ. ನಾನು ಆಕಸ್ಮಿಕವಾಗಿ ಮುಖ್ಯಮಂತ್ರಿಯಾದೆ. ಅವತ್ತು ನಾನು ಮುಖ್ಯಮಂತ್ರಿಯಾದಾಗ ನನಗೆ ಆಡಳಿತದ ಅನುಭವ ಇರಲಿಲ್ಲ. ಆಗ ನನಗೆ ಸರ್ಕಾರದಲ್ಲಿ ಯಾವ ರೀತಿ ತೀರ್ಮಾನಗಳನ್ನು ಮಾಡಬೇಕೆಂಬ ಬಗ್ಗೆ ಅನುಭವಗಳ ಕೊರತೆ ಇತ್ತು. ಮೊದಲನೆ ಬಾರಿಗೆ ಶಾಸಕನಾಗಿದ್ದೆನು, ಮೊದಲನೆ ಬಾರಿಗೆ ನಾನು ಮುಖ್ಯಮಂತ್ರಿಯಾಗಬೇಕಾದಂಥ ಅನಿವಾರ್ಯ ಪರಿಸ್ಥಿತಿಯಲ್ಲಿ ಆ ಒಂದು ಘಟನೆಗಳು ನಡೆಯಿತು ಉಪಾಧ್ಯಕ್ಷರೆ. ಆ 20 ತಿಂಗಳು ಆಡಳಿತ ನಡೆಸಬೇಕಾದರೆ ಬಹುಶಃ ನಾವೆಲ್ಲಾ ಹೊಸಬರೆ. ಇವರಿಗೂ ಯಾರಿಗೂ ಅಂಥ ಏನೂ ಅನುಭವವಿರಲಿಲ್ಲ. ಮೊದಲನೆ ಬಾರಿ ಮಂತ್ರಿಗಳಾದಂಥವರೇ. ಆದರೆ ಇವತ್ತು ಇಲ್ಲಿ ನಡೆಯುತ್ತಿರುವಂಥ ಕೆಲವು ವಿಷಯಗಳನ್ನು ನೋಡಿದರೆ.. ನಿನ್ನೆ ಮೊನ್ನೆ ದಿವಸ ನೋಡಿದೆ. ಎಂಥದೊ ಒಂದು ಮುಖವಾಡ ಹಾಕಿಸಿದ್ದಾರೆ. ಏನೋ ಪುಂಗಿ ನುಡಿಸುತ್ತಿರುವುದು. Youth congress ನ ಸದಸ್ಯರು ಎಂದು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೂ ಒಂದು ಮುಖವಾಡ ಹಾಕಿದ್ದರು. ನನಗೂ ಒಂದು ಮುಖವಾಡ ಹಾಕಿ ಅದೆಂತಹದ್ದೋ ಹಾವು ಬೇರೆ ನನ್ನ ಕೊರಳಿಗೆ ಸಿಕ್ಕಿಸಿದ್ದಾರೆ. ನಾನು ಕೂಡ ಶಿವನ ಮಗನೇ ಆಗಿದ್ದೇನೆ. ನಾನು ಕುಮಾರಸ್ವಾಮಿ ಅದು ಏನೂ ತಪ್ಪೇನನಿಲ್ಲ ಬಿಡಿ. ಅದು ಏನೋ ಒಂದು ಪುಂಗಿ ಬೇರೆ ಕೈಯಲ್ಲಿ ಕೊಟ್ಟಿದ್ದಾರೆ. ಏನೋ ಅದನ್ನು ಟಿ.ವಿ. ನಲ್ಲಿ ನೋಡಿದೆ. ಅದು ಏನೋ ಖಾಲಿ ಬುಟ್ಟಿಗಳನ್ನು ಇಟ್ಟಿರುವುದು ನೋಡಿದೆ. ಆ ಖಾಲಿ ಬುಟ್ಟಿಗಳು ಇದೆಯೆಲ್ಲಾ ಅದಕ್ಕೆ ಬೇಡವೆಂದರೂ ದಾಖಲೆಗಳು ಬಂದು ಬೀಳುತ್ತವೆ. ಅವರು ಅರ್ಥ ಮಾಡಿಕೊಂಡಿಲ್ಲ. ನಾನು ಸುಮ್ಮನಿದ್ದೆ. ಕಳೆದ ನಮ್ಮ ಇಲಾಖಾವಾರು ಚರ್ಚೆಯ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಬಿ.ಡಿ.ಎ. ಗೆ ಸಂಬಂಧಪಟ್ಟಂತಹ ವಿಷಯವನ್ನು ಪ್ರಸ್ತಾಪ

ಮಾಡಿದ್ದರು. ನಾನು ಆವತ್ತು ಚರ್ಚೆ ಮಾಡದೇ ಸುಮ್ಮನಿದ್ದೆ. ನಾನು ಎಂದಿಗೂ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದರಲ್ಲಿ ಕುಮಾರಸ್ವಾಮಿಯವರದೂ ಪಾಲಿದೆ ಎಂದು ನನ್ನ ಹೆಸರು ಪ್ರಸ್ತಾಪ ಮಾಡಿದ್ದರಿಂದ ಆಯಿತಪ್ಪ ನಾನು ಕೂಡ ಅದರ ಬಗ್ಗೆ ಸ್ವಲ್ಪ research ಮಾಡುತ್ತೇನೆ ಎಂದು ಹೇಳಿದೆ. ನಾನು ಅದರ ಬಗ್ಗೆ ಹೋಗುವುದು ಬೇಡವೆಂದು ಇದ್ದೆ. ಏತಕ್ಕೆ ಎಂದರೆ, ಮೊದಲೇ ಹೇಳಿದ್ದೇನೆ. ಇವತ್ತು ಏನಾಗಿದೆ ಎಂದರೆ, ನಮ್ಮ ನಮ್ಮ ನಡುವೆ ನಡೆಯತಕ್ಕಂತಹ ಕೆಲವು ಘಟನೆಗಳು ಬೇರೆಯವರು ಅದನ್ನು ನೋಡಿ ಖುಷಿ ಪಡುವುದು ಒಂದು ಕಡೆಯಾದರೆ ಅದರಿಂದ ಲಾಭ ಪಡೆದುಕೊಳ್ಳುವವರೂ ಸಹ ಜಾಸ್ತಿಯಿದ್ದಾರೆ. ನಾನು ಕಳೆದ ಬಿ.ಜೆ.ಪಿ. ಸರ್ಕಾರದ ವಿರುದ್ಧ ನಾನು ಆ ಸಮಯದಲ್ಲಿಯೂ ಸಹಿತ ಸುಮ್ಮನಿದ್ದೆ. ಆವತ್ತಿನ ಮಾನ್ಯ ಮುಖ್ಯಮಂತ್ರಿಗಳು ಅವರೇ ಒಂದೆರಡು ಬಾರಿ ಕೆಣಕಿದರು. ಅದರ ಮೇಲೆ ನೋಡೋಣ- ಅದು ಏನೇನು ನಡೆಯುತ್ತಿದೆ ಎಂದುಕೊಂಡೆ. ಸ್ವಲ್ಪ ಸರ್ಕಾರದ ತೀರ್ಮಾನಗಳ ಬಗ್ಗೆ ಕಣ್ಣು ಹಾಯಿಸುವುದಕ್ಕೆ ಹೋದೆ. 5 ವರ್ಷಗಳವರೆಗೆ ಅಲ್ಲಿಯೂ ಕೆಲವು ಪ್ರಕರಣಗಳು ನಡೆದವು. ಅದರ ಹಿನ್ನೆಲೆಯಲ್ಲಿ ಕೊನೆಗೆ ಆವತ್ತಿನ ಮುಖ್ಯಮಂತ್ರಿಗಳು ಜೈಲಿಗೆ ಹೋಗಬೇಕಾಯಿತು. ನಾನೂ ಕಟಕಟೆ ಹತ್ತಬೇಕಾಯಿತು. ನಾನು ಅಲ್ಲಿ ನೋಡಿದೆ, ನನಗೂ ಅಲ್ಲಿ ಅನುಭವವಾಯಿತು. ಅಲ್ಲಿ ಹೋದಾಗ ಯಾವ ರೀತಿ ನಮ್ಮನ್ನು treat ಮಾಡುತ್ತಾರೆ ಎನ್ನುವುದನ್ನು ನಾನು ಅಲ್ಲಿ ನೋಡಿದೆ. ಅವರ ನಡವಳಿಕೆಗಳನ್ನು ನೋಡಿದೆ. ಅವರೆಲ್ಲಾ ಮೇಲಿನಿಂದ ಬಂದಿರುವವರು ಸತ್ಯ, ನ್ಯಾಯ, ನಿಷ್ಠೆ ಅವರಿಗೇ ಇರುವುದು, ಬೇರೆ ಇನ್ನು ಯಾರಿಗೂ ಇಲ್ಲ. ಇವತ್ತು ಇದೇ ಪ್ರಕರಣದಲ್ಲಿ ಅವರು application of mind ಎಂದು ಹೇಳುತ್ತಾರೆ. ಈ preliminary notification ಅನ್ನು ಮಾಡಿದಾಗ ನೀವು application of mind ಅನ್ನು use ಮಾಡಿಲ್ಲವೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಆವತ್ತು ನಡೆದಂತಹ ಘಟನೆಗಳು ಏನಿದೆ, ಅದರಿಂದ ನಾನು ಪೆಟ್ಟು ತಿಂದಿದ್ದೇನೆ. ಆದ್ದರಿಂದಲೇ ನಾನು ಮುಂದಿನ ದಿನಗಳಲ್ಲಿ ನನ್ನ ಕೆಲವು ನಿಲುವನ್ನು ಬದಲಾವಣೆ ಮಾಡಿಕೊಂಡಿದ್ದೇನೆ. ಏಕೆಂದರೆ, ನನಗೆ ಏನೂ

ಲಾಭವಾಗಲಿಲ್ಲ. ಲಾಭವನ್ನು ನೀವೇ ತೆಗೆದುಕೊಂಡಿದ್ದೀರಿ. ಕುಸ್ತಿ ಆಡಿದವರು ನಾವು ಮತ್ತು ಇವರು. ದಾಖಲೆಗಳನ್ನು ಬಿಡುಗಡೆ ಮಾಡಿದವರು ನಾವು. ನಮ್ಮ ಸ್ನೇಹಿತರುಗಳು ನನಗೆ ಹೇಳಿದರು. ನೀವು ಮಾನ್ಯ ಸಿದ್ದರಾಮಣ್ಣನವರ ವಿಷಯಕ್ಕೆ ಹೋಗಬೇಡ ಏಕೆ ಹೋಗುತ್ತೀಯಾ ಬಿಟ್ಟುಬಿಡು ಎಂದು ಹೇಳುತ್ತಾರೆ. ನಗುತ್ತಾರೆ ನೋಡಿ! ನಮ್ಮ constituency ಗಳು ನಮಗೆ ಕಷ್ಟವೆಂದು ಹೇಳುತ್ತಾರೆ. ಇದು ವಾಸ್ತವಾಂಶವಾಗಿದೆ. ಏನು ಅವರವರ ಕಷ್ಟಗಳು ಅವರವರಿಗೆ ಇರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದಕ್ಕಲ್ಲ ಅಣ್ಣ ಹೇಳಿದ್ದು. ಮೊದಲು ಹೇಳಿದ್ದರಲ್ಲಾ, ಇವರು ಗುದ್ದಾಡಿದ್ದರು, ಅವರು ಲಾಭ ತೆಗೆದುಕೊಂಡರು ಎಂದು ಹೇಳಿದ್ದಾರಲ್ಲಾ? ಈಗ ಎಲ್ಲಿ ಗುದ್ದಾಡಿ ಅಲ್ಲಿ ಏಕೆ ಲಾಭ ಮಾಡುತ್ತೀಯಾ ಎಂದು ಹೇಳಿದೆ ಅಷ್ಟೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಲಾಭ ಬಂದಿದ್ದು ನೇರವಾಗಿ ನಿಮಗೆ ಆಗಲಿ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ನಾನು ಏತಕ್ಕೆ ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, . ..

ಶ್ರೀ ಕೆ.ಆರ್. ರಮೇಶ್ ಕುಮಾರ್:– ನೀವು ನೇರವಾಗಿ ಲಾಭ ಪಡೆದುಕೊಳ್ಳುವ ಸ್ಥಿತಿಯಲ್ಲಿ ಈಗ ಸಧ್ಯಕ್ಕೆ ಇಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇಲ್ಲ ನಾನು ಲಾಭ ನಷ್ಟದ ಪ್ರಶ್ನೆ ಹೇಳುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನೀವು partnership ಗೇ ಬರಬೇಕು. ನೀವು partnership ಗೇ ಸೇರಸಿಕೊಳ್ಳಬೇಕು. ನೋಡಿ ಹಳೆಯ ಅನುಭವ ಕೆಟ್ಟದ್ದು, ಆಲೋಚನೆ ಮಾಡಿ. Partnership ನಲ್ಲಿ ಏನೋ ನಡೆಸೋಣ!

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಈ ವಿಷಯಗಳೇನು ಬಂದಿದೆ, ಇದರ ಮೇಲೆ ನಾನು ಯಾರ ಮೇಲೂ ದೋಷ ಹೇಳಬೇಕೆಂದು ಇಲ್ಲ. ನಾನು ಯಾರಿಗೂ ತೊಂದರೆಕೊಡಬೇಕೆಂದೂ ಸಹ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಹುಶಃ ನನ್ನ ಹೆಸರು ಹೇಳದೇ ಹೋಗಿದ್ದರೆ ನಾನು ಈ ವಿಷಯದ ಬಗ್ಗೆ ಇಣುಕಿ ಸಹ ನೋಡುವುದಕ್ಕೆ ಹೋಗುತ್ತಿರಲಿಲ್ಲ. ಬೆಳಗಾವಿ ಸದನದಲ್ಲಿ ನಾನು ಅವತ್ತಿನ ಗಣಿಗಾರಿಕೆಗೆ ಸಂಬಂಧಪಟ್ಟಹಾಗೆ associate mining subject rise ಮಾಡಿ ಚರ್ಚೆ ಮಾಡುತ್ತಿದೆ. ಆವತ್ತು ಇದ್ದಂತಹ ಆ ಪ್ರಕರಣಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಒಂದು ಮಾತನ್ನು ಸದನದಲ್ಲಿ ಹೇಳಿದರು. ಬೇರೆಯವರಿಗೆ ಬ್ರಹ್ಮ ಹಣೆಬರಹ ಬರೆದರೆ ಬಹಶಃ ಆವತ್ತು ಜಗದೀಶ್ ಶೆಟ್ಟರ್‌ರವರು speaker ಸ್ಥಾನದಲ್ಲಿದ್ದರು. ಆ ಸಮಯದಲ್ಲಿ ನಿನಗೆ ನಾನು ಹಣೆಬರಹ ಬರೆಯುತ್ತೇನೆ ಎಂದು ವಿಧಾನಸಭೆಯ ಕಲಾಪದಲ್ಲಿ ಹೇಳಿದರು. ಆ ಸಮಯದಲ್ಲಿ ಕಡತದಿಂದ ತೆಗೆದುಹಾಕಿ ಎಂದು ನಾನು demand ಇಡಲಿಲ್ಲ. 'ಬ್ರಹ್ಮ ಬೇರೆಯವರಿಗೆ ಬರೆದರೆ ನಿನ್ನ ಹಣೆಬರಹವನ್ನು ನಾನು ಬರೆಯುತ್ತೇನೆ ಎಂದು ವಿಧಾನಸಭೆಯ ಕಲಾಪದಲ್ಲಿ ಹೇಳಿದರು.' ಇದೆಲ್ಲಾ ನೋಡಿದ್ದೇವೆ. ಏತಕ್ಕೆ ನಾನು ಇದನ್ನ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆಂದರೆ, ಹೌದು ನಾನು ಹೇಳಿದೆ. ನಾನು de-notification ಮಾಡಿದ್ದೇನೆ. ಅದು ಮಾನ್ಯ ಮುಖ್ಯಮಂತ್ರಿಯವರಿಗಿರುವಂತಹ ಪ್ರದತ್ತವಾದ ಅಧಿಕಾರ. ಕನ್ನಡದಲ್ಲಿ ಪ್ರದತ್ತವಾದ ಅಧಿಕಾರ ಎಂದು ಹೇಳುತ್ತೇವೆ. De-notification ಮಾಡಬಾರದೆಂದು ಏನೂ ಅಲ್ಲಿ ಹೇಳಿಲ್ಲ. 48/1 ಇಟ್ಟಿರುವಂತಹ ಅವಕಾಶವೇ ನಿಮಗೆ de-notification ಮಾಡಿಕೊಳ್ಳುವುದಕ್ಕೆ ಅದನ್ನು de-notification ಮಾಡಬೇಕಾದಂತಹ ಪರಿಸ್ಥಿತಿಯಿದ್ದರೆ ಎಂದು ಇಟ್ಟಿದ್ದಾರೆ. ಅದನ್ನು ನಾನು ಹೇಳಿದ್ದೆ. ನನ್ನದು 78 ಎಕರೆ ಎಂದು ಹೇಳಿದ್ದಾರೆ. ಆ 78 ಎಕರೆಯಲ್ಲಿ ನನ್ನ ಪಾಲು ಇಲ್ಲ. ಮಾನ್ಯ ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಡೆದುಕೊಂಡು ಬಂದಿರುವಂತಹ 60 ಎಕರೆ ಪ್ರಕರಣ ಅದು. ಅದರಲ್ಲಿ ನನ್ನ ಪಾಲು ಇಲ್ಲ. ನಾನು ಅದನ್ನು ಹೇಳಲೂಬಾರದು. ಏಕೆಂದರೆ, ನಾನು ಅದನ್ನು ಚರ್ಚೆ

ಮಾಡುವುದಕ್ಕೆ ಹೋದರೆ ಕಷ್ಟ. ಈಗ ಕೆಂಪಣ್ಣ ಆಯೋಗದ ಮುಂದೆ ಇದೆ. ನೀವು ಅಲ್ಲಿ ಹೋಗಿ ಏನಾದರೂ ಇದ್ದರೆ ಹೇಳಿಕೊಳ್ಳಿ ಎಂದು ಇದೆ. ಬಹುಶಃ ಈಗ ಈ ವಿಷಯ ಪ್ರಾರಂಭ ಮಾಡಿದರೆ ಅಂದರೆ ಶುರು ಮಾಡಿದರೆ ನಮ್ಮ ಅಧ್ಯಕ್ಷರು ಏನಾದರೂ ಕೊಠಡಿಯಲ್ಲಿದ್ದರೆ ಅವರೇ ಈಗ ಬಂದು ಬಿಡುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಕರ್ಮಕಾಂಡವೆಂದು ಅಲ್ಲಿ ಹೇಳಲಿಲ್ಲ. ಅರ್ಕಾವತಿಯ ಕರ್ಮಕಾಂಡವೆಂದು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಕರ್ಮಕಾಂಡವೆಂದು ಅಲ್ಲಿ ಹೇಳಿಲ್ಲ. ಅವರು ಅಲ್ಲಿ ಹೇಳಿದರು. ಇದು ಕುಮಾರಸ್ವಾಮಿಯವರದು, ಯಡಿಯೂರಪ್ಪನವರ ಕರ್ಮಕಾಂಡ ಇದು ಎಂದು ಹೇಳಿದರು. ನಿಮಗೆ ಅಧಿಕಾರವಿದೆ. ನಾವು ಆ ಕರ್ಮಕಾಂಡ ಮಾಡಿದ್ದರೆ ಇವತ್ತು ರಾಜ್ಯದ 6 ಕೋಟಿ ಜನ ನಿಮಗೆ ಅಧಿಕಾರ ಕೊಟ್ಟಿರುವುದು ಏತಕ್ಕೆ ಎಂದರೆ, ಹಿಂದಿನ ಸರ್ಕಾರವಿರಲಿ ಅಥವಾ ಇವತ್ತಿನ ಸರ್ಕಾರವಿರಲಿ ಯಾರಾದರೂ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದಂತಹ ಅಧಿಕಾರ ನಿಮಗೆ ಕೊಟ್ಟಿದ್ದಾರೆ. ದಯವಿಟ್ಟು ನೀವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ನಮ್ಮಿಂದ ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳಿ. ನಾನು ಅದಕ್ಕೆ ತಯಾರಾಗಿದ್ದೇನೆ. ನಾನು ಹೇಳಿದೆ ಎಂದರೆ 20 ತಿಂಗಳುಗಳ ಕಾಲ ಅಧಿಕಾರ ನಡೆಸಬೇಕಾದರೆ ನನಗೆ ಅನುಭವವಿರಲಿಲ್ಲ. ನನ್ನ ಕಚೇರಿಯ Principal Secretary ಯವರು ಸರ್ಕಾರದ ಹಲವಾರು ನಿರ್ಧಾರಗಳ ಬಗ್ಗೆ ಫೈಲ್‌ಗಳನ್ನು ತಂದಾಗ ಅದನ್ನು ಓದಿ ತಿಳುವಳಿಕೆಯಿಂದ ನನ್ನ ತೀರ್ಮಾನವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುವಂತಹ ವಿಷಯದಲ್ಲಿ ಅವತ್ತು ನನಗೆ ಅನುಭವದ ಕೊರತೆಯಿತ್ತು. ನಾನು ಅದನ್ನು ಹೇಳುತ್ತೇನೆ. ಸತ್ಯ ಹೇಳುವದಕ್ಕೆ ನನಗೆ ಮುಜುಗರವಿಲ್ಲ. ನನ್ನ ಮೇಲೆ ಕೇವಲ ಮೂರು ತಿಂಗಳುಗಳಲ್ಲಿ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಗಣಿ ಮಾಲೀಕರಿಂದ 150 ಕೋಟಿ ರೂಪಾಯಿಗಳ ಹಣ ಸಂಗ್ರಹ ಮಾಡಿದರು ಎಂದು ಆಪಾದನೆ ಬಂತು. ನಾನು ಆವತ್ತು ಆ ಜಾಗದಲ್ಲಿ ಕುಳಿತು ಹೇಳಿದೆ. ಆವತ್ತು ಬಹುಶಃ ಮಾನ್ಯ ದೇಶಪಾಂಡೆಯವರು, ಮಾನ್ಯ ರಮೇಶ್ ಕುಮಾರ್‌ರವರು ಇವರೆಲ್ಲಾ ನನಗೆ ಮಾರ್ಗದರ್ಶನ

ಕೊಡುವಂತಹ ಹಿರಿಯರಿದ್ದಾರೆ ಅವರೆಲ್ಲಾ ಈ ಭಾಗದಲ್ಲಿದ್ದರು. ಮಾನ್ಯ ಖರ್ಗೆಯವರು, ಮಾನ್ಯ ಧರ್ಮಸಿಂಗ್‌ರವರು, ಬಹುಶಃ ಮಾನ್ಯ ಸಿದ್ದರಾಮಣ್ಣನವರು ಇದ್ದರು. ನಾನು ಆವತ್ತು ಒಂದು ಮಾತನ್ನು ಹೇಳಿದ್ದೆ. ನಾನು ಇವತ್ತು ಏನು ಆರೋಪಿ ಸ್ಥಾನದಲ್ಲಿದ್ದೇನೆ., ನನ್ನ ಮೇಲೆ ನೀವು ಆರೋಪ ಮಾಡುತ್ತಿದ್ದೀರಿ, ನನ್ನ ಹಿಂದೆ ಇರತಕ್ಕಂತಹ ಸಂಖ್ಯೆಯನ್ನು ರಕ್ಷಣೆ ಪಡೆದುಕೊಳ್ಳುವುದರ ಮೂಲಕ ನನ್ನ ಮೇಲೆ ಬಂದಿರತಕ್ಕಂತಹ 150 ಕೋಟಿ ರೂಪಾಯಿಗಳ ಹಗರಣದ ಆರೋಪದ ಬಗ್ಗೆ ಇವತ್ತು ನಾನು ರಕ್ಷಣೆ ಪಡೆದುಕೊಂಡು ಎದುರಿಸುವುದಕ್ಕೆ ನಾನು ಹೋಗುವುದಿಲ್ಲ. ನನ್ನ ಮೇಲೆ ಬಂದಿರತಕ್ಕಂತಹ ಈ ಆಪಾದನೆಯನ್ನು ಚರ್ಚೆ ಮಾಡಿ ನಾನು ಏಕಾಂಗಿಯಾಗಿ ಎದುರಿಸುತ್ತೇನೆ ಎಂದು ಹೇಳಿದೆ. ಇವತ್ತೂ ಆ ಕಡತದಲ್ಲಿದೆ. ನಾನು ನನ್ನ ಹಿಂದೆ ಇದ್ದಂತಹ ಶಾಸಕರ ರಕ್ಷಣೆ ಪಡೆಯಲಿಲ್ಲ. ನಾನು ಮಂತ್ರಿಮಂಡಲದ ಹಿರಿಯ ಸದಸ್ಯರ ರಕ್ಷಣೆ ಪಡೆಯುವುದಕ್ಕೆ ಹೋಗಲಿಲ್ಲ. ಅಲ್ಲಿ ಮೇಲ್ಮನೆಯಲ್ಲಿ ಅದೆಂತಹದ್ದೋ ಕ್ಯಾಸೆಟ್ ಎಂದು ತೋರಿಸಿಬಿಟ್ಟರು. ಆಗ ಹೊರಗಡೆಗೆ ಬಂದು ಕೆಲವು ನಮ್ಮ ಸ್ನೇಹಿತರು operation success ಎಂದು ಮಾಧ್ಯಮಗಳ ಮುಂದೆ ಹೇಳಿಬಿಟ್ಟರು. ಬಹುಶಃ ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಹಾಗೂ ಮಾನ್ಯ ಅಶೋಕ್‌ರವರು ಬಂದು ನನ್ನ ಜೊತೆ ಚರ್ಚೆ ಮಾಡಿದರು. ಅದು ಯಾರೋ ಒಬ್ಬರು ಜಿಲ್ಲಾಧಿಕಾರಿಯವರು S.P. ವಿಷಯದಲ್ಲಿ ಅಸಮಾಧಾನ ಹಾಗೂ ಆಕ್ರೋಶಕ್ಕೆ ಒಳಗಾಗಿದ್ದಾರೆ, ಅದನ್ನು retention ಮಾಡಿ ಎಂದು ಹೇಳಿದರು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಅದನ್ನು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಈ ಆಪಾದನೆಗೆ ನಾನು ಹೆದರಿಕೊಂಡು ಯಾವುದೇ ಕಾರಣಕ್ಕೂ ಕೂಡ ವರ್ಗಾವಣೆಯನ್ನು ಬದಲಾವಣೆ ಮಾಡುವುದಿಲ್ಲವೆಂಬ ಮಾತನ್ನು ಹೇಳಿದೆ. ನಾನು ತಪ್ಪು ಮಾಡಿದ್ದರೆ ತಾನೆ ಹೆದರಬೇಕಾಗಿರುವುದು. ಮೂರೇ ತಿಂಗಳಿಗೆ 150 ಕೋಟಿ ಇದನ್ನೆಲ್ಲಾ ನಾನು ಈ ಚಿಕ್ಕವಯಸ್ಸಿನಲ್ಲಿಯೇ ನೋಡಿದೆ. ನನ್ನ ಮುಂದೆ ಇರುವ ಇವರ ಮುಂದೆ ನಾವೆಲ್ಲಾ ಸಣ್ಣ ಹುಡುಗರು. ನಮ್ಮ ತಂದೆ ಜೊತೆ ಸಹಪಾಠಿಗಳಾಗಿ ಕೆಲಸ ಮಾಡಿರುವವರು. ರಾಜಕಾರಣದಲ್ಲಿ 8-10 ವರ್ಷಗಳ ಅನುಭವವಿದೆ, ದೇಶಪಾಂಡೆರವರು ಸುಮಾರು 20 ವರ್ಷಗಳ

ಮೇಲೆ ಮಂತ್ರಿಗಳಾಗಿ ಕಾರ್ಯನಿರ್ವಹಸಿರಬಹುದು. ನಮ್ಮನ್ನು ಕೆಲವರು ಇವತ್ತು ತಪ್ಪು ದಾರಿಗೆ ಎಳೆಯುತ್ತಾರೆ. ನಮ್ಮ ಹಿಂದೆ-ಮುಂದೆ ಇರುವ ಜನರ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಮೊನ್ನೆ ರಮೇಶ್ ಕುಮಾರ್‌ರವರು ಭಾಷಣ ಮಾಡುವಾಗ ಹೇಳಿದರು. ಸಧ್ಯ ನನ್ನ ಯಾವುದೋ ಜನ್ಮದ ಪುಣ್ಯವೆಂದು ಹೇಳಬೇಕು. ನನಗೆ ಆಡಳಿತದ ಅನುಭವವಿಲ್ಲದಿದ್ದರು ನನ್ನ ಕಛೇರಿಯಲ್ಲಿದ್ದ ಅಧಿಕಾರಿಗಳಿಂದ ಬಹುಶಃ ನಾನು ಉಳಿದುಕೊಂಡಿದ್ದೇನೆ. ಕೆಲವು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡಿರಬಹುದು ಇಲ್ಲವೆಂದು ನಾನು ಹೇಳುವುದಿಲ್ಲ. ಕೆಲವು ಸ್ನೇಹಿತರುಗಳ ಮನವಿ ಮೇರೆಗೆ ಕೆಲವು ತೀರ್ಮಾನಗಳನ್ನು ಮಾಡಿರಬಹುದು. ನಾನು ತಪ್ಪು ಮಾಡಿಲವೆಂದು ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಕಾನೂನು ಬಾಹಿರವಾಗಿ ತೀರ್ಮಾನಗಳನ್ನು ತೆಗೆದುಕೊಂಡು ಕಡತಗಳನ್ನು ತೆಗೆದುಕೊಂಡು ಬನ್ನಿ ಎಂದು 20 ತಿಂಗಳ ಅಧಿಕರದ ಅವಧಿಯಲ್ಲಿ ನಾನು ಯಾವುದೇ ಒಬ್ಬ ಅಧಿಕಾರಿಗೆ ಹೇಳಿಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಜನತಾ ದರ್ಶನದಲ್ಲಿ ನಾನಿದ್ದಾಗ ಆ ಭಾಗದ ವಿಶ್ವಭಾರತಿ ಹೌಸಿಂಗ್ ಸೊಸೈಟಿಯ 100 ಜನರು ಬಂದರು. ಇದು ಸುಮಾರು 25 ವರ್ಷಗಳ ಸಮಸ್ಯೆಯಾಗಿತ್ತು. ಅಲ್ಲಿ ನಡೆದಿರುವಂತಹ ವ್ಯವಹಾರಗಳು ಮತ್ತು ಸೊಸೈಟಿಯವರ ನಡವಳಿಕೆಯ ಬಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅವತ್ತು ನಾನು ಗಮನಕೊಟ್ಟಿದ್ದೇನೆಂದರೆ, ಆ ಭಾಗದ 100 ಜನ ನಾಗರೀಕರು ಬಂದು ನಮ್ಮನ್ನು ಉಳಿಸಿ, ನಾವು ನಿದ್ರೆ ಮಾಡುವುದಕ್ಕೆ ಆಗದ ಪರಿಸ್ಥಿತಿಯಲ್ಲಿದ್ದೇವೆ ಯಾವಾಗ ಹೊಡೆಯುತ್ತಾರೆಂದು ಗೊತ್ತಿಲ್ಲವೆಂದು ಹೇಳಿದರು. ಅಂದಿನ Urban Department Secretary ಆದ ಲಕ್ಷ್ಮೀವೆಂಕಟಾಚಲಂ ರವರು ಇದ್ದಿದ್ದರಲ್ಲಿ ಪ್ರಾಮಾಣಿಕ ಅಧಿಕಾರಿಯಾಗಿದ್ದರು. ಅವರನ್ನು ಕರೆಸಿ ಕಾನೂನು ವ್ಯಾಪ್ತಿಯಲ್ಲಿ ಇವರಿಗೇನಾದರೂ relief ಕೊಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದೆ. ಏಕೆಂದರೆ ಇದು 25 ವರ್ಷಗಳ ಸಮಸ್ಯೆಯಾಗಿದೆ, ನನಗೆ ಯಾವುದೇ ರೀತಿ ತೊಂದರೆ ಬಾರದ ರೀತಿಯಲ್ಲಿ ಇದನ್ನು ಕಾನೂನು ವ್ಯಾಪ್ತಿಯಲ್ಲಿ ಮಾಡುವುದಕ್ಕೆ ಅವಕಾಶವಿದೆಯೇ ನೋಡಿಯೆಂದು ಹೇಳಿದೆ. ಕೊನೆಗೆ ಅಧಿಕಾರಿಗಳು ನನ್ನ

ಬಳಿ ಫೈಲ್ ತೆಗೆದುಕೊಂಡು ಬಂದು ಕಾನೂನು ವ್ಯಾಪ್ತಿಯಲ್ಲಿ ಮಾಡಬಹುದಾದ ಹೈಕೋರ್ಟ್ ಆದೇಶವೆಂದು ತೋರಿಸಿದರು. ವಿಶ್ವಭಾರತಿ ಸೊಸೈಟಿಗೆ ಸಂಬಂಧಪಟ್ಟಂತೆ ಸುಮಾರು 15–20 ಹೈಕೋರ್ಟ್ ಆದೇಶಗಳಿವೆ. Issue ಒಂದೇ, ಸಮಸ್ಯೆ ಒಂದೇ ಆದರೆ ಒಬ್ಬೊಬ್ಬ judge ಕೊಟ್ಟಿರುವಂತಹ ತೀರ್ಮಾನಗಳನ್ನು ನೋಡಿದರೆ, ಬೇರೆ ಬೇರೆ ರೀತಿಯಾದ ತೀರ್ಮಾನಗಳನ್ನು ಕೊಡುತ್ತಾರೆ. ನನ್ನ ಸ್ನೇಹಿತರಾದ ಕೆಲವು ಸೀನಿಯರ್ ವಕೀಲರನ್ನು ಏನು ಈ ರೀತಿ ತೀರ್ಮಾನಗಳನ್ನು ಕೊಡುತ್ತಾರೆ, ಕಾನೂನಿನಲ್ಲೇನು ಬೇರೆ ಬೇರೆ ಜಡ್ಜ್, ಬೇರೆ ಬೇರೆ ತೀರ್ಪು ಕೊಡುವುದಕ್ಕೆ ಬೇರೆ ಬೆರೆ ಕಾನೂನಿದೆಯೇ ಎಂದು ಕೇಳಿದೆ. ಇಲ್ಲಾ ಆ ರೀತಿ ಇಲ್ಲ ಆ ಸಮಯದಲ್ಲಿ ಮೂಡ್ ಯಾವ ರೀತಿ ಇರುತ್ತದೆ ಅದರ ಮೇಲೆ ಒಂದೊಂದು ಬಾರಿ judgment ಕೊಡುತ್ತಾರೆಂದು ಹೇಳುತ್ತಾರೆ. ಇವೆಲ್ಲವನ್ನೂ ಕೂಡ ನಾವು ಚರ್ಚೆ ಮಾಡಿ ಆಗಿದೆ. ಏಕೆಂದರೆ ನನ್ನದು ಕೂಡ ಒಂದು ಕೋರ್ಟ್ ಕೇಸ್ ಇನ್ನೂ ಇದೆ. ಇಲ್ಲಿ ಕುಸ್ತಿ ಆಡಿ ಅಲ್ಲಿ ಎದುರಿಸುತ್ತಿದ್ದೇನೆ. ಆದರೂ ಕೂಡ ನಾನು ಹೆದರುವುದಿಲ್ಲ. ಇವತ್ತು ಈ ದೇಶಕ್ಕಾಗಿ ಪುಣ್ಯಾತ್ಮ ಅಂಬೇಡ್ಕರ್ ರವರು ಕೊಟ್ಟು ಹೋಗಿರುವ ಮೂರು constitution ವ್ಯವಸ್ಥೆಗಳು ಅವುಗಳು ನಿಜಕ್ಕೂ ಬಡವರಿಗೋಸ್ಕರವಾಗಿ, ಅನ್ಯಾಯಕ್ಕೊಳಗಾದವರು ಯಾರಿದ್ದಾರೆ ಅವರ ಪರವಾಗಿರುವಂತಹ ಈ constitution ಸಂಸ್ಥೆಗಳ ಕಾನೂನೇ ಅಥವಾ ಯಾವುದೋ ಬಲಾಢ್ಯರಿಗೆ, ಶ್ರೀಮಂತರಿಗೆ ಇರುವ ಕಾನೂನುಗಳೇ ಎಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈ ಮೂರು constitution ವ್ಯವಸ್ಥೆಗಳು ಈಗ ಹೋಗುತ್ತಿರುವ ದಾರಿಯಲ್ಲೇ ಹೋದರೆ ನಾವು ಎಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತೇವೆಂಬ ಬಗ್ಗೆ ನಾವೆಲ್ಲಾ ಚಿಂತನೆ ಮಾಡಬೇಕಾಗಿದೆ. ಆ ಕೆಂಪು ಕಟ್ಟಡದಲ್ಲಿರುವಂತಹವರು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ಹೇಳುವುದಕ್ಕೆ ನನಗೆ ಯಾವುದೇ ಮುಜುಗರವಿಲ್ಲ, ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಅರ್ಕಾವತಿ ವಿಷಯದಲ್ಲಿ court contempt ಎಂದು ಹೇಳುತ್ತಿದ್ದೀರಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹೋದರೆ ಮತ್ತೆ ಪ್ರಾರಂಭ ಮಾಡಬೇಕಾಗುತ್ತದೆ. ಅಲ್ಲಿ

ಯಾವುದೇ Court contempt ಇರಲಿಲ್ಲ. ' ಅವರು ಕೊಡುವಂತಹ ಪದ ಬಳಕೆ ಏನಿದೆ ಅದನ್ನು ನಾವು ನಮಗೆ ಬೇಕಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಈ ತೀರ್ಮಾನಗಳು ಮುಂದೆ ಆಗುತ್ತವೆ. ಅವತ್ತು 3889 ಎಕರೆ preliminary notification ಮಾಡಿ 1089 ಎಕರೆಯನ್ನು ಅವತ್ತು ಬಿಡಬೇಕಾದರೆ, 589 ಎಕರೆಯನ್ನು ಬಿ.ಡಿ.ಎ. ಯಿಂದ recommend ಮಾಡಿ ಇನ್ನೂ 500 ಎಕರೆಯನ್ನು ಸರ್ಕಾರದ ಹಂತದಲ್ಲಿ ತೀರ್ಮಾನ ತೆಗೆದುಕೊಂಡಾಗ Single Bench ಒಂದು judgment ಕೊಟ್ಟಿದೆ. Divisional Bench Supreme Court ನಲ್ಲಿ ಈ ಒಂದು ಪ್ರಕರಣದಲ್ಲಿ ನಿಮ್ಮ application of mind ಅನ್ನು ಸರಿಯಾದ ರೀತಿಯಲ್ಲಿ ನೀವು ನಿರ್ವಹಣೆ ಮಾಡಿದ್ದೀರಾ ಎಂದು ಕೇಳಿದ್ದಾರೆ. ಆರು ಮಾರ್ಗಸೂಚಿಯ ಹೆಸರನಲ್ಲಿ ನಾವೇನು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಈ ಸಲಹೆಯನ್ನು ಹೈಕೋರ್ಟ್ Divisonal Bench ಕೊಟ್ಟಿರುವುದಿಲ್ಲ. ಬಿ.ಡಿ.ಎ. ಅಧಿಕಾರಿಗಳು ಆ ಒಂದು ಮಾರ್ಗಸೂಚಿಯನ್ನು Single Bench entire process ಅನ್ನು ರದ್ದು ಮಾಡಿದ ನಂತರ Divisional Bench ಮುಂದೆ ಹೋದಾಗ ನಾವು ತಪ್ಪು ಮಾಡಿದ್ದೇವೆ. ಕೆಲವು errors ಆಗಿದೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಮಗೊಂದು ಅವಕಾಶ ಕೊಡಿ. ಈ ಆರು ಮಾರ್ಗಸೂಚಿಗಳಲ್ಲಿ ನಾವು ಸರಿಪಡಿಸುತ್ತೇವೆಂದು ಬಿ.ಡಿ.ಎ. ಅಧಿಕಾರಿಗಳು ಅರ್ಜಿ ಹಾಕಿರುವುದು. ಅವರು ಕೊಟ್ಟ direction ಅಲ್ಲ. ಇದನ್ನೆಲ್ಲಾ ಸುದೀರ್ಘವಾಗಿ ಹೇಳುವುದಕ್ಕೆ ಹೋದರೆ, ಕೆಂಪಣ್ಣ ಆಯೋಗದ ವಿಷಯವಿರುವುದರಿಂದ ಇದನ್ನು ಅಲ್ಲಿಗೇ ಬಿಡುತ್ತೇನೆ. ಇದನ್ನು ಏಕೆ ನಿಮಗೆ ಹೇಳುತ್ತಿದ್ದೇನೆಂದೆ application of mind ಎಂಬ ಬಗ್ಗೆ ಅವರು ನಮಗೆ ಹೇಳುತ್ತಾರೆ, ಆದರೆ ಅಲ್ಲಿ ಅವರು ಎಷ್ಟರಮಟ್ಟಿಗೆ application of mind ಅನ್ನು follow ಮಾಡುತ್ತಿದ್ದಾರೆ? ಅದರ ಮೇಲೆ division bench ನಲ್ಲಿ ಒಂದು ಅವಕಾಶವನ್ನು ಕೊಟ್ಟರು. ಅದರ ಮೇಲೆ ಬೋಂಡೋ ರಾಮಸ್ವಾಮಿ ಎಂಬುವವರು ಸುಪ್ರೀಂಕೋರ್ಟ್ ಹೋದರು.

ಶ್ರೀ ಕೆ.ಜೆ. ಜಾರ್ಜ್:– ಎಷ್ಟನೇ ಇಸವಿಯಲ್ಲಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– 2005 ರಲ್ಲಿ, ಆಗ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದರು. ನನ್ನ ಕಾಲದಲ್ಲಿ ಅಲ್ಲ. ಇಲ್ಲಿ ಕಾಲದ ಪ್ರಶ್ನೆ ಬರುವುದಿಲ್ಲ. ನಾವು ಯಾವ ರೀತಿ ಹಲವು ತಪ್ಪುಗಳನ್ನು ಮಾಡುತ್ತೇವೆಂಬುದಕ್ಕೆ ಹೇಳುತ್ತಿದ್ದೇನೆ. ಅರ್ಕಾವತಿ ಪ್ರಕರಣದಲ್ಲಿಯೂ ಕೂಡ ಸಿದ್ಧರಾಮಯ್ಯನವರನ್ನು ನಾನು ಅಪ್ರಾಮಾಣಿಕರೂ ಎಂದು ಹೇಳುವುದಕ್ಕೆ ಹೋಗಿಲ್ಲ. ಅರ್ಕಾವತಿ ಪ್ರಕರಣದಲ್ಲಿಯೂ ಕೂಡ ನಡೆದಿರುವಂತಹ ಘಟನೆಗಳನ್ನು ದಾಖಲತಿಯಲ್ಲಿಟ್ಟಿದ್ದೇನೆ. ದಾಖಲಾತಿ ಪುಸ್ತಕದಲ್ಲಿ Uran Development ಅಲ್ಲಿಂದ ನಿಮ್ಮ ಬಿ.ಡಿ.ಎ. ನಲ್ಲಿ ಏನೇನು ನಿರ್ಣಯಗಳನ್ನು ಯಾವ್ಯಾವ ಸಭೆಗಳಲ್ಲಿ ಮಾಡಿಕೊಂಡಿದ್ದಾರೆ ಆ ವಿಷಯಗಳ ಆಧಾರದ ಮೇಲೆ ಮಾಹಿತಿಯನ್ನು ಇಡಬೇಕು. ನಾನೇನಾದರೂ ನಾಟಕದ ಕಂಪನಿಯ hand bill ಅನ್ನು ಅಚ್ಚು ಹೊತ್ತಿ ಪುಸ್ತಕಕ್ಕೆ ಹಾಕುವುದಕ್ಕೆ ಆಗುತ್ತದೆಯೇ? ಇವತ್ತು ಬಿ.ಡಿ.ಎ. ನಲ್ಲಿ ಯಾವ್ಯಾವ ಹಂತದಲ್ಲಿ ತೆಗೆದುಕೊಂಡ ನಿರ್ಧಾರಗಳು 2006 ರ ಮೇ 31 ರಲ್ಲಿ 140 ಎಕರೆ ಮಾತರ ಬರುವುದೆಂದು ಹೇಳುತ್ತಾರೆ. ಸುಪ್ರೀಂಕೋರ್ಟ್‌ನಲ್ಲಿ ಎರಡು ಕಡೆ ವಾದ–ಪ್ರತಿವಾದವನ್ನು ಕೇಳಿಕೊಂಡು judgment reserve ಇಟ್ಟುಕೊಂಡು ಎರಡುವರೆ ವರ್ಷಗಳಾದರೂ judgment ಕೊಡುವುದಿಲ್ಲ. cold storage ನಲ್ಲಿಡುತ್ತಾರೆ. ದಿನಾಂಕ: 05.05.2010 ಕ್ಕೆ ಜಡ್ಜ್‌ಮೆಂಟ್ ಕೊಡುತ್ತಾರೆ. ಆಗಲೂ ಕೂಡ Divisional Bench ಆಗಲಿ ಸುಪ್ರೀಂಕೋರ್ಟ್ ಆಗಲಿ ನಾಲ್ಕು ಜನ ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ಹಾಕಿಕೊಳ್ಳಿ ಅವರಿಗೆ quasi judicial power ಕೊಡಿಯೆಂದು ಯಾವ ಕೋರ್ಟ್‌ನಲ್ಲಿಯೂ ಕೂಡ ಹೇಳಿಲ್ಲ. ಈ ವಿಷಯವನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಇಲ್ಲಿರುವ ಸದಸ್ಯರುಗಳಿಗೆ ಬೇಸರವಾಗಬಹುದು. 2011 ರಲ್ಲಿ ಈ ನಾಲ್ಕು ಜನ ಭೂಸ್ವಾಧೀನಾಧಿಕಾರಿಗಳೇನಿದ್ದರು, 2006, ಮೇ–31 ರಲ್ಲಿ Divisional Bench ನಿಮಗೆ ಅವಕಾಶ ಕೊಟ್ಟು ಅವತ್ತಿನ commissioner ಮತ್ತು ಸಿಬ್ಬದಿ ವರ್ಗದವರಿಗೆ ನೀವು ಕೊಟ್ಟಂತಹ memo ಮೇಲೆ ಬಿ.ಡಿ.ಎ. ದವರು ಅಲ್ಲಿ ಹೋದಂತಹ petitioners ಗೆ ಅರ್ಜಿದಾರರುಗಳು ತೀರ್ಮಾನ ಕೊಟ್ಟಂತಹ ಒಂದು ತಿಂಗಳೊಳಗೆ ಬಿ.ಡಿ.ಎ. ಪ್ರಾಧಿಕಾರದ ಮುಂದೆ ಅರ್ಜಿ ಹಾಕಿಕೊಳ್ಳಿ

ಎಂದು ಹೇಳಿದ್ದರು. ಯಾರು ಒಂದು ತಿಂಗಳೊಳಗೆ ಅರ್ಜಿಗಳನ್ನು ಕೊಡುತ್ತಾರೆ, ಆ ಅರ್ಜಿಗಳನ್ನು ಬಿ.ಡಿ.ಎ. ಅವರು ಸ್ವೀಕಾರ ಮಾಡಿ, ನಾಲ್ಕು ತಿಂಗಳೊಳಗೆ ಸ್ಥಳ ಪರಿಶೀಲನೆ ಮಾಡಲು ಅವಕಾಶ ಕೊಟ್ಟು, ಆರು ಮಾರ್ಗಸೂಚಿಗಳಲ್ಲಿ ಯಾವ್ಯಾವ ಭೂಮಿಗಳು ಬರುತ್ತದೆಯೋ ಅದನ್ನು ಕೈಬಿಡಿ ಎಂದು ಹೇಳಿದ್ದರು. ನಾಲ್ಕು ತಿಂಗಳುಗಳ ಕಾಲ ಸಮಯ ನೀಡಿದ್ದರು. ಅದರ ಮೇಲೆ ಅಂದಿನ ಪ್ರಾಧಿಕಾರದಲ್ಲಿ, ದಿನಾಂಕ 25.12.2005 ಕ್ಕೆ 1076 ಜನರು ಅರ್ಜಿಯನ್ನು ಹಾಕಿಕೊಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಆ ಪುಸ್ತಕದಲ್ಲಿ ಎಲ್ಲಾ ಮಾಹಿತಿಗಳನ್ನು ನೀಡಿದ್ದೆ. ಆ ಅರ್ಜಿಗಳನ್ನೂ ಸ್ವೀಕಾರ ಮಾಡಿಕೊಂಡು 1076 ಜನರಿಗೆ ನೋಟೀಸ್ ನೀಡುತ್ತಾರೆ. ಅವರಿಂದ ಎಲ್ಲಾ ರೀತಿಯ hearing ಮಾಡಿ, ಅಂದು ಅಧಿಕಾರದಲ್ಲಿದ್ದ ಬಿ.ಡಿ.ಎ. ಕಮೀಷನರ್ ಅವರೇ ಐದು ದಿನಗಳ ಕಾಲ 2,750 ಎಕರೆ ಪ್ರದೇಶದಲ್ಲಿ spot inspection ಮಾಡುತ್ತಾರೆ. ಸರ್ವೆಯರ್‌ಗಳು ಅರ್ಜಿ ಹಾಕಿರುವ 1076 ಜನರ ಜಮೀನುಗಳಿಗೆ ಹೋಗಿ ಸರ್ವೆ ಮಾಡಿ ಸಂಪೂರ್ಣ ನಕ್ಷೆಯನ್ನು ಪ್ರಿಪೇರ್ ಮಾಡಿ ಪ್ರಾಧಿಕಾರದ ಮುಂದಿಟ್ಟಿದ್ದಾರೆ. ಪ್ರಾಧಿಕಾರದ ಮೀಟಿಂಗ್‌ನಲ್ಲಿ ಸರ್ವೆಯರ್‌ಗಳು ಹೇಳಿರುವುದೇನೆಂದರೆ, 1076 ಎಕರೆಯಲ್ಲಿ ಬಿ.ಡಿ.ಎ. ಅಧಿಕಾರಿಗಳು, ಸಿಬ್ಬಂದಿವರ್ಗದವರು inspection ಮಾಡಿದ ನಂತರ ವಾಸ್ತವಾಂಶದ ವರದಿಯನ್ನು ಮತ್ತು ಸ್ಪಷ್ಟ ಚಿತ್ರಣವನ್ನು ನೀಡುತ್ತಾರೆ. ಆ ವಿಷಯವನ್ನು ಹೇಳಿ ಎಂದು ಹೇಳುವುದಕ್ಕೆ ಹೇಳುತ್ತಿದ್ದೇನೆ. ಆ ವಿಷಯ ಬೇಡವೆಂದರೆ ನಿಲ್ಲಿಸುತ್ತೇನೆ.

ಉಪಾಧ್ಯಕ್ಷರು:- ದಾಖಲೆಗಳೇನಿವೆ ಅವುಗಳನ್ನು Judicial committee ಮುಂದೆ ಕೊಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- Judicial committee ಇರುವಾಗ, ಪುನಃ ಇದರ ವಿವರವನ್ನು ಹೇಳುವುದಕ್ಕೆ ಹೋದರೆ, ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಿಮ್ಮ ಗೃಹ ಸಚಿವರೇ ಹೇಳಿ ಎಂದು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ಬೇಡವೆಂದರೆ ಇಲ್ಲಿಗೆ ಬೇಕಾದರೂ ನಿಲ್ಲಿಸುತ್ತೇನೆ.

ಶ್ರೀ ಸಿದ್ದರಾಮಯ್ಯ:- ಅವರು ಹೇಳಿದರು, ಇವರು ಹೇಳಿದರು ಎಂದು ಹೇಳುವುದಲ್ಲ. No, no…

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಮಂತ್ರಿಗಳು):- ನಾನೇನು ಹೇಳಿದ್ದೇನೆಂದರೆ, ವಿಚಾರ ಹೇಳಿದರ ನಿಮಗೆ ಮುಜುಗರ ಆಗುತ್ತದೆಂದು ಹೇಳಿದ್ದಕ್ಕಾಗಿ ನಾನು ಹೇಳಿದೆ.

ಉಪಾಧ್ಯಕ್ಷರು:- ನಿಮ್ಮ ಹತ್ತಿರ ಇರುವ ದಾಖಲೆಗಳನ್ನು ಕಮಿಟಿ ಮುಂದೆ ನೀಡಿ.

ಶ್ರೀ ಸಿದ್ದರಾಮಯ್ಯ:- ಈ ವಿಚಾರವು Judicial Commission ಮುಂದಿರುವುದರಿಂದ ಅದರ merits and de-merits ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅವಕಾಶ ಕೊಟ್ಟರೆ ಮಾತ್ರ ಚರ್ಚೆ ಮಾಡಬೇಕಾಗುತ್ತದೆಯೇ ಹೊರತು ಇಲ್ಲದಿದ್ದರೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಇಲ್ಲದಿದ್ದರೆ ಅದು Subjudice ಆಗುತ್ತದೆ.

ಉಪಾಧ್ಯಕ್ಷರು:- ನಿಮ್ಮ ಹತ್ತಿರ ಇರುವ ದಾಖಲೆಗಳನ್ನು Judical Committee ಗೆ ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನೂ ಸಹ ಅದನ್ನೇ ಹೇಳುತ್ತಿದದೇನೆ. ಈಗಾಗಲೇ ಕಳೆದ 15 ದಿನಗಳಿಂದ.... ಬೆಳಿಗ್ಗೆ ಮಾಹಿತಿಯನ್ನು ತಂದು ಇಲ್ಲಿಟ್ಟಿದ್ದೆ. ನೀವು ಕೆಂಪಣ್ಣ ಆಯೋಗಕ್ಕೆ ಒಂದೂವರೆ ಲಕ್ಷ ಪುಟಗಳನ್ನು ಕಳುಹಿಸುತ್ತಿರಬಹುದು. ಅಲ್ಲಿ ಏನೇನು ನಡೆದಿದೆ ಎಂಬ ಬಗ್ಗೆ ನಾನು ಸುಮಾರು 15 ಸಾವಿರದಿಂದ 20 ಸಾವಿರ ಪುಟಗಳವರೆಗೆ ಓದಿರುತ್ತೇನೆ. ಚರ್ಚೆ ಬೇಡವೆಂದರೆ ನಿಲ್ಲಿಸುತ್ತೇನೆ. ನಾನು ಸದನದ ನಿಯಮಾವಳಿಗಳನ್ನು ಗೌರವ ಪೂರ್ವಕವಾಗಿ ಪಾಲಿಸುವ ನಡವಳಿಕೆಯನ್ನು ಇರುವಂತಹವನು.

ಉಪಾಧ್ಯಕ್ಷರು:- ನಾನು ಇನ್ನೂ ಒಂದು ಪ್ರಮುಖವಾದ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಲೇಬೇಕಾಗಿದೆ. ಅರ್ಕಾವತಿ ವಿಷಯವನ್ನು ಬಿಟ್ಟು ಬಿಡುತ್ತೇನೆ. ಎಲ್ಲಿ fight ಮಾಡಬೇಕೋ ಅಲ್ಲಿ

ಮಾಡೋಣ. ನನ್ನದು ತಪ್ಪಾಗಿದ್ದರೆ ನಾನು ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧನಿದ್ದೇನೆ. ನನ್ನ ಮೇಲೆಯೂ 78 ಎಕರೆಯ ಹಗರಣವಿದೆಯೆಂದು ಹೇಳಿಕೊಂಡಿದ್ದಾರೆ. ನಾನು fight ಮಾಡುವುದಕ್ಕೆ ತಯಾರಾಗಿದ್ದೆ. ಪ್ರಮುಖವಾದ ವಿಷಯವೇನೆಂದರೆ, Karnataka Public Service Commission ವಿಷಯದಲ್ಲಿ ಯಾವ್ಯಾವ ರೀತಿಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಬಗ್ಗೆ .... 'redo' ಎನ್ನುವ ಪದ ನಿಮಗೆ ಎಷ್ಟು ಅಪ್ಯಾಯಮಾನ ಎನ್ನುವುದು ನನಗೆ ಗೊತ್ತಿಲ್ಲ. 2011 ರ ಬ್ಯಾಚ್‌ನಲ್ಲಿಯೂ redo ಎನ್ನುವ ಪದವನ್ನು ಬಳಕೆ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:– Redo ಎನ್ನುವ ಪದ ಮೊದಲಿಗೆ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ಉಪಯೋಗಿಸಿರುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಸಿದ್ದರಾಮಯ್ಯ:– ತಾವು ಹೇಳಿರುವುದಕ್ಕೆ ಹೇಳುತ್ತಿದ್ದೇನೆ. Redo ಎನ್ನುವ ಪದ ನಾವ್ಯಾರೂ ಉಪಯೋಗ ಮಾಡಿದ್ದಲ್ಲ. 'Redo' has been used by Hon'ble High Court of Karnataka.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– Redo ಎನ್ನುವ ಪದಕ್ಕೆ ಸ್ವಲ್ಪ ಅರ್ಥವನ್ನು ಹೇಳಿ. Redo ಎಂದರೆ ಅರ್ಥವೇನು?

ಶ್ರೀ ಸಿದ್ದರಾಮಯ್ಯ:– ಆ ಪದದ ಬಗ್ಗೆ ವ್ಯಾಖ್ಯಾನ ಮಾಡಬೇಕೆಂದರೆ ಮಾಡೋಣ. ಅದು ಬೇರೆ ವಿಚಾರ. ಆದರೆ Redo ಎನ್ನುವ ಪದವನ್ನು, that has been used by Hon'ble Court of Karnataka.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಆಯಿತು. ಆ Redo ಪದವನ್ನು ಬಿಟ್ಟುಬಿಡೋಣ. ಕೆ.ಪಿ.ಎಸ್.ಸಿ. ವಿಚಾರದಲ್ಲಿ ಕೆಲವೊಂದು ವಿಚಾರಗಳನ್ನೂ ಇಲ್ಲಿ ಚರ್ಚೆ ಮಾಡಲೇಬೇಕಾಗಿದೆ. ಕಾರಣವೇನೆಂದರೆ, ಕಳೆದ 5–6 ವರ್ಷಗಳಿಮದ ದಿನನಿತ್ಯ ಪ್ರಮುಖವಾದಂತಹ ಪತ್ರಿಕೆಗಳಲ್ಲಿ ವಿಷಯಗಳು ಪ್ರಸ್ತಾಪವಾಗುತ್ತಲೇ ಇವೆ. ಉದಾಹರಣೆಗೆ 'ಕರ್ಮಕಾಂಡ' ಇತ್ಯಾದಿ. ಕೆ.ಪಿ.ಎಸ್.ಸಿ. ಎಂದರೆ ಎಲ್ಲರಿಗೂ ವಾಕರಿಕೆ ಬರುವಷ್ಟು ಅಪನಂಬಿಕೆ

ಮೂಡಿದೆ. ಅಲ್ಲಿರುವ ನಿಜವಾದ ಸತ್ಯಾಂಶಗಳೇನು? ಅಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆ ಸದನದ ಗಮನಕ್ಕೆ ತರಲೇಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬಿ.ಜೆ.ಪಿ. ಸರ್ಕಾರ ಮತ್ತು ನಮ್ಮ ನಡುವೆ ನಡೆದಂತಹ ಸಂಘರ್ಷ ಏನಿದೆ, ಅದರ ಬಗ್ಗೆ ಚರ್ಚೆ ಮಾಡಬೇಡಿ, ಅದನ್ನು ಬಿಟ್ಟು ಬಿಡಿ ಎಂದು ಬಹಳಷ್ಟು ಜನರು ಹೇಳುತ್ತಾರೆ. ಎಲ್ಲೆಲ್ಲಿ ಎಡವುತ್ತಿದ್ದೀರಿ ಎನ್ನುವುದಕ್ಕೆ ಹೇಳುತ್ತಿದ್ದೇನೆ. ನೀವೆಲ್ಲರೂ ಅನುಭವಸ್ಥರಿದ್ದೀರಿ, ನಮಗೆಲ್ಲಾ ನೀವೆಲ್ಲರೂ ಹಿರಿಯರಿದ್ದೀರಿ, 10 ವರ್ಷಗಳ ಕೆಲಸ ಮಾಡಿದ್ದೀರಿ. 2011 ರ ಬ್ಯಾಚ್‌ನಲ್ಲಿ ತೀರ್ಮಾನ ಮಾಡುವಂತಹ ವಿಷಯದಲ್ಲಿ ನೀವು ಎಷ್ಟು ತಪ್ಪುಗಳನ್ನು ಮಾಡಿದ್ದೀರಿ ಎಂಬ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲೇಬೇಕಾಗಿದೆ. ರಾಜ್ಯದ ಜನತೆಗೆ ಕೆ.ಪಿ.ಎಸ್.ಸಿ. ವಿಷಯದಲ್ಲಿ 1998, 1999, 2004 ರಲ್ಲಿ ನಡೆದ ಘಟನೆಯಿಂದ ಅಪನಂಬಿಕೆ ಪ್ರಾರಂಭವಾಯಿತು. ಕೋರ್ಟಿನಲ್ಲಿಯೂ ಸಹ ಕೇಸ್‌ಗಳಿದ್ದು, ಆ ವಿಷಯಗಳಿಗೆ ನಾನು ಹೋಗುವುದಿಲ್ಲ. COD ತನಿಖೆಗೆ ಇವರು ಆದೇಶ ನೀಡಿದರು. ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, COD ಅವರು 2011 ರ ಬಗ್ಗೆ ಕಾಮೆಂಟ್ಸ್ ಮಾಡಿಕೊಂಡು ಕೆಲಸ ಮಾಡಿಕೊಳ್ಳಬೇಕು. ಆದರೆ COD ಅವರು ಎಂತಹ ಅತ್ಯದ್ಭುತವಾದ ವರದಿಯನ್ನು ಕೊಟ್ಟಿದ್ದಾರೆಂದರೆ, 2011 ರ ಬ್ಯಾಚ್‌ನಲ್ಲಿ ನಡೆದಿರತಕ್ಕಂತಹ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಿ ಎಂದರೆ, ಪಾಪ, ಸಿ.ಓ.ಡಿ. ಅವರು ವರದಿಯಲ್ಲಿ 1998, 1999 ಮತ್ತು 2004 ರಲ್ಲಿರುವ ವಿಷಯಗಳನ್ನು ರೆಫರ್ ಮಾಡಿ ವರದಿಯನ್ನು ನೀಡಿರುತ್ತಾರೆ. 1998 ರಲ್ಲಿ ಮೋನಪ್ಪ ಎನ್ನುವವರಿಗೆ ಸಂಬಂಧಿಸಿದಂತೆ ನಡೆದ ಘಟನೆಯನ್ನು ತಿಳಿಸುತ್ತಾರೆ. ಮಾಜಿ ಛೇರ್ಮನ್ ಮತ್ತು 5 others accused ಮೇಲೆ ಕೇಸ್ ಇರುವ ಬಗ್ಗೆ ಹೇಳಿರುತ್ತಾರೆ. ಸಿ.ಓ.ಡಿ. ಅವರು 2011 ರ ಬಗ್ಗೆ ಮಾತ್ರ report ಕೊಡಬೇಕು.

ಉಪಾಧ್ಯಕ್ಷರು:- Terms of reference ಅಲ್ಲಿಯವರೆಗೂ ಇತ್ತೇನೋ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲ. 2011 ಕ್ಕೆ ಇವರು ಕೊಟ್ಟಿರುವುದು. 1998 ರ ಬ್ಯಾಚ್‌ನಲ್ಲಿ ರಾಮೇಶ್ವರಪ್ಪ, ಮೋನಪ್ಪ ಮತ್ತು

ಅವರ ಕುಟುಂಬದ ಐದು ಜನರದ್ದು ಸೇರಿ ನಡೆಸಿದ್ದರಲ್ಲ, ಬಹುಶಃ ಅವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡುವುದಕ್ಕೆ ಶಿಫಾರಸ್ಸು ನೀಡಿ 2–3 ವರ್ಷಗಳಾಯಿತು. ಆದರೆ ಫೈಲ್ ಸರ್ಕಾರದ ಮುಂದಿದ್ದರೂ ಸಹ ಅವರು ಈಗಲೂ ಮೈಸೂರಿನ Food Department ನಲ್ಲಿ ಕೆಲಸದಲ್ಲಿದ್ದಾರೆ. ಆ ವಿಷಯದಲ್ಲಿ ಬಿ.ಜೆ.ಪಿ. ಸರ್ಕಾರ ಮತ್ತು ನಮಗೂ ಸಂಘರ್ಷ ನಡೆದಾಗ ಅಲ್ಲೊಂದು ಹೊಸ ಟರ್ನ್ ತೆಗೆದುಕೊಂಡಿತು. ಪಾಪ, ಯಡಿಯೂರಪ್ಪ ನವರು ನಮ್ಮನ್ನು ಯಾವುದಲ್ಲಿಯಾದರೂ ಹಿಡಿದು ಹಾಕಬೇಕೆಂದು ಪ್ರಯತ್ನ ಪಟ್ಟರು. ಆದರೆ ಯಾವುದರಲ್ಲಿಯೂ ಹಿಡಿಯುವುದಕ್ಕಾಗಲಿಲ್ಲ. Second Saturday and Sunday ಎರಡು ದಿನಗಳ ಕಾಲ ಎಲ್ಲಾ ಅಧಿಕಾರಿಗಳಿಗೂ ಸೂಚನೆ ನೀಡಿ, ಬೆಂಗಳೂರಿನಲ್ಲಿರವು ಎಲ್ಲಾ Sub Registrar ಕಛೇರಿಗಳನ್ನು open ಮಾಡಿಸಿಕೊಂಡು, ಎಲ್ಲಾ ದಾಖಲೆಗಳನ್ನು ಹುಡುಕಿಸಿದರು. ಅವರ ಕರ್ತವ್ಯ ಅವರು ಮಾಡಿಕೊಂಡರು, ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಏನೂ ಆಗಿಲ್ಲ. ಕೊನೆಗೆ, ಮಾಜಿ ಕೆ.ಪಿ.ಎಸ್.ಸಿ. ಅಧ್ಯಕ್ಷರ ಮೇಲೆ ಬಾಣವನ್ನು ಬಿಟ್ಟರು. ನಾನು ಯಡಿಯೂರಪ್ಪನವರ ಮಗಳ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿ, ಅವರಲ್ಲಿ ಮನವಿಯೂ ಸಹ ಮಾಡಿದೆ. ದಯವಿಟ್ಟು ನಮ್ಮದು, ನಿಮ್ಮದು ರಾಜಕಾರಣವೇನಾದರೂ ಇದ್ದರೆ ಅದನ್ನು ಮಾಡಿಕೊಳ್ಳೋಣ. ಅಮಾಯಕರಿಗೆ ತೊಂದರೆಯಾಗುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಡಿ. ಯಾರೇ ತಪ್ಪು ಮಾಡಿದ್ದರೂ ಅವರನ್ನು hang ಮಾಡಿ. ಅದಕ್ಕೆ ನಾನು ಬೆಂಬಲ ಕೊಡುವುದಿಲ್ಲ. ಗಣರಾಜ್ಯೋತ್ಸವದ ದಿವಸ ನಿಮ್ಮ ಸರ್ಕಾರದ ಬಗ್ಗೆ ಬಹಳ ಕೆಟ್ಟ ರೀತಿಯಲ್ಲಿ ಒಬ್ಬರು ಮಾಜಿ ಅಧಿಕಾರಿಗಳು ಮಾತನಾಡಿದ್ದಾರೆ. ನಾನು ಅದನ್ನೂ ಪತ್ರಿಕೆಯಲ್ಲಿ ನೋಡಿದ್ದೇನೆ. ಅವರು ತುಂಬಾ ಕೆಟ್ಟ ಪದಗಳನ್ನೇ ಬಳಕೆ ಮಾಡಿದ್ದಾರೆ. ಅವರು ನಿಮ್ಮ COD ಗೆ Additional D. G. ಆಗಿದ್ದಾರೆ. ಈಗ ಅವರು ರಾಜಕಾರಣಕ್ಕೆ ಬಂದಿದ್ದಾರೆ. 2–3 ಪಾರ್ಟಿಯನ್ನು ನೋಡಿ ಆಗಿದೆ. ಅವರು ಯಾರು ಎಂದು ಇನ್ನೂ ಗೊತ್ತಾಗಲಿಲ್ಲವೆ?

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಕುಮಾರಸ್ವಾಮಿಯವರೆ, ನಮಗೆ ವಯಸ್ಸಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ರಮೇಶ್‌ಕುಮಾರ್‌ರವರೆ, ತಮಗೆ ವಯಸ್ಸಾದರೆ ಏನು? ಮರೆವಿನಲ್ಲಿ ವಯಸ್ಸು ಆಗಿಲ್ಲ. ಆ ವಯಸ್ಸು ಬಂದಂತೆ ಕಾಣುವುದಿಲ್ಲ. ನಮ್ಮ ಸೀನಿಯರ್ ನಾಯಕರು ನನ್ನ ಕೈಯಲ್ಲಿ ಹೇಳಿಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):- ಮಾನ್ಯ ಕುಮಾರಸ್ವಾಮಿಯವರೆ, ನೀವು ನಿಮ್ಮ ಕೈಯಲ್ಲಿ ಹೇಳಿಸುತ್ತಿದ್ದೀರಿ. ತಾವು ಹೆಸರು ಹೇಳಿಸಿದ್ದೀರಲ್ಲ. ಇಲ್ಲಿ ಕುಳಿತುಕೊಂಡಿರುವ ನಾವು ದಡ್ಡರು ತಾನೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರು ಬರುತ್ತಿದ್ದಾರೆ. ಇನ್ನು ನಾನು ಮಾತನಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮರ್:- ಮಾನ್ಯ ಕುಮಾರಸ್ವಾಮಿಯವರೆ, ತಮ್ಮ ಸುದ್ದಿಗೆ ಯಾರೂ ಬಂದಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ತಾವು ದಡ್ಡರೆಂದು ಏನಾದರೂ ಹೇಳಿದ್ದಾರೆಯೇ? ನೀವು ಸಾರ್ವಭೌಮರು ಎಂದು ಜಗತ್ತೆ ನಿಮ್ಮನ್ನು ಒಪ್ಪಿಕೊಂಡಿದೆ. ನಿಮ್ಮ ಸುದ್ದಿಗೆ ಬರದ ಹಾಗೆ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಂಥವರೇ ಸುಮ್ಮನೆ ಆಗಿದ್ದಾರೆ. ನಮ್ಮದೇನಿದೆ? ನೀವು ದಡ್ಡರಾಗುತ್ತೀರಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಅವರು 53 ದಿವಸಗಳ ಕಾಲ ಜೈಲಿಗೆ ಹೋದರು. 1998-99 ಬ್ಯಾಚ್ ಅನ್ನು ನಡೆಸಿರತಕ್ಕಂಥದ್ದು ಅಧ್ಯಕ್ಷರೇ ಬೇರೆಯವರು.

ಶ್ರೀ ಕೆ.ಆರ್. ರಮೇಶ್ ಕುಮರ್:- ಮಾನ್ಯ ಉಪಾಧ್ಯಕ್ಷರೆ, ಇಬ್ಬರದ್ದು ಕಬ್ಬಡಿ ಇತ್ತಲ್ಲಾ!

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಯಾವ ಕಬ್ಬಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನೀವು ride ಗೆ ಹೋಗುವುದು ಮತ್ತು ಮಾನ್ಯ ಯಡ್ಯೂರಪ್ಪನವರು . . .ಹೇಗೆ ಆಯಿತು ಎಂದು ಹೇಳಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ರಮೇಶ್‌ಕುಮಾರ್‌ರವರೆ, ನಾನು, ಅವರಿಗೆ requet ಮಾಡಿದ್ದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಕುಮಾರಸ್ವಾಮಿಯವರೆ, ತಾವು ಅವರನ್ನು ಒಂದು ಸಲ ಹಿಡಿದಿರಿ. ಆಮೇಲೆ ಅದರ ಪರಿಣಾಮ ಅವರಿಗೆ ಏನೇನೋ ಆಯಿತು. ಅವರಿಗೆ ಹಿಡಿಯುವುದಕ್ಕೆ ಆಗಲಿಲ್ಲ. ಅವರು ಬಂದಾಗ ಉಸಿರು ಕಟ್ಟಿಕೊಂಡು ಬಿಟ್ಟಿತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಆಗಲಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರು ಇನ್ನು ಹತ್ತು ನಿಮಿಷಗಳವರೆಗೆ ರೆಸ್ಟ್ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಕುಮಾರಸ್ವಾಮಿಯವರೆ, ಅದು ಕಬ್ಬಡಿ ಇರಲಿಲ್ಲ. ಹಿಂದೆ ಕಬ್ಬಡಿ ಎಂದು ಕರೆಯುತ್ತಿರಲಿಲ್ಲ. ಆಂಚ್, ಅಳೀಚ್, ಟೆಂಗಾಣಕ್ಕಣ್ ಟ್ಯಾಮೀಚ್ ಎಂದು ಆಡುತ್ತಿದ್ದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಾವು ಬಂದಿದ್ದೀರಿ. ಮಾನ್ಯ ಉಪಾಧ್ಯಕ್ಷರು ನನಗೆ ಮತನಾಡಲು ಒಳ್ಳೆಯ ಅವಕಾಶ ಕೊಟ್ಟಿದದರು. ಇನ್ನು 10 ನಿಮಿಷಗಳವರೆಗೆ ನಾನು ಮಾತನಾಡುವುದನ್ನು ತಡೆಯಬೇಡಿ. ನಾನು ಅದನ್ನು ಏತಕ್ಕಾಗಿ refer ಮಾಡಿದೆ ಅಂದರೆ, ಒಂದೊಂದು ಸಲ ಅಮಾಯಕ ಕುಟುಂಬಗಳ ಮೇಲೆ ಆಗುವಂಥ ಅನಾಹುತಗಳಿವೆಯಲ್ಲಾ, 1998-99 ರಲ್ಲಿ ಇದ್ದಂಥ ಅಧ್ಯಕ್ಷರೇ ಬೇರೆ. ಅವರ ಮೇಲೆ ಏನೂ ಆಗಲಿಲ್ಲ. Governor ಅವರು IAS ಅಧಿಕಾರಿಯಾದ Secretary ಯವರನ್ನು ಕಳುಹಿಸಿರುತ್ತಾರಲ್ಲ ಅವರಿಗೆ member ಗಳಿಗಿಂತ ಹೆಚ್ಚಿನ ಜವಾಬ್ದಾರಿ ಇರುತ್ತೆ. ಆ ಪ್ರಕರಣದಲ್ಲಿ Moderation list

ಮಾಡುವುದಕ್ಕೆ ಕೋರ್ಟ್‌ನಲ್ಲಿ ಹೇಳಿದ್ದರು. Moderation list ಅನ್ನು ಅಧ್ಯಕ್ಷರು, members ಮಾಡುತ್ತಾರೆಯೇ ಅಥವಾ ಅಲ್ಲಿರುವ IAS Office ಆದ Secretary ಅವರು ಮಾಡುತ್ತಾರೆಯೇ? ಅದು ಅವನ ಜವಾಬ್ದಾರಿಯೇ? ಕೊನೆಗೆ, 53 ದಿವಸಗಳ ಕಾಲ ಜೈಲಿಗೆ ಕಳುಹಿಸಿದರು. ಈಗ ಆ great COD ಯವರು Charge sheet ನಲ್ಲಿ ಏನು ರಿಪೋರ್ಟ್ ಕೊಟ್ಟಿದ್ದಾರೆ? ಆ ಅಧ್ಯಕ್ಷರು 53 ದಿವಸಗಳ ಕಾಲ ಜೈಲಿನಲ್ಲಿ ಇದ್ದರು. ಅವರು ಯಾವುದೋ fake certificate ಅನ್ನು accept ಮಾಡಿಕೊಂಡರು ಎಂದು ಅವರ ಮೇಲೆ Charge sheet ನಲ್ಲಿ ಒಂದು ಆಪಾದನೆಇದೆ. ಆ ಒಂದೇ ಒಂದು ಆಪಾದನೆಯನ್ನು COD ಯವರು ಅವರ ಮೇಲೆ charge sheet ನಲ್ಲಿ ಕೊಟ್ಟಿರುವುದು. ಅದಕ್ಕೆ ಅವರನ್ನು 53 ದಿವಸಗಳ ಕಾಲ ಜೈಲಿಗೆ ಕಳುಹಿಸಿದರು. ನಾವು, ಇವತ್ತಿನ ದಿವಸ ಈ constitutional ವ್ಯವಸ್ಥೆಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅದು fake certificate ಅಥವಾ original certificate ಎಂದು ತೀರ್ಮಾನ ಮಾಡುವವರು ಯಾರು? ತಹಶೀಲ್ದಾರರು ಕೊಡುತ್ತಾರೆ. ಡಿ.ಸಿ.ಯವರು raise ಮಾಡುತ್ತಾರೆ. ಇಲ್ಲಿ Secretary ಅವರು ಮಾಡುತ್ತಾರೆ. ಅದು ಅಧ್ಯಕ್ಷನಿಗೆ ಸಂಬಂಧವಿಲ್ಲ, member ಗೆ ಸಂಬಂಧವಿಲ್ಲ. ಮಾಧ್ಯಮದ ಸ್ನೇಹಿತರಿಗೂ ನಾನು ಮನವಿ ಮಾಡುವುದೇನೆಂದರೆ, ಯಾರೋ ಹೇಳುವಂಥ ಸುದ್ದಿಗಳನ್ನು ಸತ್ಯವೆಂದುಕೊಳ್ಳಬೇಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಕುಮಾರಸ್ವಾಮಿಯವರೆ, ಯಾರು ಪತ್ರಿಕೆಗಳನ್ನ ಓದುವುದಿಲ್ಲ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ರಮೇಶ್‌ಕುಮಾರ್‌ರವರೆ, ಸತ್ಯ ಬರೆದರೆ ಯಾರೂ ಸಹ ಓದುವುದಿಲ್ಲ. ಮಸಾಲೆ ಇದ್ದರೆ ಮಾತ್ರ ಓದುವುದು. 2013 ರಲ್ಲಿ ಮಾನ್ಯ ಯಡ್ಯೂರಪ್ಪನವರು ಇಲ್ಲಿ ಇದ್ದರು. ಯಾರೋ ಒಬ್ಬ ಅಭ್ಯರ್ಥಿ ನನಗೆ ಕೆಲಸ ಸಿಗಲಿಲ್ಲ, ಹಣ ಕೇಳಿದರು ಎಂದರು. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ನೀಡಿದರು. ನಾನು ಈ ವಿಷಯವನ್ನು ಏಕೆ ಹೇಳಲೇಬೇಕಾಗಿದೆ ಎಂದರೆ, The Times of India

ಎಂಬ ಪತ್ರಿಕೆಯಲ್ಲಿ 'ಹಿಂದಿನ ಬ್ಯಾಚುಗಳಲ್ಲಿ Preliminary exam ಗೇ ಹೋಗಿಲ್ಲ, Preliminary exam ಅನ್ನು pass ಮಾಡಿಕೊಂಡು final exam ಬರೆದಿಲ್ಲ, interview ಗೆ ಹೋಗಿಲ್ಲ, ಅಂಥವನನ್ನು Assistant Commissioner ಆಗಿ KPSC ಯಲ್ಲಿ select ಮಾಡಿದ್ದಾರೆ' ಎಂದು ಬರೆದರು. ನಾನು ಪ್ರಸ್ತಾಪ ಮಾಡಿದ್ದೆ. ತಾವೂ ಹೇಳಿದಿರಿ. ನಾನು ಅದನ್ನು ಇನ್ನೂ ಮರೆತಿಲ್ಲ. ಅಂಥ ಅಧಿಕಾರಿ exam ಬರೆಯದೆ, interview ಮಾಡದೆ, Assistant Commissioner ಕೆಲಸಕ್ಕೆ ಹೋಗಿದ್ದರೆ ಮೊದಲು arrest ಮಾಡಿ ಎಂದು ತಾವು ಹೇಳಿದಿರಿ. ಅವರು ಸಿಕ್ಕಿದ್ದಾರೆಯೇ? ಪತ್ರಿಕೆಯಲ್ಲಿ ಬರೆಸಿದ್ದರಲ್ಲಾ, ಇದನ್ನೆಲ್ಲವನ್ನೂ ಸತ್ಯವೆಂದು ತಿಳಿದುಕೊಂಡು ಆ ಒಂದು ಸಂಸ್ಥೆಗಳ ಬಗ್ಗೆ ಹಂತ ಹಂತವಾಗಿ ನಾವೇ ಇವತ್ತು ಅಪನಂಬಿಕೆಯನ್ನು ಮೂಡಿಸುತ್ತಿದ್ದೇವೆ. ನಾನು ಅದಕ್ಕೆ advocate ಮಾಡುವುದಕ್ಕೆ ನಿಂತಿಲ್ಲ. ಅವರು ಯಾರೇ ಇರಲಿ, ತಪ್ಪು ಮಾಡಿದ್ದರೆ serious action ತೆಗೆದುಕೊಳ್ಳಲಿ ಎಂದು ಹೇಳುತತೇನೆ. ನನಗೆ, ಏಕೆ ಆ KPSC ಬಗ್ಗೆ ಚರ್ಚೆ ಮಾಡುತ್ತೀರಿ, ಬಿಟ್ಟುಬಿಡಿ, ಜನಕ್ಕೆ ಅದರ ಬಗ್ಗೆ ಅಸಹ್ಯ ಇದೆ, ಇದರ ಬಗ್ಗೆ ಚರ್ಚೆ ಮಾಡಿದರೆ ನಿಮಗೆ ಕೆಟ್ಟ ಹೆಸರು ಬರುತ್ತದೆಂದು ಬಹಳ ಜನ ಹೇಳುತ್ತಾರೆ. ಆದರೆ, ಈ ಜವಾಬ್ದಾರಿಯುತವಾದ ಸ್ಥಾನದಲ್ಲಿ ನಾವು ಕುಳಿತು ಕೆಲಸ ಮಾಡಬೇಕಾದರೆ, ಈ ಸಂಸ್ಥೆಗಳು ಉಳಿಯಬೇಕೆನ್ನುವಂಥ ಕಾಳಜಿ ನಮಗಿದ್ದರೆ, ಇವತ್ತು ಇರತಕ್ಕಂಥ ವಾಸ್ತವಾಂಶಗಳನ್ನು ಜನತೆಯ ಮುಂದೆ ಇಡದೆ ಇದ್ದರೆ ನಾವು ಈ ಸಂಸ್ಥೆಗಳನ್ನು ಮುಂದೆ ಉಳಿಸುವುದಕ್ಕೆ ಆಗುತ್ತದೆಯೇ? ಇದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. 2011 ರ ಬ್ಯಾಚ್‌ನಲ್ಲಿ ಒಬ್ಬ ಕುರುಡನು ತಹಶೀಲ್ದಾರನಾಗಿ ಆಯ್ಕೆ ಆಗಿದ್ದನು. ಇವತ್ತು ತಾವು, 460 ಜನರನ್ನು ಆಯ್ಕೆ ಮಾಡುವುದಕ್ಕೆ KPSC ಗೆ ಸೂಚನೆ ಕೊಟ್ಟಿದ್ದೀರಿ. ಆದರೆ, ಇವತ್ತು handicapped ಗೆ ಯಾವುದೇ reservation ಅಲ್ಲಿ ಇಲ್ಲ. ಒಬ್ಬ ಕುರುಡ ಕಷ್ಟಪಟ್ಟು ತಹಶೀಲ್ದಾರನಾಗಿ ಆಯ್ಕೆ ಆಗಿದ್ದು, ಅವನ ಬಗ್ಗೆ ನಾವು ಮಾನವೀಯತೆಯನ್ನು ಇಟ್ಟುಕೊಳ್ಳದೆ ಹೋದರೆ ನಾವು ಎಲ್ಲಿಗೆ ಹೋಗಬೇಕು? ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಾರಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭಾಷಣ ಮಾಡಿದರು. ಅದನ್ನು ಅವರಿಗೆ

ನೆನಪಿಸುತ್ತೇನೆ. 'ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಭಾವುಕತೆಯನ್ನು ಬಡಿದೆಬ್ಬಿಸಲು ಯತ್ನಿಸುತ್ತಿವೆ, ಇದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಡವಳಿಕೆ ಎಂಬುದನ್ನು ಜನತೆ ಗಮನಿಸಬೇಕು, ಅಕ್ರಮಗಳಿಗೆ ಮಾನವೀಯ ಮುಖ ತೊಡಿಸಲು ಮುಂದಾಗುವವರನ್ನೂ ಹಿಮ್ಮೆಟ್ಟಿಸಬೇಕು' ಈ ರೀತಿ ಸ್ವಾತಂತ್ರ್ಯ ದಿನಾಚರಣೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಭಾಷಣ. COD ಯವರು ಕೊಟ್ಟಿರುವಂಥ ವರದಿಯಲ್ಲಿ ಯಾರು ಭ್ರಷ್ಟಾಚಾರ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಇಲ್ಲಿ ಕೊಟ್ಟಿದ್ದಾರೆಯೇ, ತೋರಿಸಿದ್ದಾರೆಯೇ? ಎಲ್ಲಿದೆ? ಇದು ಯಾವ ರೀತಿ ಪ್ರಾರಂಭ ಆಯಿತು? 2011 ರ ಬ್ಯಾಚ್ ಅನ್ನು ಪ್ರಾರಂಭ ಮಾಡಿದಾಗ Preliminary exam ಗೆ ಬಹುಶಃ 1,35,000 ಜನರು ಅರ್ಜಿ ಹಾಕಿದರು. Exam ಬರೆದಿದ್ದು 90,000 ಜನರು ಅದರಲ್ಲಿ 6,600 ಜನ ಆ 1:5 ನಲ್ಲಿ ಆಯ್ಕೆ ಆದರು. ನಂತರ interview ಕರೆದಾಗ ಚುನಾವಣೆಯ ದಿನಾಂಕಗಳು ಏನು ಘೋಷಣೆ ಆಯಿತು, ಇದು ಎಲ್ಲಿಂದ ಪ್ರಾರಂಭ ಆಗಿದೆ ಎಂದರೆ, ವಿಧಾನಸೌಧದಿಂದಲೇ ರಾಜಕಾರಣ ಪ್ರಾರಂಭ ಆಗಿದೆ. ಚುನಾವಣೆ ಘೋಷಣೆ ಆಗಿದೆ, ತಾವು interview ನಡೆಸುವುದನ್ನು ನಿಲ್ಲಿಸಬೇಕೆಂದು ಇವರಿಗೆ DPAR ನಿಂದ ಪತ್ರ ಬರೆಯುತ್ತಾರೆ.

ಅದಕ್ಕೆ ಕಾರಣ ದಿ:27.03.2013 ರಲ್ಲಿ ಯರೋ ಪರಮೇಶ್ವರಪ್ಪ ಮತ್ತು ವಾಸುದೇವ ಆರಾಧ್ಯ ಎನ್ನುವವರು Chief Election Commission ಗೆ ಒಂದು ಮೂಗರ್ಜಿಯನ್ನು ಬರೆಯುತ್ತಾರೆ. ಈ ರೀತಿ election declare ಆಗಿಬಿಟ್ಟಿದೆ, ಇಲ್ಲಿ ಹಣ ಸಂಗ್ರಹ ನಡೆಯುತ್ತಿದೆ, Code of Conduct ಇದೆ, ಆದರೂ ನಡೆಸುತ್ತಿದ್ದಾರೆ, ನಿಲ್ಲಿಸಬೇಕು ಎಂದು Election Commission ಗೆ ಯಾವುದೋ ಹೆಸರುಗಳನ್ನಾಕಿ, ಸುಳ್ಳು ವಿಳಾಸಗಳನ್ನು ನೀಡಿ ಅನಾಮಧೇಯ ಪತ್ರ ಹೋಗುತ್ತದೆ. ಆಗ ಶ್ರೀ ಅನಿಲ್‌ಕುಮರ್ ಝಾ ರವರು Chief Election Officer ಆಗಿದ್ದರು. ಅವರು ನಮ್ಮ Chief Secretary ಗೆ ಈ ರೀತಿ ಚುನಾವಣೆಯನ್ನು ನಿಲ್ಲಿಸಬೇಕೆಂದು ಹೇಳಿ ಒಂದು ಪತ್ರವನ್ನು ಬರೆಯುತ್ತಾರೆ.

ಭಾರತ ಚುನಾವಣಾ ಆಯೋಗ Election Commission of India ರವರು Code of Conduct ಯಾವುದಕ್ಕೆ ಬರುತ್ತದೆಂದು ಒಂದು guidelines

ಅನ್ನು ಹೊರಡಿಸಿದ್ದಾರೆ, ಅದರ ಪ್ರಕಾರ, 'Regular recruitement, appointemtn or promotion through the UPSC, State Public Service Commissions or the Staff Election Commission or any other statutory authority can continue recruitments through non-statutory bodies will require prior clearance of the Commission'. ಅವರೇನು ಯಾವ on going ಇದೆಯೋ ಅದನ್ನು ನಿಲ್ಲಿಸಬೇಕೆಂದೇನೂ ಇಲ್ಲ, ನಡೆಸಬುದೆಂದು ಭಾರತ ಚುನಾವಣಾ ಆಯೋಗದವರೇ ಕೊಟ್ಟಿರುವಂಥ guidelines. ಅದರ ಮೇಲೆ ದಿನಾಂಕ: 30.03.2013 ಕ್ಕೆ ಸರ್ಕಾರಕ್ಕೆ clarification ಕೊಡುತ್ತಾರೆ. ಅದರ ಮೇಲೆ DPAR ಪ್ರಧಾನ ಕಾರ್ಯದರ್ಶಿಗಳು ಚುನಾವಣೆಯನ್ನು ನಿಲ್ಲಿಸಬೇಕೆಂದು ಒಂದು ಸುದೀರ್ಘವಾದ ಪತ್ರವನ್ನು ಬರೆಯುತ್ತಾರೆ. 2ನೇ ತಾರೀಖು ಬೆಳಗ್ಗೆ 10 ಗಂಟೆಗೆ ಒಂದು ಪತ್ರ, ಮಧ್ಯಾಹ್ನ 2 ಗಂಟೆಗೆ ಒಂದು ಪತ್ರ ಒಟ್ಟು ಎರಡು ಪತ್ರವನ್ನು ಬರೆಯುತ್ತಾರೆ. ಕೊನೆಗೆ ಅವರು ಏನು ಹೇಳುತ್ತಾರೆಂದರೆ, ಈ ಆಯ್ಕೆ ಪ್ರಕ್ರಿಯೆಯಿಂದ ಉದ್ಭವವಾಗವ ವ್ಯಾಜ್ಯಗಳಿಗೆ ಮತ್ತು ಅದಕ್ಕಾಗುವ ವೆಚ್ಚಕ್ಕೆ ಕಾರ್ಯದರ್ಶಿಯವರೇ ಖುದ್ದಾಗಿ ಜವಾಬ್ದಾರರಾಗುತ್ತಾರೆ. ಆದುದರಿಂದ, ಆಯೋಗವು ನಡೆಸುತ್ತಿರುವ ಮೌಖಿಕ ಸಂದರ್ಶನವನ್ನು ತಕ್ಷಣವೇ ನಿಲ್ಲಿಸಿ, ಚುನಾವಣಾ ಆಯೋಗಕ್ಕೆ ಮಾಹಿತಿಯನ್ನು ಒದಗಿಸಲು ಫ್ಯಾಕ್ಸ್ ಸಂದೇಶದ ಮೂಲಕ ಅನುಸರಣಾ ವರದಿಯನ್ನು ನೀಡುವಂತೆ ಕೋರಬಯಸಿದ್ದೇನೆ. ಇಲ್ಲದೇ ಇದ್ದಲ್ಲಿ ಆಯೋಗವು ಮೌಖಿಕ ಸಂದರ್ಶನವನ್ನು ತರುವಾಯದ ಉದ್ದೇಶದಿಂದ ನಡೆಸುತ್ತಿದೆಯೆಂದು ಸರ್ಕಾರವು ಅನಿವಾರ್ಯವಾಗಿ ಪರಿಗಣಿಸಲಾಗುತ್ತದೆ. ದಿನಾಂಕ: 02.04.2013 ರಲ್ಲೇ ನಿಮ್ಮ DPAR ನವರು 2011 ರ gazette notification ನ್ನು ಹಿಸುಕಬೇಕೆಂದು ಅಲ್ಲೇ ಪ್ರಾರಂಭ ಮಾಡಿಕೊಂಡಿದ್ದಾರೆ. ಇದು ಅಲ್ಲಿಂದನೇ ಪ್ರಾರಂಭವಾಗಿದೆ. ಯಾವುದೋ ಅಭ್ಯರ್ಥಿ ನಾನು selection ಆಗಲಿಲ್ಲವೆಂದು ಹೇಳಿ ಯಾವುದೋ ಒಂದು ಪತ್ರ ಬರೆದಿದ್ದರಲ್ಲ, ಅದರ ಮೇಲೆ Chief Minister Secretary ಯಿಂದ ದಿನಾಂಕ: 27.05.2013 ರಲ್ಲಿ ನಮ್ಮ Advocate General ರವರಿಗೇನು refer ಆಗುತ್ತದೆಯೋ ಇದಕ್ಕೆ ಒಂದು

legal opinion ನ್ನು ಕೊಡುತ್ತಾರೆ. ಈ legal opinion ನಲ್ಲಿ ಏನು ಹೇಳುತ್ತಾರೆಂದರೆ, ಇಲ್ಲಿದ್ದಾಗ ಹಿಂದೆ ಯಡಿಯೂರಪ್ಪನವರು ಏನು ಚರ್ಚೆ ಮಾಡಿದ್ದರೋ, ಆ ಅಭ್ಯರ್ಥಿ complaint ಕೊಡುವುದೇನೆಂದರೆ ಮಾರ್ಚ್ ತಿಂಗಳಲ್ಲಿ KPSC Member ನನಗೆ 8–10 ಬಾರಿ ಫೋನ್ ಮಾಡಿ ಬಂದು ಭೇಟಿ ಮಾಡುವಂತೆ ಹೇಳಿದ್ದರು. ನಾನು ಹೋದೆ, Assistant Commissioner post ಬೇಕೆಂದರೆ ₹ 75 ಲಕ್ಷಗಳನ್ನು ನೀಡುವಂತೆ ಕೇಳಿದರು ಎನ್ನುವಂಥ ಪ್ರಕರಣ ಮಾರ್ಚ್ ತಿಂಗಳಲ್ಲಿ ನಡೆದಿದೆಯೆಂದು ಅ ಅಭ್ಯರ್ಥಿ ಹೇಳುತ್ತಾರೆ. ಅವರು ನಿಮ್ಮ Advocate General ಗೆ complaint ಕೊಡುವುದು ಯಾವಾಗ ಎಂದರೆ ಮೇ ತಿಂಗಳ 20ನೇ ತಾರೀಖಿನಂದು ಯಾವ ಹೆಣ್ಣು ಮಗಳು ಮೌಖಿಕ ಪರೀಕ್ಷೆಗೆ interview ಗೆ ಹೋಗುತ್ತಾಳೆ, ಆಗಲೂ ಹೋಗಿ complaint ಕೊಡುವುದಿಲ್ಲ. ದುಡ್ಡು ಕೇಳಿದರು ಎನ್ನುವಂಥ ಘಟನೆ ನಡೆದಿರುವುದು ಮಾರ್ಚ್ ತಿಂಗಳಿನಲ್ಲಿ, ಎರಡು ತಿಂಗಳು ಸುಮ್ಮನೆ ಇದ್ದರು 20ನೇ ತಾರೀಖಿನಂದು interview ಗೆ ಹೋದರು. ಆ interview ನಲ್ಲಿ 75 ಮಾರ್ಕ್ಸ್ ಅನ್ನು ಕೊಟ್ಟಿದ್ದಾರೆಂದು ಹೇಳಿದಾರಲ್ಲ ಆಗಲೂ ಸಹ complaint ಕೊಡಲಿಲ್ಲ. 25ನೇ ತಾರೀಖಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಕಾರಣ, 24ನೇ ತಾರೀಖಿಗೆ ಇನ್ನೊಂದು ಹೆಣ್ಣು ಮಗಳು ಕೊಟ್ಟಂಥ, in between ಮತ್ತೆ pressure ಹಾಕುತ್ತಾರೆ. ಈ ಅಭ್ಯರ್ಥಿನೇ ಹಲವಾರು ಬಾರಿ ಫೋನ್ ಮಾಡಿದ್ದಾರೆ. ಇವತ್ತು ನಾವು ಯಾವ COD ಅಧಿಕಾರಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಈ ಹೆಣ್ಣುಮಗಳು KPSC Member ಗೆ ಎಷ್ಟು ಬಾರಿ ಫೋನ್ ಮಾಡಿದರು ಎನ್ನುವದರ ಬಗ್ಗೆ ಎಲ್ಲಿಯೂ ಇವರು ಉಲ್ಲೇಖ ಮಾಡುವುದಿಲ್ಲ. ಈ ಹೆಣ್ಣುಮಗಳು ಅವರಿಗೆ ಏತಕ್ಕೆ ಫೋನ್ ಮಾಡುತ್ತಾರೆ, ಎಂದರೆ ಅವರು ಮಾರ್ಕ್ಸ್ ಕಡಿಮೆ ಕೊಡಿ ಎನ್ನುವುದಕ್ಕಾ? ಏತಕ್ಕೆ ಮಾಡಿದ್ದರು? ನೀವು ಬರೀ ಇವರ ಮಾತನ್ನೇ ಲೆಕ್ಕಕ್ಕೆ ತೆಗೆದುಕೊಂಡಿದ್ದೀರಲ್ಲ, ಇಲ್ಲಿ ನಮ್ಮ Advocate General ರವರು ಮೊದಲನೇ opinion ನ್ನು ಕೊಡುತ್ತಾರೆ. ನಾನು ಎಲ್ಲಾ ಸಂಪೂರ್ಣ ಮಾಹಿತಿಯನ್ನು ಹೇಳುವುದಕ್ಕೆ ಹೋಗುವುದಿಲ್ಲ. "I have carefully examined the DVD relating to the sting operation said to have been conducted by TV-9

television channel and the various press cuttingsf furnished to me along with the file. In addition to the above material one Dr. Mythri H.P.S. who claims to be a candidate for selection to the Gazetted Probationer Post has also given me a representation followed by a hand written representation in which most specific detaisl are furnished". ಮತ್ತೆ, ಇನ್ನೊಬ್ಬ ಯಾರೋ One Mr. Gangadhariah claimed to represent the candidate s who took the examination by his representation dated: 27.05.2013 has made very serious allegation against Mr. Sundar, KPSC Secretary and Mr. Arunachalam, who is said to be the Exam in Chief to conduct valuation of answer scripts. He has called later as an agent of then Chairman and has accused that three together manipulated the examination process. The specific allegations made by him read as follows;

ಮಾನ್ಯ ಅಧ್ಯಕ್ಷರೆ, ಇಲ್ಲಿ ನೀವು ಒಂದು ಅಂಶವನ್ನು ಗಮನಿಸಬೇಕು. ಗಂಗಾಧರಯ್ಯ ಎನ್ನುವವರು ಕಳುಹಿಸಿರುವಂಥ complaint ಅರ್ಜಿ ಏನಿದೆ, ಇವತ್ತಿನವರೆಗೆ COD ಯವರು ಗಂಗಾಧರಯ್ಯ ಎನ್ನುವವರನ್ನು trace out ಮಾಡಿದ್ದೀರಾ? ಇವನು ಯಾರು ಎಂದು ಇಲ್ಲಿಯವರೆಗೂ ನೀವು trace out ಮಾಡಿಲ್ಲ. ಇವನ ದೂರನ್ನು refer ಮಾಡಿಕೊಳ್ಳುತ್ತಾರೆ. ಯಾರು ಈ ಗಂಗಾಧರಯ್ಯ? ಸುಂದರ್ ಎನ್ನುವಂಥ KPSC Secretary ಇವತ್ತು COD ಯವರು ಏನು ಕೊಟ್ಟಿದ್ದಾರೆ. . . . .

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಕುಮಾರಸ್ವಾಮಿಯವರೆ ನಿಮಗೆ ಸಹಾಯ ಮಾಡುವುದಕ್ಕಾಗಿ ನಾನು ಸ್ವಲ್ಪ ಮಾತನಾಡುತ್ತೇನೆ. I have been very sincerely and keenly listening to you. ನಿಮ್ಮ ಪ್ರಕಾರ ಮೊದಲು ವಾಸುದೇವ ಎನ್ನುವವರು ಒಂದು ಮೂಗರ್ಜಿಯನ್ನು Election Commission ಗೆ ಬರೆಯುತ್ತಾರೆ. ಅದನ್ನು cognizance ಗೆ ತೆಗೆದುಕೊಳ್ಳಬೇಕಿತ್ತಾ ಅಥವಾ ತೆಗೆದುಕೊಳ್ಳಬಾರದಾಗಿತ್ತೇ ಎನ್ನುವುದು ಒಂದು

issue. ಅದರ ಮೇಲೆ DPAR ನವರು KPSC ಗೆ correspondence ಮಾಡುತ್ತಾರೆ. ಮತ್ತೆ ತಾವ Central Election Commission ನವರು ಯಾವ್ಯಾವುದಕ್ಕೆ ನಿರ್ಬಂಧ ಹಾಕಬಹುದು ಮತ್ತು ಹಾಕಬಾರದು ಎನ್ನುವುದನ್ನು ಓದಿ ಹೇಳಿದಿರಿ. DPAR ಮಾಡಿದ್ದು ಸರಿಯೇ ಅಥವಾ ತಪ್ಪೇ ಎನ್ನುವುದರ ಬಗ್ಗೆಯೂ ನೀವೇನು ಹೇಳಲಿಲ್ಲ. ಮುಂದಕ್ಕೆ ಹೊರಟು ಬಿಟ್ಟಿರಿ. ಅದಾದ ನಂತರ ಈಗ COD report ದ್ದು, ಗಂಗಾಧರ ಎನ್ನುವವರ ಬಗ್ಗೆ, ಈ ಗಂಗಾಧರ ಎನ್ನುವವರ locus standi ಏನು? ಯಾರು ಈತ? ನಮಗೆ what is the charge you are trying to establish ಎನ್ನುವುದು ಗೊತ್ತಾಗಲಿಲ್ಲ. Specify ಮಾಡಿಬಿಟ್ಟರೆ ನಮಗೆ ಸುಲಭವಾಗುತ್ತದೆ. It is only academic interest ನಿಂದ, ಬೇರೆ ಇನ್ನೇನೂ ಇಲ್ಲ, ಏಕೆಂದರೆ, ನೀವು ಎಲ್ಲವನ್ನು ಹೇಳಿ ಅಕಸ್ಮಾತ್ pressure ನಲ್ಲಿ ಮರೆತು ಹೋಗಿಬಿಟ್ಟೀರ ಎಂದು ಕೇಳುತ್ತಿದ್ದೇನೆ. Just to help you.

ಅಧ್ಯಕ್ಷರು:– ಕುಮಾರಸ್ವಾಮಿಯವರು ತಯಾರಾಗಿ ಬಂದಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, DPAR ನ Principal Secretary ಯಿಂದ ಒಂದೇ ದಿನ ಬೆಳಗ್ಗೆ ಒಂದು ಲೆಟರ್, ಮಧ್ಯಾಹ್ನ ಒಂದು ಲೆಟರ್ ಹೋಗುತ್ತದೆ. ಅವರು ಹೇಳುತ್ತಾರೆ, ನೀವು ನಮ್ಮ ಲೆಟರ್‌ನ್ನು ಕಳುಹಿಸಿದ ಮೇಲೂ ನೀವು ಮುಂದುವರೆಸುವುದಾದರೆ ಅದರ repercussion ಅನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಹುಷಾರ್ ಎನ್ನುವಂಥ ಗಡುಸಾದ ಎಚ್ಚರಿಕೆಯನ್ನು threaten ಅನ್ನು DPAR ನವರು ಮಾಡಿದ್ದಾರೆ. KPSC ಗೆ ಇದನ್ನೆಲ್ಲ ಬರೆಯುವುದಕ್ಕೆ DPAR ಗೆ ಯಾರು power ಕೊಟ್ಟಿದ್ದಾರೆ? ಇದನ್ನು ಬರೆಯುವುದಕ್ಕೆ ಇವರಿಗೆ ಅಧಿಕಾರವಿದೆಯೇ? DPAR Secretary ಗೆ Constitution ನಲ್ಲಿ power ಇದೆಯೇ? ಏಕೆ ಹೇಳಿದೆನೆಂದರೆ, ಈ ಲಿಸ್ಟ್‌ಗೆ 2011 ರಲ್ಲೇ ಎಳ್ಳು ನೀರು ಬಿಡಬೇಕೆಂದು ಪ್ರಾರಂಭವಾಗಿದೆ ಎಂದು ಅದಕ್ಕಾಗಿಯೇ ನಾನು ಹೇಳಿದ್ದು. ಅದಕ್ಕೆ ಏತಕ್ಕೆ ಇವರು ಹೇಳಿದರು?

ಶ್ರೀ ಡಿ.ಕೆ. ಶಿವಕುಮಾರ್:- ಸರ್ಕಾರ ಎಂದರೆ ಯಾರು? See any type ಇಂಥ professional posts like IAS, KAS ಗಳಿಗೆ selection ಮಾಡುವಂತಹ ಸಂದರ್ಭದಲ್ಲಿ Government ಎಂದರೆ ಯಾರು? ಯಾವುದೊ ಒಂದು ಇಲಾಖೆ ಎಂದರೆ ಇಲಾಖೆಗೆ ಬರೆಯುತ್ತೇವೆ. ಇದು complete ಆಗಿ Administrative Department ಅಲ್ಲವೇ? ಅವರಲ್ಲದೆ ಇನ್ಯಾರು ಬರೆಯುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಒಂದು ನಿಮಿಷ. ಒಂದು ಸಲ ಕೆ.ಪಿ.ಎಸ್.ಸಿ. ಗೆ ಸರ್ಕಾರದಿಂದ ಈ ವರ್ಷ ಇಂತಿಷ್ಟು ಇಂಥಿಂತಹ ಇಲಾಖೆಗಳಿಗೆ ಇಂಥಿಂತಹ ಪೋಸ್ಟ್‌ಗಳನ್ನು appoint ಮಾಡುವುದಕ್ಕೆ ತಾವು examination conduct ಮಾಡಿ interview ಮಾಡಿ selection ಮಾಡಿ ಕಳುಹಿಸಿ ಎಂದು ಸರ್ಕಾರದಿಂದ ಕಳುಹಿಸಿದ ಮೇಲೆ ಅದನ್ನು ನಡೆಸುವುದು ಅವರಿಗೆ ಸೇರಿದ್ದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, Department of Personnel and Reforms ಏನು ಇರುತ್ತಾರೆ, ಅವರು administration ಗೆ ಇಲ್ಲಿಗೆ confine ಆಗುತ್ತಾರೆಯೇ ಹೊರತು KPSC ಯಂತಹ ಒಂದು statutory body ಗೆ ಬರೆಯುವುದಕ್ಕೆ they don't have the jurisdiction. ಬರೆಯಕೂಡದು. I stand by you. But ಏಕೆ ಇದನ್ನೆಲ್ಲಾ ಮಾಡಿದರು? ಯಾರು villain ಎಂದು ಗೊತ್ತಾಗಬೇಕಲ್ಲ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಆದರೆ COD ಯಲ್ಲಿ ಅದನ್ನೆಲ್ಲಾ ತರಲಿಲ್ಲ ಏಕೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಿಮಗೆ ಗೊತ್ತಿದೆ ಹೇಳಿ ಸರ್. ನಿಮಗೆ ಗೊತ್ತಿರುವುದನ್ನು ನೀವು ಹೇಳದಿದ್ದರೆ ಇನ್ನು ಶಿವಕುಮಾರ್ ಹೇಳುತ್ತಾರಷ್ಟೆ. ಗೊತ್ತಿರುವುದು ನಿಮ್ಮಿಬ್ಬರಿಗೆ. ಇಲ್ಲಾ ನಿಮಗೆ ಗೊತ್ತಿರಬೇಕು, ಇಲ್ಲ ಅವರಿಗೆ ಗೊತ್ತಿರಬೇಕು. ನನಗೂ ಸಿದ್ದರಾಮಯ್ಯನವರಿಗೂ ಗೊತ್ತಿದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಾರೆ. 'Speific allegation made by him. There was a standing instruction to award more marks to candidate who have taken Gengraphy as one of their subjects. Several candidates of Gonal Bhimappa had taken Geography as one of their paper, resulttin in 150 candidates out of 550 candidates scoring 350+ marks and out of which 25 candidates scoring more than 400 marks. This is against any spirit of competitive exams wheref several subjects are chosen by candidate. Another illustration being Rural Development, Cooperation papers havef been evaluated by teachers from Economic, Sociology background resulting in award of less marks to students. It has also been brought to our notice that Kannada Medium teachers have evaluated English Medium scripts resulting in disparities in award of exam marks. It is brought to our notice one Mr. Abhishek Hegde, son of Assistant Secretary, KPSC who just scraped through preliminary exam has scored 995 marks.' Preliminary exam ನಲ್ಲಿ scrape ಆದನಂತೆ. ಇಲ್ಲಿ 995 ತೆಗೆದುಬಿಟ್ಟನಂತೆ. 'This was made possible by handy work of one Mr. Arunachalam with active advice of Mr. Sundar, KPSC Secretary. The very written examination was manipulated in the manner narrated by Mr. Gangadharaiah.' ಇದನ್ನೇ quote ಮಾಡುತ್ತಾ ಹೋಗುತ್ತಾರೆ. ಅವನು ಯಾರು? ಇವತ್ತು ಅವನ ಕುಲ-ಗೋತ್ರ ಗೊತ್ತಿಲ್ಲ, ಇನ್ನೂ ಇವನು ಎಲ್ಲಿದ್ದಾನೆ ಎಂದು ಗೊತ್ತಿಲ್ಲ. ಇದನ್ನೇ quote ಮಾಡುತ್ತಾ ಹೋಗುತ್ತಾರೆ. ಈ ಲೆಟರೇ ಇವರಿಗೆ ಮುಖ್ಯ. ಇಲ್ಲಿ ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದನ್ನೆಲ್ಲಾ ನಡೆಸುವವರು Secretar ಗಳೆ. ಈ KPSC Members ಗೆ ಬರುವುದು, ನಾನು ಮೊದಲೂ ಕೂಡಾ ಹೇಳಿದ್ದೇನೆ. ಈ ಮೌಖಿಕ ಅಂಕ ಕೊಡುವುದು ಏನಿದೆ, interview ಕರೆಯುತ್ತಾರಲ್ಲ, ಅಲ್ಲಿಯವರೆಗೆ ಈ

ಕೆ.ಪಿ.ಎಸ್.ಸಿ. ಸದಸ್ಯರ ಪಾತ್ರ ಇರುವುದಿಲ್ಲ. one of their paper, resulting in 150 candidates out of 550 candidates scoring 350+ marks and out of which 25 candidates scoring more than 400 marks. This is against any spirit of competitive exams where several subjects are chosen by candidate. Another illustration being Rural Development, Cooperation papers have been evaluated by teachers from Economic, Sociology background resulting in award of less marks to students. It has also been brought to our notice that Kannada Medium teacher have evaluated English Medium scripts resulting in disparities in award of exam marks. It is brought to our notice one Mr. Abhishek Hegde, son of Assistant Secretary, KPSC who just scraped through preliminary exam has scored 995 marks.' Preliminary exam ನಲ್ಲಿ scrape ಆದನಂತೆ. ಇಲ್ಲಿ 995 ತೆಗೆದುಬಿಟ್ಟನಂತೆ. 'This was made possible by handy work of one Mr. Arunachalam with active of Mr. Sundar, KPSC Secretary. The very written examination was manipulated in the manner narrated by Mr. Gangadharaiah.' ಇದನ್ನೇ quote ಮಾಡುತ್ತಾ ಹೋಗುತ್ತಾರೆ. ಅವನು ಯಾರು? ಇವತ್ತು ಅವನ ಕುಲ-ಗೋತ್ರ ಗೊತ್ತಿಲ್ಲ, ಇನ್ನು ಇವನು ಎಲ್ಲಿದ್ದಾನೆ ಎಂದು ಗೊತ್ತಿಲ್ಲ. ಇದನ್ನೇ quota ಮಾಡುತ್ತಾ ಹೋಗುತ್ತಾರೆ. ಈ ಲೆಟರೇ ಇವರಿಗೆ ಮುಖ್ಯ. ಇಲ್ಲಿ ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದನ್ನೆಲ್ಲಾ ನಡೆಸುವವರು Secretary ಗಳೆ. ಈ KPSC Members ಗೆ ಬರುವುದು, ನಾನು ಮೊದಲೂ ಕೂಡಾ ಹೇಳಿದ್ದೇನೆ. ಈ ಮೌಖಿಕ ಅಂಕ ಕೊಡುವುದು ಏನಿದೆ, interview ಕರೆಯುತ್ತಾರಲ್ಲ, ಅಲ್ಲಿಯವರೆಗೆ ಈ ಕೆ.ಪಿ.ಎಸ್.ಸಿ. ಸದಸ್ಯರ ಪಾತ್ರ ಇರುವುದಿಲ್ಲ. ಅಲ್ಲಿಗೆ ಏನು ಒಬ್ಬರು ಐ.ಎ.ಎಸ್. ಆಫೀಸರ್ ಅನ್ನು Secretary ಹಾಕಿರುತ್ತೀರಿ, ಅವರದ್ದೇ ಅಧಿಕಾರ, ಅವರದ್ದೇ powers. ಅವನಿಗೆ ಒಂದು ಕೋಟಿ ರೂ. suspense account ನಲ್ಲಿ ದುಡ್ಡು ಬೇರೆ ಕೊಟ್ಟಿರುತ್ತೀರಿ, ಆ ದುಡ್ಡನ್ನು ಯಾವುದಕ್ಕೆ ಖರ್ಚು ಮಾಡಿದ್ದೀರಿ ಎಂದು ಕೇಳುವಂತಿಲ್ಲ. ಇವೆಲ್ಲಾ ಅವರಿಗೆ ಅವರದ್ದೇ

ಆದ powers ಕೊಟ್ಟಿದ್ದೀರಿ. ಇಷ್ಟೆಲ್ಲಾ ಹೇಳಿಕೊಂಡು ಟಿ.ವಿ. 9 ನಲ್ಲಿ ಅದ್ಯಾವುದೋ sting operation ಆಯಿತಲ್ಲ, ಆ ಮೂರು ಜನರು BWSSB ಯ ಸುಧೀರ್ ಎಂದು Assistant Executive Engineer, ಸೋಮೇಶ್ ಚಿಕ್ಕಮಠ್, Executive Enngineer, BDA., ರಾಜಶೇಖರನ್ Employee working in the Secretariat ಇವರು ದುಡ್ಡಿನ ವ್ಯಾಪಾರ ಮಾಡುತ್ತಿದ್ದವರು ಎಂದು sting operation ಆಗಿರುವುದು. ಇವರಿಗೂ, KPSC ಸದಸ್ಯರಿಗೂ ಸಂಬಂಧವೇನು? ಇದನ್ನು ನೀವು quote ಮಾಡಿಕೊಂಡಿದ್ದೀರಿ. 'It is however required to be noted that neither the Chairman nor the Members of the KPSC were directly involved muchless did any official of the KPSC figure' ಇಲ್ಲಿ ಹೇಳಿದರು. ಇಲ್ಲಿ ಇನ್ನೊಂದು ಡಾ|| ಮೈತ್ರಿ ಏನಿದ್ದಾರೆ. ಅವರು ಒಂದು ಅರ್ಜಿ ಹಾಕಿಕೊಂಡರು. ಮೊದಲು 25 ಕ್ಕೆ ಒಂದು ಅರ್ಜಿ ಕೊಟ್ಟರು. ನಂತರ Advocate General ಅವರನ್ನೇ ಕರೆಸಿಕೊಂಡು ಇನ್ನೊಂದು ಅರ್ಜಿ ಬರೆಸಿಕೊಂಡರು. ಅದರ ಮೇಲೆ DPAR secretary ಯವರೇ ಸರ್ಕಾರದ direction ಮೇಲೆ ಕೇಸು ಹಾಕಿದ್ದು, ಅದರ ಮೇಲೆ COD ಗೆ ಕೊಟ್ಟುಕೊಂಡಿದ್ದಾರೆ. ನಾನು ಅದೆಲ್ಲಾ details ಹೇಳುವುದಿಲ್ಲ. 'Dr. Mythri.H.P.S. is also an applicant. She come uner the Schedule Tribes Women category. Her registration number is 12500 and via-voce number is 921. She claims that she has secured the highest mark under Schedule Tribe Women category securing 1009 marks in the written test. The next candidate under the ST Women category has secured 937 marks. Thoug the candidate next to her has secured 72.5% marks less, she was awarded 150 marks at the vice-voce while Dr. Mythri was awarded only 75 marks at the viva-voce. In this process Dr. Mythri was eliminated while the candidate who secured 937 marks came to be selected for the post ws reserved for ST women in the post of Assistant Comissioner. Dr. Mythri has given full details as how to specific demands were made

from her to pay bribe in order to ensure her selection . .' ಅದೆಲ್ಲಾ ಹೇಳಿಕೊಂಡು ಹೋಗಿದ್ದಾರೆ. ಆ ಕೆ.ಪಿ.ಎಸ್.ಸಿ. ಸದಸ್ಯರ ಮೇಲೆ ಹೇಳಿದ್ದಾರೆ. ಅವರು ಕರೆಸಿದ್ದರು, ಇಂತಹ ದಿನಾಂಕ ಎಂದೆಲ್ಲಾ ಹೇಳಿಕೊಂಡಿದ್ದಾರೆ. ಅದನ್ನೆಲ್ಲಾ ಅವರು ಬರೆದಿದ್ದಾರೆ. ನಾನು ಅದಕ್ಕೇ ಹೇಳಿದ್ದು, ಮಾರ್ಚ್ ತಿಂಗಳಿನಲ್ಲಿ ಘಟನೆ ನಡೆದಿದ್ದರೆ ಈ ಹೆಣ್ಣುಮಗಳು ಯಾವ ಕಾರಣಕ್ಕೆ ಇನ್ನೊಂದು ಹೆಣ್ಣುಮಗಳು. . ಅವಳೂ ಕೂಡಾ ಎಸ್.ಟಿ. ಅಭ್ಯರ್ಥಿಯೇ ಇನ್ನೊಬ್ಬಳು select ಆಗಿರುವವಳು. ಬೇರೆ ಜಾತಿಗೇನೂ ಕೊಟ್ಟಿಲ್ಲ, ಅದೇ category ಇದ್ದದ್ದು. ಇಲ್ಲಿ ಆ ಹೆಣ್ಣು ಮಗಳಿಗೆ ಮಾರ್ಕ್ಸ್ ಕೊಟ್ಟಿದ್ದನ್ನು ನೋಡಿದ ಮೇಲೆ ಹೋಗಿ complaint ಕೊಡುವುದು, ಇಲ್ಲಿ ಪರಿಸ್ಥಿತಿ. ಇಷ್ಟೆಲ್ಲಾ ಆದ ಮೇಲೆ Advocate General ರವರು opinion ಕೊಡುತ್ತಾರೆ.

'But such rejections should be done within a reasonable to be recorded Government cannot accept a part of the list and reject the rest. The Government may reject the entire selection list when it satisfied after due enquiry that the selection has been vitiated either on account of violation of fundamental procedural requirement or his vitiated by corruption, favoritism or nepotism. Hold an enquiry to verify the truth of all these allegation it should e remembered that these are only allegations and not proof of any omission and commission and it is not permissible for the Government to form an opinion on the basis of these allegations alone. Whether the process of selection is to tainted so as to warrant the entire selection process to be canceled it has to be ensure that due to the misdeeds of some candidates, honest and meritorious candidates do not suffer.' ಮೊದನೆ opinion ನಲ್ಲಿ ಇದು ಕೊಡುತ್ತಾರೆ. ಅವರು ಏನನು ಹೇಳುತ್ತಾರೆಂದರೆ, 'it

has to be ensure that due to the misdeeds of some candidates, honest and meritorious candidates do not suffer' ಎ.ಜಿ. ರವರು ಮೊದಲನೆ opinion ಕೊಟ್ಟಿರುವುದು. ನಂತರ ಅವರು ಹೇಳುತ್ತಾರೆ. 'Direct a

comprehensive enquiry investigation into the allegations made against the entire process of selection including the conduct of written examinations and viva-voce through a credible investigating agency like Central Bureau of investigation.' Credible investgating agency like Central Bureau of Investigation ಎಂದು ನಿಮ್ಮ Advocate General ರವರೇ ಹೇಳುತ್ತಾರೆ. ಸಿ.ಬಿ.ಐ ಬಗ್ಗೆ certificate ಕೊಟ್ಟುಬಿಟ್ಟಿದ್ದಾರೆ. ಮತ್ತೆ ಅದನ್ನು ನಾನು elaborate ಮಾಡುವುದಿಲ್ಲ. ಇದಾದ ಮೇಲೆ ಈಗ COD ಗೆ ಕೊಟ್ಟರು. COD ವರದಿ ಕೊಟ್ಟಿದ್ದಾರೆ. ಕೆ.ಪಿ.ಎಸ್.ಸಿ. ಸದಸ್ಯರ ಜೊತೆಯಲ್ಲಿ ಹಲವಾರು ಜನರು ಎಸ್.ಎಂ.ಎಸ್., ಫೋನ್ ಸಂಪರ್ಕಗಳಲ್ಲಿದ್ದರು ಎಂದು ಅವರು ಹೇಳಿದರು. ಅದರಲ್ಲಿ 37 ಜನರದ್ದು ಆ ಫೋನ್‌ನಲ್ಲಿ ನಿರಂತರವಾಗಿ touch ನಲ್ಲಿ ಇದ್ದದ್ದನ್ನು ನಾವು find out ಮಾಡಿದ್ದೇವೆ. ಸುಮಾರು 54 ಬ್ಯಾಂಕುಗಳಿಗೆ ದಾಳಿ ಮಾಡಿ 75 account ಗಳನ್ನು ನೋಡಿದ್ದೇವೆ. ಕೆ.ಪಿ.ಎಸ್.ಸಿ ಕಚೇರಿಗೆ ದಾಳಿ ಮಾಡಿ ಸುಮಾರು 360 ಕಡತಗಳನ್ನು ಪರೀಕ್ಷೆ ಮಾಡಿದ್ದೇವೆ. ಇದೆಲ್ಲಾ ಹೇಳಿಕೊಂಡು ಹೋಗಿದ್ದಾರೆ. ಇಲ್ಲಿ ಪ್ರಶ್ನೆ, ಸಿ.ಓ.ಡಿ. ಯವರು ಈ ಮಾರ್ಚ್ ತಿಂಗಳಿನಿಂದ ಈ ಅಭ್ಯರ್ಥಿ ಏನು complaint ಕೊಟ್ಟಿದ್ದಾರೆ, ಅವರ ಫೋನಿನಿಂದ ಎಷ್ಟು ಬಾರಿ ಹೋಗಿತ್ತು? ಸುಮಾರು 17 ಬಾರಿ ಫೋನ್ ಮಾಡಿದ್ದಾರೆ. ಅದು ಯಾವುದೂ COD enquiry ಯಲ್ಲಿ ಇಲ್ಲ. ಈ COD enquiry ಆಧಾರದ ಮೇಲೆ ನೀವು ಏನು ತೀರ್ಮಾನ ತೆಗೆದುಕೊಂಡಿರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ಆ 54 ಬ್ಯಾಂಕ್ ಅಕೌಂಟ್‌ಗಳನ್ನು ನಾವು ಸೀಸ್ ಮಾಡಿದ್ದೇವೆ, ನೋಡಿದ್ದೇವೆ, 75 ಬ್ಯಾಂಕ್ ಅಕೌಂಟ್‌ಗಳನ್ನು ಚೆಕ್ ಮಾಡಿದ್ದೇವೆಂದು ಹೇಳಿದರಲ್ಲ, ಯಾವುದಾದರೂ ಬ್ಯಾಂಕ್ ಅಕೌಂಟ್‌ನಲ್ಲಿ ಯಾರಾದರೂ ಮೆಂಬರ್ ಹಣ ತೆಗೆದುಕೊಂಡು ಅಕೌಂಟ್‌ನಲ್ಲಿ ತುಂಬಿಕೊಂಡಿದ್ದಾರೆಂದು ಏನಾದರೂ ಈ COD report ನಲ್ಲಿ ಕೊಟ್ಟಿದ್ದಾರಾ? ಇಲ್ಲಿ ಪ್ರಶ್ನೆ ಆ KPSC members ಗಳಿಗೆ 37 ಜನ ದೂರವಾಣಿ ಕರೆ ಮಾಡಿದ್ದಾರೆಂದು ಇದೆಯಲ್ಲ ಅದರಲ್ಲಿ ಎಷ್ಟು ಜನ ಆಯ್ಕೆಯಾಗಿದ್ದಾರೆಂದು ವರದಿ ಕೊಟ್ಟಿದ್ದಾರಾ? ಅದರಲ್ಲಿ ಆಯ್ಕೆ ಆಗಿರತಕ್ಕಂತಹ ಪಟ್ಟಿ ಏನಾದರೂ

ಇದ್ದರೆ ಅವರು ಏನಾದರೂ ಹಣಕಾಸಿನ ವ್ಯವಹಾರ ಮಾಡಿರಬೇಕಲ್ಲ? influence ಮಾಡಿರಬೇಕಲ್ಲ? ಅಂತಹ ಒಂದು ಅಭ್ಯರ್ಥಿಗಳ ಮೇಲೆ ನೀವು ಇದರಲ್ಲಿ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಯಾರಾದರೂ influence ಮಾಡಿದ್ದರೆ ಅವರ ಮೇಲೆ ಏನಾದರೂ FIR ಹಾಕಿದ್ದೀರಾ? ಇದನ್ನು ದಯವಿಟ್ಟು ಸರ್ಕಾರ ಉತ್ತರ ಕೊಡಬೇಕಾದರೆ ಹೇಳಬೇಕಾಗುತ್ತದೆ. ಏತಕ್ಕಾಗಿ ನಾನು ಇವತ್ತು ಈ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದೆ ಎಂದರೆ, ಯಾವ್ಯಾವ ಹಂತದಲ್ಲಿ ಯಾವ್ಯಾವ ರೀತಿ ಆಗಿದೆ, ಇಲ್ಲಿ ಒಂದು ಅರ್ಜಿ ತೆಗೆದುಕೊಂಡು ನೀವು ಯಾರಿಗೆ protection ಕೊಡುವುದಕ್ಕೆ ಹೋದಿರಿ, ಇಲ್ಲಿ ಚರ್ಚೆ ನಡೆಸಿದಿರಿ. ಅಧ್ಯಕ್ಷರೆ ಅದರ ಬಗ್ಗೆ ಕೊನೆ ಹಂತಕ್ಕೆ ಬರುತ್ತೇನೆ. ನಾನು ಫೈನಲ್ ಆಗಿ ಏತಕ್ಕಾಗಿ ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದು ಹೇಳುತ್ತೇನೆ. ನಿಮ್ಮ COD ಅಧಿಕಾರಿಗಳು caller list ನಲ್ಲಿ ಈ ಹೆಣ್ಣು ಮಗಳ ಜೊತೆ ನಿರಂತರ ಸಂಪರ್ಕದಲ್ಲೇನಿದ್ದರು, ಏತಕ್ಕೆ ಒಬ್ಬ ಹೆಣ್ಣು ಮಗಳ ಜೊತೆ ನಿರಂತರ ಸಂಪರ್ಕದಲ್ಲಿರಬೇಕು? ಏತಕ್ಕಾಗಿ ನಿಮ್ಮ COD ಅಧಿಕಾರಿಗಳು ಆ ಹೆಣ್ಣು ಮಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದರು? COD ಅಧಿಕಾರಿಗಳು ನಿಮ್ಮ ಹತ್ತು ಫೈಂಡಿಂಗ್ ಕೊಟ್ಟಿದ್ದಾರಲ್ಲ, ಆ ಹತ್ತು ಫೈಂಡಿಂಗ್‌ನಲ್ಲಿ 9 ಫೈಂಡಿಂಗ್‌ಗಳು ನಿಮ್ಮ ಕಾರ್ಯದರ್ಶಿ ಮೇಲಿರತಕ್ಕಂತಹ ಫೈಂಡಿಂಗ್ಸ್, marks ವಿಷಯದಲ್ಲಿ ಈ ಹೆಣ್ಣು ಮಗಳಿಗೆ 75 marks ಕೊಟ್ಟು ಇನ್ನೊಂದು ಹೆಣ್ಣು ಮಗಳಿಗೆ 150 marks ಕೊಟ್ಟರು ಎನ್ನತಕ್ಕಂಥದ್ದು ಏನಿದೆ, ಆ marks ಕೊಡತಕ್ಕಂತಹ ಕಮಿಟಿ ಒಳಗೆ ಒಬ್ಬನೇ ಸದಸ್ಯರಿದ್ದರೋ? ಎಷ್ಟು ಜನ ಸದಸ್ಯರಿದ್ದರು? ಸದಸ್ಯರುಗಳಲ್ಲಿ ಎಷ್ಟು ಜನ ಎಷ್ಟೆಷ್ಟು marks ಕೊಟ್ಟಿದ್ದಾರೆ? ಆ ಇನ್ನೊಬ್ಬ ಹೆಣ್ಣು ಮಗಳಿಗೆ 150 marks ಕೊಟಿದ್ದಾರಲ್ಲ ಆ ಕಮೀಟಿಯಲ್ಲಿ ಯರ್‍ಯಾರಿದ್ದರು? ಇವತ್ತು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಆ ಯಾವುದೋ ಒಂದು ಕೊಟ್ಟೂರಿನ ಹೆಣ್ಣು ಮಗಳಿಗೆ 150 marks ಕೊಟ್ಟಿದ್ದಾರೆ ಎನ್ನತಕ್ಕಂತಹ charge ಏನಿದೆ, ಆ ಕುಟುಂಬವನ್ನು ನಿರ್ವಹಣೆ ಮಾಡುವಂತಹ ಜವಾಬ್ದಾರಿ ಇತ್ತು. ತಂದೆ ಇಲ್ಲದೆ ಇರತಕ್ಕಂತಹ ಹೆಣ್ಣು ಮಗಳು ಆ ತಾಯಿ ಹಾಗೂ ಜೊತೆಯಲ್ಲಿರತಕ್ಕಂತಹ ಒಟ್ಟ ಹುಟ್ಟಿದವರನ್ನು

ಕಷ್ಟ ಪಟ್ಟು ಸಾಕಿ ಈ ಪರೀಕ್ಷೆ ಬರೆದಿದ್ದಾರೆ. 150 marks ಕೊಟ್ಟಿದ್ದಾರೆ ಹೌದು. ನೀವು KPSC ಸದಸ್ಯರುಗಳು ಕೊಟ್ಟಿರತಕ್ಕಂತಹ marks ಅನ್ನು ಪ್ರಶ್ನೆ ಮಾಡಲಿಕ್ಕೆ ಅಧಿಕಾರ ಇದೆಯೇ? ಸುಪ್ರೀಂ ಕೋರ್ಟಿನವರು ಹಲವಾರು judgments ಕೊಟ್ಟಿದ್ದಾರೆ. ಸೊನ್ನೆಯಿಂದ 150 marks ಕೊಡುವುದಕ್ಕೆ ಅವರಿಗೆ powers ಕೊಟ್ಟಿದ್ದಾರೆ. ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಅದು ಅವರಿಗೆ constitution ವ್ಯವಸ್ಥೆಯೊಳಗೆ ಕೊಟ್ಟಿರತಕ್ಕಂತಹ ಪರಮಾಧಿಕಾರ. ಆ ತಬ್ಬಲಿ ಹೆಣ್ಣು ಮಗಳು 75 ಲಕ್ಷ ರೂ. ಕೊಟ್ಟು ಸೆಲೆಕ್ಷನ್ ಆಗುವುದಕ್ಕೆ ಸಾಧ್ಯವಿದೆಯೇ ಅಧ್ಯಕ್ಷರೆ? ಆ ಹೆಣ್ಣು ಮಗಳು ಬೇರೆ ಜಾತಿಗೆ ಸೇರಿದವಳಲ್ಲ. ಅದೇ ಜಾತಿಗೆ ಸೇರಿದಂತಹವಳು. ನಾವು Article 371 (J) ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಅಲ್ಲಿಯವರೆಗೆ ನೌಕರಿ ದೊರಕಬೇಕೆಂದು ಹೇಳುತ್ತೇವೆ. ಆ ಹೆಣ್ಣು ಮಗಳು ಬಳ್ಳಾರಿ ಜಿಲ್ಲೆ ಕೊಟ್ಟೂರಿನ ತಾಲ್ಲೂಕಿನವಳು. ಆ ಹೆಣ್ಣು ಮಗಳು ಬಂದಿರತಕ್ಕಂತಹ background ನೋಡಿದರೆ ಅವಳು ಹಣ ಕೊಡುವುದಕ್ಕೆ ಸಾಧ್ಯವೇ? ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ. COD report ಇರಬಹುದು, ನಿಮ್ಮ Law Department ಏನು ಕೊಟ್ಟಿದೆ, ಕೊನೆಗೆ Law Department ನವರು ಏನು ಹೇಳುತ್ತಾರೆ, ಈಗಾಗಲೇ ನಿಮ್ಮ Advocate General ಮಾಹಿತಿಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ opinion ಮೇಲೆ ಕೆಲವು ನಿರ್ಧಾರಗಳನ್ನು ಏನು ಮಾಡುತ್ತಿದ್ದೀರಿ ಇನ್ನು ಮುಂದೆ Law Department ನಿಂದ opinion ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. Opinion ಬೇಕೆಂದರೆ ನಿಮ್ಮ Advocate General ನಿಂದ opinion ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಕಾನೂನು ಇಲಾಖೆಯವರು ಪತ್ರ ಬರೆದಿದ್ದಾರೆ. ನನ್ನ ಹತ್ತಿರ ಅದರ ಕಾಪಿ ಇದೆ. Law Department ನವರು ಹೇಳುತ್ತಾರೆ, ನಿಮ್ಮ COD ಯವರು ಒಂದು preliminary report ಕೊಡುವಾಗ ಅವರು ಹೇಳುತ್ತಾರೆ, ಅವರು ಹೇಳುವುದು oral evidence ಅಂತೆ. Oral evidence ಅನ್ನು ತೆಗೆದುಕೊಂಡು ನೀವು ಅವರ ಮೇಲೆ ಯಾವ ರೀತಿ ಸಾಕ್ಷಿ create ಮಾಡಿಕೊಳ್ಳುತ್ತೀರಿ? ಎಷ್ಟರ ಮಟ್ಟಿಗೆ ತನಿಖೆ ನಡೆಸಿದ್ದಾರೆಂದರೆ, ಇವರು ಏನೇನು ಹೇಳಿಕೊಂಡು ಹೋಗುತ್ತಾರೆಂದರೆ, ಅತ್ಯಂತ ಕ್ಷುಲ್ಲಕವಾದ ರೀತಿಯಲ್ಲಿ ಇವರು ಕೊಟ್ಟಿರತಕ್ಕಂತಹ ರಿಪೋರ್ಟ್

ಇದು. ಇದರ ಮೇಲೆ ಸರ್ಕಾರ ಅಂತಿಮವಾಗಿ ಏನು 2011ನೇ ಸಾಲಿನ ಗೆಜೆಟ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮಕ್ತಾಯಗೊಳಿಸುವ ಬಗ್ಗೆ ವಿತ್‌ಡ್ರಾ ಮಾಡಿಕೊಂಡರಲ್ಲ, ಇಲ್ಲಿ ಸರ್ಕಾರಕ್ಕೆ ಆ ಒಂದು KPSC ಯವರು ಸಂಪೂರ್ಣವಾಗಿ ಪ್ರಕ್ರಿಯೆ ಮುಗಿಸಿ ಕಳುಹಿಸಿದ ಮೇಲೆ ಅದನ್ನು ಬೇಕಾದರೆ ಹಾಗೆಯೇ cold storage ನಲ್ಲಿ ಇಡಬಹುದು. ಇವರು 2011 ರಲ್ಲಿ ಯಾವ notification issue ಮಾಡಿದರು, ಆ notification withdraw ಮಾಡಿಕೊಳ್ಳುತ್ತಾರೆ. ಒಂದು ಬಾರಿ KPSC ಗೆ ಹೋದ ಮೇಲೆ ನೀವು ಆ ಲಿಸ್ಟ್ ಅನ್ನು withdraw ಮಾಡಿಕೊಂಡು cancel ಮಾಡುವುದಕ್ಕೆ ಅವಕಾಶ ಇದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ಸಾಧ್ಯವಿಲ್ಲ ಎನ್ನುವುದಕ್ಕೆ ದೆಹಲಿಯಿಂದ ಒಬ್ಬರು expert ವರದಿ ಕೊಟ್ಟಿದ್ದಾರೆ, ಎಲ್ಲಾದಕ್ಕಿಂತ ಪ್ರಮುಖವಾದ ಅಂಶ. ಇಷ್ಟೆಲ್ಲಾ ಅನಾಹುತಗಳನ್ನು ಮಾಡಿಕೊಂಡರು, ಮಾನ್ಯ ರಮೇಶ್ ಕುಮಾರ್‌ರವರು ಈಗ ಹೇಳಬೇಕು. ನಾವು ಇವತ್ತು ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರಿಗೆ ವಂದನಾ ನಿರ್ಣಯವನ್ನು ವ್ಯಕ್ತಪಡಿಸುವುದಕ್ಕೆ ಇಲ್ಲಿ ಸೇರಿದ್ದೇವೆ. ಈ ರಾಜ್ಯದಲ್ಲಿ ನಡೆದಿರುವಂತಹ ಘನತೆವೆತ್ತ ರಾಜ್ಯಪಾಲರ ನಡವಳಿಕೆಗಳು ಇವತ್ತು ಕೆಲವು ವಿಷಯಗಳನ್ನು ನೀವು ಎಲ್ಲಿ ಎಡವಿದ್ದೀರಿ ಎಂದು ನಿಮ್ಮ ಮುಂದಿಡಬೇಕು. ಆ KAT ಮುಂದೆ ಆ ಹುಡುಗರು ಹೋಗುತ್ತಾರೆ. KAT ಒಂದು rehabilitation camp ಇರಬಹುದು. ಇಲ್ಲಿ 60 ವರ್ಷ ಕೆಲಸ ಮಾಡಿರುತ್ತಾರೆ, ಅಲ್ಲಿ ಹೋಗಿ ಸೇರಿಕೊಂಡು ಇನ್ನೊಂದು ನಾಲ್ಕು ವರ್ಷ ಇರುತ್ತಾರೆ. ನಾವು ಇಲ್ಲಿ ಕೆಲಸ ಮಾಡಿದವರಿಗೆ ಅಲ್ಲಿ ಹೋಗಿ ಇನ್ನು ನಾಲ್ಕು ವರ್ಷ ಕೆಲಸ ಮಾಡುವುದಕ್ಕೆ ಒಂದು ಉಡುಗೊರೆ ಕೊಡುತ್ತೇವೆ. ಆರು ತಿಂಗಳು ಕೇಸ್ ನಡೆಸಿ ಮೊನ್ನೆ ಯಾರೋ ಇನ್ನೊಂದು ಮೂಗರ್ಜಿ ಬರೆದಿದ್ದಾರೆಂದು ನಾವು ಕೇಸ್ ನಡೆಸುವುದಿಲ್ಲ ನಾವು ವಾಪಸ್ not before me ಮಾಡಿಕೊಳ್ಳುತ್ತೇವೆಂದು ಹೇಳಿ ಆರು ತಿಂಗಳು ಆದ ಮೇಲೆ, KAT ಯಲ್ಲಿದೆ. ಒಬ್ಬ ಸದಸ್ಯರನ್ನು ನೀವು suspend ಮಾಡಿದರಲ್ಲ ಇವತ್ತು ಏನು ಚರ್ಚೆ ಮಾಡುತ್ತಿದ್ದೇವೆ. ನೀವು ಕ್ಯಾಬಿನೆಟ್‌ನಲ್ಲಿ ಮಾನ್ಯ ಮಹಾದೇವಪ್ಪನವರು ಹಾಗೂ ಶ್ರೀನಿವಾಸ್ ಪ್ರಸಾದ್‌ರವರು ಹೇಳಬೇಕು. ನಮ್ಮ ಆಂಜನೇಯರವರು

ಇಲ್ಲ, ಆ ಬುಕ್ ನೋಡಿ ನಮ್ಮ ಕುಮಾರಸ್ವಾಮಿಯವರು ಒಳ್ಳೆಯ ಲೇಖನ ಬರೆಯುತ್ತಾರೆಂದು ನಿನ್ನೆ ಹೇಳಿದ್ದಾರೆ. ನೀವು ಈ ರಾಜ್ಯದಲ್ಲಿ ಮಂತ್ರಿಗಳಾಗಿ ಆರು ಕೋಟಿ ಜನತೆಯನ್ನು represent ಮಾಡುತ್ತಿರುವವರು. ನೀವು ಈ ಸಮಾಜದ ಕೋಟಾಗಳಲ್ಲಿ fill up ಆಗತಕ್ಕಂಥವರು, ಇದು ರಾಜಕೀಯದ ವ್ಯವಸ್ಥೆ ನಾವು ಮಾಡಿಕೊಂಡಿರತಕ್ಕಂಥದ್ದು, 6 ಕೋಟಿ ಜನತೆಯ ಮಂತ್ರಿಗಳಾಗಿ ನೀವು ಕೆಲಸವನ್ನು ನಿರ್ವಹಿಸುವುದು. ನಿಮಗೆ ಏತಕ್ಕಾಗಿ ಧ್ವನಿ ಎತ್ತುವುದಕ್ಕೆ ಆಗಲಿಲ್ಲ ಎನ್ನುವ ವಿಚಾರದಲ್ಲಿ ನನಗೆ ನೋವಿದೆ. ಇವತ್ತು ಯಾವ ಸುಂದರ್ ಎನ್ನತಕ್ಕಂಥ ಸೆಕ್ರೆಟರಿ ಮೇಲೆ 9 responsibilities ಇತ್ತು.

ಶ್ರೀ ವಿ. ಶ್ರೀನಿವಾಸ್‌ಪ್ರಸಾದ್ (ಕಂದಾಯ ಸಚಿವರು):- ಕುಮಾರಸ್ವಾಮಿಯವರೆ, ಒಂದು ನಿಮಿಷ, ನೀವು ಧ್ವನಿ ಎತ್ತುವುದಕ್ಕೆ ಏಕೆ ಆಗಲಿಲ್ಲ ಎಂದು ನನ್ನನ್ನು ಕೇಳಿದಿರಲ್ಲ. ನಾವು ಮಂತ್ರಿಗಳಾಗಿರತಕ್ಕಂಥವರು, ಧ್ವನಿಯನ್ನು ಕ್ಯಾಬಿನೆಡ್ ಮುಂದೆ ಆ ವಿಷಯ ಚರ್ಚೆಗೆ ಬಂದಾಗ ಮಾತನಾಡಿದ್ದೇವೆ. ನಾವು ಎಲ್ಲಿ ಎತ್ತಬೇಕೋ ಅಲ್ಲಿ ಎತ್ತಾಗಿದೆ. ಹೊರಗಡೆಯಲ್ಲಿ ಅಲ್ಲ, ನಾವು ವಿಷಯ ಎತ್ತಿದ್ದೇವೋ, ಏನು ಮಾತನಾಡಿದ್ದೇವೆ, ಏನಾಗಿದೆ ಎನ್ನತಕ್ಕಂಥದ್ದು ಬೇರೆ. ಇವತ್ತು ನೀವು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕಂಥ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಇದನ್ನೇ ನೀವು ಈ ವೇಳೆಯಲ್ಲಿ, adjournment motion ನಲ್ಲಿ ತರಬಹುದಾಗಿತ್ತು. ಇವತ್ತು ನೀವು ಮಾತನಾಡುವ ಭಾಷಣಗಳೆಲ್ಲಾ ಅದನ್ನು adjournment motion ತಂದು ಮಾತನಾಡತಕ್ಕಂಥದ್ದನ್ನೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಮಾತನಾಡುತ್ತಿದ್ದೀರಿ. ಈ ಪ್ರಕರಣ ನಡೆದು ಎಷ್ಟು ದಿನಗಳಾಯಿತು, ಏನಾಗಿದೆ, ಇವುಗಳ ಬಗ್ಗೆ ಈಗ ಮಾತನಾಡುತ್ತಿದ್ದೀರಿ. ಏಕೆ ಆಗ ನೀವು ಮಾತನಾಡಲಿಲ್ಲ? ಹಿಂದಿನ ಅಧಿವೇಶನಗಳಲ್ಲಿ ಏಕೆ ಈ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ? ಈಗ ಏಕೆ ಈ ವಿಷಯದ ಬಗ್ಗೆಯೇ ಮಾತನಾಡುತ್ತಿದೀರಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಬೇರೆ ಬೇರೆ ವಿಷಯಗಳು ಬಹಳಷ್ಟು ಇದ್ದವು. ಇವತ್ತು ತಾವು ಮಾತನಾಡತಕ್ಕಂಥದ್ದು ಒಂದು ರೀತಿ ಅದರ ಮೇಲೆಯೇ

adjournment motion ತಂದು ಮಾತನಾಡುತ್ತಿದ್ದೀರೇನೋ ಎನ್ನತಕ್ಕಂಥಿದೆ. ನಾವು ಈ ಹಗರಣವನ್ನು ಹೇಗೆ ತೆಗೆದುಕೊಂಡಿದ್ದೇವೆ, ಬಹುಶಃ ಅಷ್ಟೇ ಸಮರ್ಪಕವಾಗಿ ಈ ವಿಷಯವನ್ನು ತೆಗೆದುಕೊಂಡು ಮಾತನಾಡಿದ್ದೇವೆ. ಅಂತಿಮವಾಗಿ ಕ್ಯಾಬಿನೆಟ್‌ನಲ್ಲಿ ನಾನೂ ಕೂಡ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇನೆ. ಅಂತಿಮವಾಗಿ ಕ್ಯಾಬಿನೆಟ್ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತದೋ ಅದಕ್ಕೆ ನಾವು ಬದ್ಧರಾಗಬೇಕಾಗುತ್ತದೆ. ಈಗ ಅದು ಕೋರ್ಟಿಗೆ ಹೋಗಿದೆ, ಕೋರ್ಟ್‌ನಲ್ಲಿ ಕೇಸ್ ನಡೆಸಲಿ. ನಾವು ಕ್ಯಾಬಿನೆಟ್‌ನಲ್ಲಿ ಮಾತನಾಡಿದ್ದೇವೆ.

ಡಾ॥ ಹೆಚ್.ಸಿ. ಮಹದೇವಪ್ಪ:- ಕ್ಯಾಬಿನೆಟ್‌ನಲ್ಲಿ ಯಾರು ಏನೇನು ಮಾತನಾಡಿದರು ಎಂಬುದನ್ನು ಹೇಳುವುದಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ಹೇಳುವುದು ಬೇಡ. ನೀವು ಮಾತನಾಡಿದ್ದರೆ ಬಹಳ ಸಂತೋಷ. ನಾನು ಅವರ ಪರವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ:- ಇನ್ನೊಂದು ವಿಚಾರ ಏನೆಂದರೆ, ಇದು ಊರ್ಜಿತವಾಗುತ್ತದೋ ಅಥವಾ ಇನ್ನೊಂದು ಹೊಸದಾಗಿ ಬರುತ್ತದೋ ಗೊತ್ತಿಲ್ಲ. ಆದರೆ reservation remains the same. Reservation quota ವನ್ನು ಕಿತ್ತುಹಾಕುವುದಕ್ಕೆ ಬರುವುದಿಲ್ಲ. Nobody can take away the reservation. ಈ ವಿಷಯ ನಿಮಗೆ ಗೊತ್ತಿಲ್ಲವೆಂದಲ್ಲ, ನಿಮಗೂ ಕೂಡ ಇವೆಲ್ಲವೂ ಗೊತ್ತಿದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಗೊತ್ತು ಸಾರ್, ನೀವು ಮಾತನಾಡಿದ್ದೀರಿ, ಅದಕ್ಕಲ್ಲ, ಏತಕ್ಕೆ ಎಂಬುದನ್ನು ನಿಮಗೆ ಹೇಳುತ್ತೇನೆ. ಇವತ್ತು ಸಿ.ಓ.ಡಿ. ಯವರು ಕೊಟ್ಟಿರತಕ್ಕಂಥ ವರದಿಯಲ್ಲಿ responsibilities ಬಗ್ಗೆ findings ನಲ್ಲಿ ಏನು ಹೇಳಿದ್ದಾರೆಂದರೆ ಅದರ ಸಂಪೂರ್ಣ findings ನ ಹೊರೆ ಸೆಕ್ರೆಟರಿಯದ್ದು. ಸುಂದರ್ ಎನ್ನತಕ್ಕಂಥ ಸೆಕ್ರೆಟರಿ ಏನು ಇದ್ದರೋ

ಅವರ ಮೇಲೆ ಕೊಟ್ಟಿರತಕ್ಕಂಥದ್ದು. ಅವರ lapses ಬಗ್ಗೆ ಹೇಳಿದ್ದಾರೆ. ಇಲ್ಲಿಯವರೆವಿಗೂ ಅವರನ್ನೇನಾದರೂ ಕೆಲಸದಿಂದ suspend ಮಾಡಿದ್ದೀರಾ? ಅವರಿಗೆ ನೀವು ಎಲ್ಲಿ ಹುದ್ದೆಯನ್ನು ಕೊಟ್ಟಿದ್ದೀರಿ? ಆ ಅಧಿಕಾರಿ ಬಗ್ಗೆ ಸಿ.ಓ.ಡಿ. ವರದಿಯಲ್ಲಿ ಕೊಟ್ಟಿರತಕ್ಕಂಥದ್ದೇನಿದೆ ಅದನ್ನು ನೋಡಿಯೂ ಆ ಅಧಿಕಾರಿಗೆ ಇನ್ನೂ ರಕ್ಷಣೆ ಕೊಟ್ಟಿದ್ದೀರೋ ಅಥವಾ suspend ಮಾಡಿದ್ದೀರೋ ಎಂಬ ಬಗ್ಗೆ ದಯವಿಟ್ಟು ಈ ಸದನಕ್ಕೆ ಹೇಳಬೇಕು. ನೀವು ಈಗ ನನಗೆ ಈ ವಿಷಯವನ್ನು ಹಿಂದಿನ ಅಧಿವೇಶನದಲ್ಲಿಯೇ ಪ್ರಸ್ತಾಪ ಮಾಡಬೇಕಾಗಿತ್ತೆಂದು, adjournment motıon ನಲ್ಲಿ move ಮಾಡಬೇಕಾಗಿತ್ತೆಂದು ಹೇಳಿದಿರಿ.

ಶ್ರೀ ವಿ. ಶ್ರೀನಿವಾಸಪ್ರಸಾದ್:– ಏಕೆ ತರಲಿಲ್ಲ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಏತಕ್ಕೆ ಎಮಬುದನ್ನು ಈಗ ಹೇಳಿತ್ತೇನೆ. ಕಳೆದ ಬಾರಿ ಇಲಾಖವಾರು ಚರ್ಚೆಗಳನ್ನು ಮಾಡಬೇಕಾದರೆ ಒಂದು ತಿಂಗಳು ಸದನ ನಡೆಯಿರು. ನಿಮ್ಮ ಕ್ಯಾಬಿನೆಟ್ ಮುಂದೆ ಈ subject ಎರಡ್ಮೂರು ಬಾರಿ ಬಮದರು ಕೂಡ ನೀವು ಈ subject defer ಮಾಡಿಕೊಂಡೇ ಬಂದಿರಿ. ಸದನದ ಕಲಾಪ ಮುಗಿದ ನಂತರ ಕಳೆದ ವರ್ಷ ಇದಕ್ಕೆ ನೀವು ತೀಮಾನವನ್ನು ಮಾಡಿಕೊಂಡಿರಿ. ತದನಂತರ ಸದನದ ಅಧಿವೇಶನ ನಡೆದದ್ದು ಬೆಳಗಾವಿಯಲ್ಲಿಯೇ, ಅದೂ ಹತ್ತು ದಿನ, ಎಲ್ಲಿಂದ ಚರ್ಚೆ ಮಾಡುವುದು ನಾನು ಅಲ್ಲಿ? ಇದು ನನ್ನ lapses ಅಲ್ಲ. ನಾನು ಇದನ್ನು ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ಮಾಡಬೇಕೆಂದರೆ ಸಮಯ ಸಿಗದೇ ಇದ್ದ ಕಾರಣ ಮಾತನಾಡುವುದಕ್ಕೆ ಆಗಲಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ನೀವು ಪ್ರಸ್ತಾಪವನ್ನು ಮಾಡಲಿಲ್ಲ. ಸಮಯ ಕೊಡುತ್ತಾರೋ ಬಿಡುತ್ತಾರೋ ಅದು ಬೇರೆ ವಿಷಯ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ. ಅವುಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಸಿಗಲಿಲ್ಲ. ಆದರೆ ಇವತ್ತು ಬಹಳ ತಡವಾಗಿ ತಮ್ಮ ಕ್ಯಾಬಿನೆಟ್‌ಗೆ ನೀವು ಮಾಡಿರತಕ್ಕಂಥ

lapses ಬಗ್ಗೆ ಜ್ಞಾನೋದಯವಾಗಿದೆ. ಅವತ್ತು ನಾನು ಅದಕ್ಕೇ ಹೇಳಿದ್ದು, ಘನತೆವೆತ್ತ ರಾಜ್ಯಪಾಲರ ಬಗ್ಗೆ ಇಲ್ಲೇನು ನಾವು ವಂದನಾ ನಿರ್ಣಯವನ್ನು ನೀಡುವುದಕ್ಕೆ ಗೌರವ ಕೊಡುವುದಕ್ಕೆ ಕುಳಿತಿದ್ದೇವೆ, ಯಾವ ರೀತಿ ನಡೆಸಿಕೊಂಡಿರಿ, ಯಾವ ರೀತಿ ರಾಜ್ಯಪಾಲರು ಹಿಂದೆ ಇದ್ದಂಥವರು ತೀರ್ಮಾನವನ್ನು ಕೊಟ್ಟರು. ಇಲ್ಲಿ Advocate General ರವರು ಒಂದು opinion ಅನ್ನು ನಿಮಗೆ ಕೊಟ್ಟಿದ್ದಾರೆ. ಏನು ಕೊಟ್ಟರು opinion ಎಂದರೆ ಡಾ|| ಮಂಗಳಾ ಶ್ರೀಧರ್‌ರವರನ್ನು ಅಮಾನತ್ತುಗೊಳಿಸಿದ ಆದೇಶ ಭಾರತ ಸಂವಿಧಾನದ ಅನುಚ್ಛೇದ 317 (2) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ವಿರುದ್ಧವಾಗಿದೆಯೆಂದು ಮೂಲದಿಂದಲೇ ಅಸಿಂಧುವೆಂದು ಹಾಗೂ ಸಚಿವ ಸಂಪುಟದ ನಿರ್ಧಾರವನ್ನು ಪಡೆದಿರುವುದಿಲ್ಲವೆಂದು ಇದು ಅವಧಿಪೂರ್ವ ಮತ್ತು ಭಾರತ ಸಂವಿಧಾನದ ಅನುಚ್ಛೇಧ 21 ರ ಉಲ್ಲಂಘನೆಯಾಗಿರುವುದರಿಂದ ಅಮಾನತ್ತುಗೊಳಿಸಿದ ಆದೇಶ ಕಾನೂನು ಸಿಂಧುತ್ವವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿರುತ್ತಾರೆ. ದಂಡ ಪ್ರಕ್ರಿಯೆ ಸಂಹಿತೆ ಕಲಂ 197 ರಡಿ ಅಥವಾ ಲಂಚ ನಿರೋಧಕ ಕಾಯಿದೆ 88 ರಡಿ ಅಭಿಯೋಜನೆಗೊಳಿಸುವ ಅಧಿಕಾರ ಸರ್ಕಾರಕ್ಕಿದೆಯೇ ಹೊರತು ಗೌರವಾನ್ವಿತ ರಾಜ್ಯಪಾಲರು ತಾವಾಗಿಯೇ ಅಧಿಕಾರವನ್ನು ಚಲಾಯಿಸಿ ಅಮಾನತ್ತುಗೊಳಿಸುವಂತಿಲ್ಲವೆಂದು ಅವರು ವಾದವನ್ನು ಮಾಡಿಕೊಂಡರು. ಡಾ|| ಮಂಗಳಾ ಶ್ರೀಧರ್‌ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಮಂಡಿಸಿರುವ ವಿಷಯಗಳು ಸಂಕೀರ್ಣವಾದ ಕಾನೂನು ವಿಷಯಗಳಾಗಿದ್ದು ಸಿ.ಐ.ಡಿ. ಪ್ರಸ್ತಾವನೆಯಂತೆ ಕರ್ನಾಟಕ ಲೋಕಸೇವಾ ಆಯೋಗದ 8 ಜನ ಹಾಲಿ ಮತ್ತು ನಿವೃತ್ತ ಸದಸ್ಯರನ್ನು ಅಭಿಯೋಜನೆಗೊಳಿಸಲು ಪರಿಗಣಿಸುವ ಮುನ್ನ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆ ಶಿಫಾರಸ್ಸಿನ ನಂತರ ಅಥವಾ ಸಚಿವ ಸಂಪುಟದ ಅನುಮೋದನೆ ಶಿಫಾರಸ್ಸಿನ ನಂತರ ಕರ್ನಾಟಕ ಸರ್ಕಾರವು ಹಾಲಿ ಅಥವಾ ನಿವೃತ್ತ ಕೆ.ಪಿ.ಎಸ್.ಸಿ. ಸದಸ್ಯರನ್ನು ಅಮಾನತ್ತುಗೊಳಿಸುವ, ಅಭಿಯೋಜನೆಗೊಳಿಸುವ ಪ್ರಕರಣಗಳನ್ನು ಗೌರವಾನ್ವಿತ ರಾಜ್ಯಪಾಲರ ಸಹಮತಿಗೆ ಕಳುಹಿಸಬೇಕೆ ಎಂದು ಇದನ್ನು

ಕೇಳಿದ್ದಾರೆ. ಅಡ್ವೋಕೇಟ್ ಜನರಲ್‌ರವರು ಕೊಟ್ಟಿರತಕ್ಕಂಥ ರಿಪೋರ್ಟ್ ಮತ್ತು ಏತನ್ಮಧ್ಯೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಗೌರವಾನ್ವಿತ ರಾಜ್ಯಪಾಲರು ಡಾ॥ ಮಂಗಳಾ ಶ್ರೀಧರ್‌ರವರನ್ನು ಕೆ.ಪಿ.ಎಸ್.ಸಿ. ಸದಸ್ಯ ಹುದ್ದೆಯಿಂದ ಅಮಾನತ್ತುಗೊಳಿಸಿದ ಕ್ರಮವನ್ನು ಎತ್ತಿಹಿಡಿದಿದೆ. Application of mind ಎನ್ನತಕ್ಕಂಥದ್ದನ್ನು ಸರ್ಕಾರಗಳಿಗೆ, ನಮಗೇನು ಛಾಟಿ ಬೀಸುತ್ತಾರೋ ಆ ಪುಣ್ಯಾತ್ಮರು application of mind ಅನ್ನು ಈ ತೀರ್ಮಾನವನ್ನು ಎತ್ತಿ ಹಿಡಿಯಬೇಕಾದರೆ ತಲೆಯಲ್ಲಿ ಇಟ್ಟುಕೊಂಡಿದ್ದರೆ ಎಂಬ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಸರ್ಕಾರವು ಪ್ರಸ್ತಾಪಿಸಿರುವ ಕಾನೂನು ಸಮಸ್ಯೆಗಳಿಗೆ ಅನುಸಾರವಾಗಿ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಿದ್ದಾರೆ. ಗೌರವಾನ್ವಿತ ರಾಜ್ಯಪಾಲರು ಭಾರತ ಸಂವಿಧಾನದ ಅನುಚ್ಛೇಧ 317 (2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಲೋಕಸೇವಾ ಆಯೋಗದ ಸದಸ್ಯರನ್ನು ಅಮಾನತ್ತುಗೊಳಿಸಬೇಕಾದರೆ ಮಂತ್ರಿಮಂಡಲದ ಸಲಹೆ ಸೂಚನೆಯ ಅನುಸಾರ ಮಾಡತಕ್ಕದ್ದು. ಕೆ.ಪಿ.ಎಸ್.ಸಿ. ಸದಸ್ಯರಿಗೆ ದಂಡ ಪ್ರಕ್ರಿಯೆ ಸಂಹಿತೆಯ 1973ರ ಕಲಂ 197 ಅನ್ನು ಅನ್ವಯ ಮಾಡುವಂತಿಲ್ಲ ಹಾಗೂ ಅದರಂತೆ ಈ ಕಲಂನಲ್ಲಿ ಕಲ್ಪಿಸಿರುವ ಅವಕಾಶದಡಿ ಲೋಕಸೇವಾ ಆಯೋಗದ ಸದಸ್ಯರು ಅಥವಾ ಅಧ್ಯಕ್ಷರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಪರಿಗಣಿಸುವ ಅಗತ್ಯವಿರುವುದಿಲ್ಲ. ಕೆ.ಪಿ.ಎಸ್.ಸಿ. ಯ ಹಾಲಿ ಸದಸ್ಯರನ್ನು ಅಭಿಯೋಜನೆಗೊಳಿಸಬೇಕಾದರೆ ಘನತೆವೆತ್ತ ರಾಷ್ಟ್ರಪತಿಗಳ ಸಹಮತಿಯನ್ನು ಪಡೆಯಬೇಕೇ ಹೊರತು ಕರ್ನಾಟಕದ ರಾಜ್ಯಪಾಲರ ಸಹಮತಿಯನ್ನಲ್ಲ. ಗೌರವಾನ್ವಿತ ರಾಜ್ಯಪಾಲರು ಈಗಾಗಲೇ ಅಭಿಯೋಜನೆಗೊಳಿಸಲು ಸಹಮತಿಯನ್ನು ನೀಡಿದ್ದಲ್ಲಿ ಅದನ್ನು ಕಡೆಗಣಿಸಿ ಸಕ್ಷಮ ಪ್ರಾಧಿಕಾರವಾದ ಘನತೆವೆತ್ತ ರಾಷ್ಟ್ರಪತಿಗಳ ಸಹಮತಿಯನ್ನು ಪಡೆಯಲು ಸೂಕ್ತ ಕ್ರಮ ವಹಿಸುವುದು. ಕೆ.ಪಿ.ಎಸ್.ಸಿ. ಯ ಹಾಲಿ ಸದಸ್ಯರನ್ನು ಲಂಚ ನಿರೋಧಕ ಕಾಯಿದೆಯಡಿಯಲ್ಲಿ ಆರೋಪಿಸಲಾದ ಅಪರಾಧಗಳಿಗೆ ಅಭಿಯೋಜನೆ ಮಂಜೂರಾತಿ ನೀಡಲು ಲಂಚ ನಿರೋಧಕ ಕಾಯಿದೆಯ ಕಲಂ 19 ರಡಿ ಘನತೆವೆತ್ತ ರಾಷ್ಟ್ರಪತಿಗಳ ಸಹಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಪ್ರಸ್ತುತ ಸೇವಾ

ನಿವೃತ್ತಿ ಹೊಂದಿರುವುದನ್ನು ಹೇಳುತ್ತಾ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಕೊಟ್ಟುಕೊಂಡಿದ್ದಾರೆ, ಅದು ಬೇಕಿಲ್ಲ, ಅದರ ಬಗ್ಗೆ ಈಗ ನಾನು explain ಮಾಡಬೇಕಾಗಿಲ್ಲ. ಕರ್ನಾಟ ಉಚ್ಚ ನ್ಯಾಯಾಲಯವು ಡಾ|| ಮಂಗಳಾ ಶ್ರೀಧರ್‌ರವರನ್ನು ಕೆ.ಪಿ.ಎಸ್.ಸಿ. ಸದಸ್ಯ ಹುದ್ದೆಯಿಂದ ಅಮಾನತ್ತುಗೊಳಿಸಿರುವ ಗೌರವಾನ್ವಿತ ರಾಜ್ಯಪಾಲರ ಕ್ರಮವನ್ನು ಎತ್ತಿಹಿಡಿದಿರುವ ಹಿನ್ನಲೆಯಲ್ಲಿ ಈ ಬಗ್ಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ಮುಂದಿನ ಕ್ರಮದ ಅಗತ್ಯತೆ ಇರುವುದಿಲ್ಲ. ಕೆ.ಪಿ.ಎಸ್.ಸಿ. ಸದಸ್ಯರಾದ ಡಾ|| ಮಂಗಳಾ ಶ್ರೀಧರ್‌ರವರನ್ನು ಗೌರವಾನ್ವಿತ ರಾಜ್ಯಪಾಲರು ದಂಡ ಪ್ರಕ್ರಿಯೆಯ ಕಲಂ 197, ಲಂಚ ನಿರೋಧಕ ಕಾಯಿದೆ ಕಲಂ 19 ರಡಿ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿದಂತೆ ಅಭಿಯೋಜನೆಗೊಳಿಸಲು ಕರ್ನಾಟಕ ಸರ್ಕಾರವು ದಿನಾಂಕ 18.07.2014 ರಂದು ಹೊರಡಿಸಿರುವ ಆದೇಶವನ್ನು ಹಿಂಪಡೆಯಲು ಸೂಕ್ತ ಕ್ರಮ ವಹಿಸಬಹುದು. ಏಕೆಂದರೆ ಕಾನೂನಿನ ಅಭಿಪ್ರಾಯದನ್ವಯ ಅಭಿಯೋಜನೆಗೊಳಿಸುವ ಕುರಿತು ಈಗಾಗಲೇ ಗೌರವಾನ್ವಿತ ರಾಜ್ಯಪಾಲರು ಮಂಜುರಾತಿ ನೀಡಿದ್ದಲ್ಲಿ ಅದನ್ನು ಕಡೆಗಣಿಸಿ ಹೊಸದಾಗಿ ಅಭಿಯೋಜನೆಗೊಳಿಸಲು ಸಕ್ಷಮ ಪ್ರಾಧಿಕಾರವಾದ ಘನತೆವೆತ್ತ ರಾಷ್ಟ್ರಪತಿಗಳ ಸಹಮತಿಯನ್ನು ಪಡೆಯಬೇಕಾಗುತ್ತದೆ. ಯಾವ ಯಾವ ರೀತಿ ನೀವು error ಮಾಡಿಕೊಂಡು ಬಂದಿದ್ದೀರಿ. ಡಿ.ಜಿ.ಪಿ., ಸಿ.ಐ.ಡಿ. ಯವರು ದಿನಾಂಕ 27.05.2014 ರ ಪತ್ರದಲ್ಲಿ ಕೆ.ಪಿ.ಎಸ್.ಸಿ. ಸದಸ್ಯರುಗಳ ವಿರುದ್ಧ ಈ ಕೆಳಕಂಡಂತೆ ಆರೋಪಗಳನ್ನು ಸಲ್ಲಿಸಿದ್ದಾರೆ.

ಆರೋಪಿ–1 ಗೋನಾಳ್ ಭೀಮಪ್ಪ ಅವರೊಂದಿಗೆ ಅಪರಾಧಿಕ ಉದ್ದೇಶದಿಂದ ಸಮಾಲೋಚಿಸಿ, ಶಾಮೀಲಾಗಿ, ಅಪರಾಧಾತ್ಮಕ ಒಳಸಂಚು ನಡೆಸಿ, ಪ್ರವರ್ಗವಾರು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ತಮ್ಮಲ್ಲಿಯೇ ಒಪ್ಪಂದ ಮಾಡಿಕೊಂಡು ಪ್ರವರ್ಗವಾರು ಹುದ್ದೆಗಳ ಅಭ್ಯರ್ಥಿಗಳಿಂದ ಅಕ್ರಮ ಸಂಭಾವನೆ ಲಾಭ ಹೊಂದುವ ಹಿನ್ನೆಲೆಯಲ್ಲಿ ವ್ಯವಹರಿಸುವಂತೆ ಸದಸ್ಯರುಗಳೊಂದಿಗೆ ಒಳಒಪ್ಪಂದ ಮಾಡಿಕೊಂಡು ಅದರಂತೆ ವ್ಯವಹಾರ ಕುದುರಿದ ಅಭ್ಯರ್ಥಿಗಳಿಗೆ ಎಲ್ಲಾ ಸದಸ್ಯರು ವ್ಯಕ್ತಿತ್ವ ಪರೀಕ್ಷೆಯಲ್ಲಿ

ಒಮ್ಮತದಿಂದ ಅಂಕಗಳನ್ನು ನೀಡಬೇಕೆಂದು ನಿಗದಿ ಪಡಿಸಿಕೊಂಡು ವ್ಯಕ್ತಿತ್ವ ಪರೀಕ್ಷೆ ನಡೆಸಲು ಸಂಬಂಧಪಟ್ಟಂತೆ ಕೆಪಿಎಸ್‌ಸಿ ನಿಯಮಾವಳಿಯಲ್ಲಿರುವ ಮಾನದಂಡವನ್ನು ಅನುಸರಿಸದೆ ಪ್ರತಿಯೊಬ್ಬ ಅಭ್ಯರ್ಥಿಯು ಸಂದರ್ಶನ ಮುಗಿದ ತಕ್ಷಣವೇ ಅಂಕಗಳನ್ನು ನೀಡದೆ, ತದನಂತರ ಆರೋಪಿಗಳು ಸಮಾಲೋಚನೆ ಮಾಡಿಕೊಂಡು ತಾವು ಇಚ್ಛಿಸಿದ ಅಭ್ಯರ್ಥಿಗಳಿಗೆ ಇಚ್ಛಿತ ಹುದ್ದೆ ಸಿಗಲು ಅವಶ್ಯಕವಿರುವಷ್ಟು ಸಮಾನ ಅಂಕಗಳನ್ನು ಎಲ್ಲರೂ ನೀಡಿ, ನೈಜ ಮತ್ತು ಅರ್ಹ ಅಭ್ಯರ್ಥಿಗಳಿಗೆ ವಂಚಿಸಿರುತ್ತಾರೆ. ಪ್ರಾಧಿಕಾರವು ಅಭಿಯೋಜನಾ ಮಂಜೂರಾತಿ ನೀಡುವುದು ಅವಶ್ಯವಿರುತ್ತದೆಂದು ಸಹ ತಿಳಿಸಿರುತ್ತಾರೆ.'

ಅಧ್ಯಕ್ಷರು:– ಇದು ಸಿ.ಒ.ಡಿ. ರಿಪೋರ್ಟ್?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸಿ.ಒ.ಡಿ. ಯವರು ಕೊಟ್ಟಿರುವುದು, ಅದನ್ನು ನಮ್ಮ ಎಜಿ ಯವರು explain ಮಾಡುತ್ತಿರುವುದು. ಇಲ್ಲಿ ಈ ಕೆಳಕಂಡ ಅಂಶಗಳನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಬಹುದು ಎಂದುಕೊಡುತ್ತಾರೆ. 120 ಕಲಂ ಎಲ್ಲಾ ಇದೆ. ಇಲ್ಲಿ 'ಸಿ.ಐ.ಡಿ. ವರದಿಯನ್ವಯ ಕೆ.ಪಿ.ಎಸ್.ಸಿ. ಸದಸ್ಯರಾದ ಡಾ॥ ಮಂಗಳಾ ಶ್ರೀಧರ್ ಅವರು ಎಸಗಿರುವ ಅಪರಾಧಗಳಿಗೆ ಲಂಚ ನಿರೋಧಕ ಕಾಯ್ದೆ 88ರ ಕಲಂ 7, 8, 9, 13 (1), ಎ, ಬಿ, ಸಿ, ಡಿ ಸವಚನ 13/2 ರಲ್ಲಿ ಆರೋಪಿಸಿರುವ ಅಪರಾಧಿಗಳಿಗೆ ಲಂಚ ನಿರೋಧಕ ಕಾಯ್ದೆ 88ರ ಕಲಂ 19ರ ಅಡಿಯಲ್ಲಿ ಅಭಿಯೋಜನೆಗೊಳಿಸಲು ಮಂಜೂರಾತಿ ನೀಡುವಂತೆ ಗೌರವಾನ್ವಿತ ರಾಜ್ಯಪಾಲರ ಮುಖಾಂತರ ಭಾರತ ಘನತೆವೆತ್ತ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡಬೇಕು.' ಈಗ ಮಾನ್ಯ ರಾಜ್ಯಪಾಲರು ಮೊನ್ನೆ 200 ಕೊಟ್ಟು ಹೋದರಲ್ಲ, ಈಗ ಅದನ್ನು ವಾಪಸ್ಸು ಪಡೆದುಕೊಂಡು ಈಗಿನ ರಾಜ್ಯಪಾಲರ ಮುಂದೆ ಹೋಗಿ, ಅವರ ಹತ್ತಿರ ಅನುಮತಿ ತೆಗೆದುಕೊಂಡು ಇಲ್ಲಿಂದ ರಾಷ್ಟ್ರಪತಿಯವರಿಗೆ ಹೋಗಬೇಕು. ಇದು ಇವರು ಮಾಡಿಕೊಂಡಿರುವ ಕೆಲಸ. ಇನ್ನೊಂದು ಎಲ್ಲಾದಕ್ಕಿಂತ ಅತ್ಯುತ್ತಮ ರೀತಿಯಲ್ಲಿ ಎಷ್ಟು ಪ್ರಾಮಾಣಿಕತೆಯಿಂದ ಮಾಡುತ್ತಿದ್ದಾರೆ ಎನ್ನುವುದಕ್ಕೆ, '10ನೇ ಆರೋಪಿಯಾದ

ಎಸ್.ಆರ್. ರಂಗಮೂರ್ತಿ, ಕೆಪಿಎಸ್‌ಸಿ ಸದಸ್ಯರು, 11ನೇ ಆರೋಪಿ ಡಾ॥ ಎನ್. ಮಹದೇವ್, ಕೆಪಿಎಸ್‌ಸಿ ಸದಸ್ಯರು, 12ನೇ ಆರೋಪಿ ಡಾ॥ ಹೆಚ್.ಪಿ. ಪಾರ್ಶ್ವನಾಥ, ಐಎಎಸ್ (ನಿವೃತ್ತ), ಕೆಪಿಎಸ್‌ಸಿ ಸದಸ್ಯರು, 13ನೇ ಆರೋಪಿಯಾದ ಶ್ರೀ ದಯಾಶಂಕರ್, ಐಎಎಸ್, ಕೆಪಿಎಸ್‌ಸಿ ಸದಸ್ಯರು, 14ನೇ ಆರೋಪಿಯಾದ ಡಾ॥ ಹೆಚ್.ಡಿ. ಪಾಟೀಲ್, ಕೆಪಿಎಸ್‌ಸಿ ಸದಸ್ಯರು, ಇವರುಗಳನ್ನು ಲಂಚ ನಿರೋಧಕ ಕಾಯಿದೆ 88ರ ಕಲಂ 13(1) ಡಿ ಸವಚನ 13 (2) ಡಿ ಆರೋಪಿಸಲಾದ ಅಪರಾಧಗಳಿಗೆ ಕಲಂ 19ರ ಅಡಿ ಅಭಿಯೋಜನೆಗೊಳಿಸಲು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಮುಖಾಂತರ ಭಾರತದ ಘನತೆವೆತ್ತ ರಾಷ್ಟ್ರಪತಿಗಳಿಗೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವ ಬಗ್ಗೆ.' ಇಲ್ಲಿ 11ರ ಬ್ಯಾಚ್ ಕಿತ್ತು ಹಾಕುತ್ತೀರಿ. ಈ ಮೆಂಬರುಗಳ ಮೇಲೆ ಆರೋಪಗಳನ್ನು ಹೊರಿಸಿಕೊಂಡಿದ್ದೀರಿ. ಈ ಮೆಂಬರ್‌ಗಳನ್ನು ಅಭಿಯೋಜನೆಗೊಳಿಸಿ ಎಂದು ಈಗ ರಾಷ್ಟ್ರಪತಿಗಳಿಗೆ ಕಳುಹಿಸುವುದಕ್ಕೆ ಹೊರಟಿದ್ದೀರಿ. ಕಳೆದ 11ರ ಬ್ಯಾಚ್ ಅನ್ನು ವಾಪಸ್ಸು ತೆಗೆದುಕೊಂಡ ಮೇಲೆ ಬೇರೆ ಬೇರೆ ಇಲಾಖೆಗಳಲ್ಲಿ ಕೆಪಿಎಸ್‌ಸಿ ಯಿಂದ ಆಯ್ಕೆ ಪಟ್ಟಿ ಮಾಡಿಸಿದಿರಲ್ಲಾ ಈಗ ಹೊಸದಾಗಿ ಇದೇ ಸದಸ್ಯರು ಆರೋಪಿಗಳು, ಲಂಚ ತಿಂದಿರುವವರು, ಕುಲಗೆಡಿಸಿರುವವರು, ಇವರ ಮುಖಾಂತರವೇ ನಡೆಸಿರತಕ್ಕಂಥ, ಈ ಆರೋಪಿಗಳು ಕೊಟ್ಟಿರುವಂತಹ ಲಿಸ್ಟ್ ಅನ್ನು ನೀವು accept ಮಾಡಿಕೊಳ್ಳುತ್ತೀರಿ.

ಅಧ್ಯಕ್ಷರು:– ಇದು ಯಾವಾಗ ಕೊಟ್ಟಿದ್ದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಕಳೆದ ಎಂಟು ತಿಂಗಳ ಹಿಂದೆ ಕೆಪಿಎಸ್‌ಸಿ interview ನಡೆದು 2800 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಅಲ್ಲಿ ಭ್ರಷ್ಟಾಚಾರ ನಡೆದಿಲ್ಲ. ಈಗ ಸರ್ಕಾರ ಕಳುಹಿಸುತ್ತಿದ್ದಾರೆ, ನಮ್ಮ ಎಜಿಯವರು ಕೊಟ್ಟಿದ್ದಾರೆ.

ಅಧ್ಯಕ್ಷರು:– ರೈಲಿನಲ್ಲಿ ಹೋಗುತ್ತದಾ, ಗೂಡ್ಸ್ ರೈಲಿನಲ್ಲಿ ಹೋಗುತ್ತದಾ, ಲಾರಿಯಲ್ಲಿ ಹೋಗತ್ತದಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇದನ್ನೇ? ಮಾನ್ಯ ರಾಷ್ಟ್ರಪತಿಗಳಿಗೆ ಯಾವುದರಲ್ಲಿ ಕಳುಹಿಸುತ್ತಾರೆ ಎಂದು ಈಗ ನೋಡಬೇಕು. ಇಲ್ಲಿ ಈ ತೀರ್ಮಾನ ನೀವು ಮಾಡಿಕೊಳ್ಳುವುದಕ್ಕೆ ಹೊರಟು, 11ರ ಬ್ಯಾಚ್‌ನಲ್ಲಿ ಆ ಸೋಲಿಗರು, ಎಂತೆಂಥಹವರು ಆ ಪಟ್ಟಿಯಲ್ಲಿದ್ದವರು? ನಾನು ಏಕೆ ಹೇಳುತ್ತೇನೆಂದರೆ; ಕಾನೂನು ಮೀರಿ ನಿಜಕ್ಕೂ ಇಂತಹ ಕೀಳು ಮಟ್ಟದ ತೀರ್ಮಾನಗಳಾಗಬಾರದು. ಇವತ್ತು ಇವರನ್ನೆಲ್ಲ ಅಮಾನತ್ತುಗೊಳಿಸುವುದಕ್ಕೆ ರಾಷ್ಟ್ರಪತಿಗಳಿಗೆ ಕಳುಹಿಸುವಂತಹ ನಿರ್ಧಾರ ಮಾಡಿಕೊಳ್ಳುತ್ತಿದ್ದೀರಿ. ಇದೇ ವ್ಯಕ್ತಿಗಳ ಕೈಯಲ್ಲಿ ಕಳೆದ ಏಳೆಂಟು ತಿಂಗಳಿನಲ್ಲಿ 2800 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದೀರಿ. ಇಲ್ಲಿ ಲಂಚ ಪಡೆದಿಲ್ಲವೇ? ನಿಮಗೆ ಈ 2800 ಪಟ್ಟಿ ಕಳುಹಿಸಿದ್ದಾರಲ್ಲ, ಅವರನ್ನು ಆಯ್ಕೆ ಮಾಡಿಕೊಂಡು ಒಪ್ಪಿಗೆ ಕೊಟ್ಟಿದ್ದೀರಲ್ಲ, ಇವರು ಲಂಚ ತೆಗೆದುಕೊಂಡಿಲ್ಲವೇ? ನಾನು ನಿಮ್ಮನ್ನು ಕೇಳಿದ್ದು ಏಕೆಂದರೆ; ಇವತ್ತು ಗೋನಾಳ ಭೀಮಪ್ಪ ಮತ್ತು ಶ್ರೀಮತಿ ಮಂಗಳಾ ಶ್ರೀಧರ್ ಇವರ ಮೇಲೆ ಎಫ್.ಐ.ಆರ್. ಹಾಕಿಸಿದರಲ್ಲ, ಇಲ್ಲಿ ಸುಂದರ್ ಎನ್ನುವವರು ಮಾಡಿರುವುದು ಮುಖ್ಯವಾಗಿ ದೊಡ್ಡ ಮಟ್ಟದ ಅಪರಾಧ. ಏನಾದರೂ errors ಆಗಿದ್ದರೆ, ಅವರಿಗೆ ಏಕೆ ರಕ್ಷಣೆ ಕೊಡುತ್ತೀರಿ? ಅವರು ಮೇಲ್ವರ್ಗದವರು ಎಂದೇ? ಇಲ್ಲ, ನಿಮ್ಮ ಡಿ.ಪಿ.ಎ.ಆರ್.ನಲ್ಲಿರುವ ಅಧಿಕಾರಿಗಳು ಏನಾದರೂ ನಿಮಗೆ ರಕ್ಷಣೆ ಕೊಡುವುದಕ್ಕೆ ಹೇಳಿದ್ದಾರ? ಇವರಿಬ್ಬರೂ ದಲಿತರಾಗಿದ್ದಕ್ಕೆ ಯಾರು ಕೇಳುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡರಾ? ನಾನು ಜಾತಿ ಹೆಸರಿನಲ್ಲಿ, ಹೀಯಾಳಿಸಬೇಕೆಂದು ಹೇಳುತ್ತಿಲ್ಲ. ದಯವಿಟ್ಟು ಕ್ಷಮಿಸಿಬಿಡಿ. ಆದರೆ ಇವತ್ತು ಅಧ್ಯಕ್ಷರೆ, ಈ ಸಂಸ್ಥೆಯನ್ನು ಹಾಳು ಮಾಡುವುದಕ್ಕೆ ಹೊರಟಿದ್ದೇವೆ. ಈಗ ನೀವೆ ಹೊಸದಾಗಿ ಹೊಸ ಲಿಸ್ಟ್ ಕಳುಹಿಸಿದ್ದೀರಿ. ಅದರಲ್ಲಿ ಮಾಧ್ಯಮ ಸ್ನೇಹಿತರು ಬರೆದಿದ್ದಾರೆ. ಯಾರೋ ಒಬ್ಬರು ಕಳುಹಿಸಿರುವಂತಹ ಲಿಸ್ಟ್‌ನಲ್ಲಿ ಐದು ಸಾವಿರ ದುಡ್ಡು ತೆಗೆದುಕೊಳುವುದಕ್ಕೆ ಹೋಗಿ ಲೋಕಾಯುಕ್ತದಲ್ಲಿ ಟ್ರಾಪ್ ಆಗಿದ್ದಾರೆ. ಅವರನ್ನು ನೀವು ರೆಕಮೆಂಡ್ ಮಾಡಿದ್ದೀರಿ. ಹೆಸರು ಬೇಡ. ಇನ್ನ್ಯಾರೋ ಸುಳ್ಳು caste certificate ಕೊಟ್ಟಿದ್ದಾರೆ, ಅವರನ್ನು ಮೆಂಬರ್ ಮಾಡುವುದಕ್ಕೆ ಹೊರಟಿದ್ದೀರಿ. ಈ ಸಂಸ್ಥೆಯನ್ನು ಎಲ್ಲಿಂದ ಸರಿಪಡಿಸುತ್ತೀರಿ?

ಹೇಗೆ ತೊಳೆಯುತ್ತೀರಿ? ತೊಳೆಯುತ್ತೀರಾ? ಅವರ background ನೋಡಿದರೆ, ಯಾರ್‍ಯಾರನ್ನು ಇಟ್ಟುಕೊಂಡಿದ್ದೀರಿ? ಹಾಗಾದರೆ ಇಂತಹವರನ್ನು ಕಳುಹಿಸಿದ್ದೀರಲ್ಲ. ಇದಕ್ಕೆ 2011ರ ಬ್ಯಾಚ್‌ನಲ್ಲಿ 362 ಅಭ್ಯರ್ಥಿಗಳು ಏನು ಆಯ್ಕೆಯಾಗಿದ್ದಾರೆ, ಅವರನ್ನು ಬಲಿಪಶು ತೆಗೆದುಕೊಳ್ಳುತ್ತೀರ?

ಅಧ್ಯಕ್ಷರು:– ಸುಂದರ್ deputation ಮೇಲೆ ಹೋಗಿರುವುದಾ ಅಥವಾ ಅಲ್ಲಿಯೇ recruit ಆಗಿರುವವನೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಐಎಎಸ್ ಆಫೀಸರ್, ಅಲ್ಲಿಗೆ ಸೆಕ್ರೆಟರಿಯನ್ನು ಏನು ಹಾಕುತ್ತೀರಿ, ಅವರನ್ನು ರಾಜ್ಯಪಾಲರೇ ನೇಮಕ ಮಾಡುವುದು. ಕೆಪಿಎಸ್‌ಸಿ ಒಳಗೆ ಸೆಕ್ರೆಟರಿಗೆ ಒಂದು ಪ್ರದತ್ತವಾದ ಅಧಿಕಾರವನ್ನು ಕೊಟ್ಟಿದ್ದೇವೆ. ಅಲ್ಲಿ ಪ್ರಶ್ನೆ ಪತ್ರಿಕೆ ರೆಡಿ ಮಾಡುವುದು, ಅಲ್ಲಿಂದ valuation ಮಾಡುವುದು, ಎಲ್ಲಾ ಆ ಸೆಕ್ರೆಟರಿ ಕೆಲಸ. ಇವರು ಸಂಬಂಧ ಇಲ್ಲ. ಇವತ್ತು ಯಾವ ಕೆ.ಪಿ.ಎಸ್.ಸಿ. ಯನ್ನು ಕರ್ಮಕಾಂಡ ಎಂದು ಹಾಳು ಮಾಡುವುದಕ್ಕೆ ಅದರ ಕೆಟ್ಟ ಹೆಸರು ತರುವುದಕ್ಕೆ ಹೊರಟಿದ್ದೀರಿ. ನಿಮ್ಮ ಹೋಟಾ ಕಮಿಟಿಯವರು ಏನು ರಿಪೋರ್ಟ್ ಕೊಟ್ಟರು? Para number 24 ರಲ್ಲಿ ಹೋಟಾ ಕಮಿಟಿಯವರು ಏನು ಹೇಳಿದ್ದಾರೆ? ನಿಮ್ಮ Chief Secretary ಕೂಡ ಅದರಲ್ಲಿ ಒಬ್ಬ ಮೆಂಬರ್. ಅವರು ಹೇಳುತ್ತಾರೆ, 2006 ರಲ್ಲಿ ಯಾವ ಬಾರ್‌ಕೋಡ್ ಸಿಸ್ಟಂ ತಂದಿದ್ದಾರೆ, ಯಾವುದೇ ಪ್ರಶ್ನೆ ಪತ್ರಿಕೆಗಳನ್ನು ಯಾರೂ ಪತ್ತೆ ಹಚ್ಚುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಹೋಟಾ ಕಮಿಟಿ ವರದಿಯನ್ನು ನಿಮಗೆ ಸಬ್‌ಮಿಟ್ ಮಾಡಿದ್ದಾರಲ್ಲ. ಅದನ್ನು ಇವರೇ ನೇಮಕ ಮಾಡಿಕೊಂಡಿದ್ದಾರೆ. ಅವರು ಕೆ.ಪಿ.ಎಸ್.ಸಿ. ಬಗ್ಗೆ ಸರ್ಟಿಫಿಕೇಟ್ ಕೊಡುತ್ತಾರೆ. ಆದರೆ ನಾವು ನಮ್ಮ ರಾಜಕಾರಣದಲ್ಲಿ ನಮ್ಮ ನಮ್ಮ ತೆವಲುಗಳನ್ನು ತೀರಿಸಿಕೊಳ್ಳುವುದಕ್ಕೆ ಆ ಸಂಸ್ಥೆಗೆ ಮಸಿ ಬಳಿಯುವಂತಹ ಕೆಲಸ ನಿರಂತರವಾಗಿ ನಡೆದುಕೊಂಡು ಬಂದಿದೆ. ಆ 362 ಹುಡುಗರಿಗೆ ಏಕೆ ಅನ್ಯಾಯ ಮಾಡುತ್ತೀರಿ? ಕೆ.ಎ.ಟಿ. ನಲ್ಲಿ not before me ಎಂದು ಹೇಳಿ ಒಂದು ತಿಂಗಳಿನಲ್ಲಿ ತೀರ್ಮಾನ ಕೊಡುತ್ತೇನೆಂದು ರಾಜಾರೋಷವಾಗಿ ಹೇಳಿ, ಈಗ ಅವರು withdraw

ಮಾಡಿಕೊಂಡು ಹೋದರು. ಎರಡು ಕೆ.ಎ.ಟಿ. ಬೆಂಚ್ ಇವೆ, ಅದರಲ್ಲಿ ಒಂದು ಬೆಂಚ್ ಇಲ್ಲ, ಇದೊಂದು ಇತ್ತು, ಈಗ ಅವರು back out ಆದರು. ಆ ಹುಡುಗರು ಇನ್ನು ಎಷ್ಟು ವರ್ಷ ಕೋರ್ಟ್‌ಗೆ ಅಲೆಯಬೇಕು? ಒಂದೊಂದು ರೂಪಾಯಿಗೂ ಭಿಕ್ಷೆ ಬೇಡುವಂತಹ ಪರಿಸ್ಥಿತಿಯಿರುವಂತಹ ಬಡ ಹುಡುಗರಿದ್ದಾರೆ. ಬಹುಶಃ ನನಗೆ ಬಂದ ಒಂದು ಮಾಹಿತಿ ಪ್ರಕಾರ ನಿಮ್ಮ ಮುಂದೆ ಒಬ್ಬ ಹೆಣ್ಣುಮಗಳು ಬಂದಳು. ಅವಳು ಕಾಲಿಗೆ ಚಪ್ಪಲಿ ಹಾಕಿರಲಿಲ್ಲ. ದಯವಿಟ್ಟು ನಮಗೆ ಅನ್ಯಾಯ ಮಾಡಬೇಡಿ ಎಂದು ಅವಳು ನಿಮ್ಮ ಹತ್ತಿರ ಗೋಗರೆದು ಬೇಡಿಕೊಂಡಳು. ಆ ಹೆಣ್ಣುಮಗಳು ಬಂದಿರುವಂತಹ ಡ್ರೆಸ್, ಅವಳ ಪರಿಸ್ಥಿತಿ ನೋಡಿ, ನೀವೇ ಚಪ್ಪಲಿ ತೆಗೆದುಕೊಳ್ಳಮ್ಮ, ನೀನು ಈ ರೀತಿ ಬರಬಾರದು, ಓಡಾಡಬಾರದು ಮುಂದೆ ನೀನು ಗೆಜೆಟೆಡ್ ಆಫೀಸರ್ ಆಗುವವಳು ಎಂದು ಹೇಳಿದ್ದೀರೆಂದು ನನಗೆ ಮಾಹಿತಿ ಬಂದಿದೆ. ಕಾನೂನು ಮಂತ್ರಿಗಳೇ ಆ ಹೆಣ್ಣುಮಗಳಿಗೆ ಚಪ್ಪಲಿ ತೆಗೆದುಕೊಳ್ಳುವದಕ್ಕೆ ದುಡ್ಡು ಕೊಟ್ಟು, ಅವರ ಹೃದಯ ವೈಶಾಲ್ಯತೆಯನ್ನು ತೋರಿಸಿದರು. ಆದರೆ ಕಾನೂನು ಮಂತ್ರಿಗಳು, ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಬೇಡ ನಾವು ತಪ್ಪು ಮಾಡುತ್ತಿದ್ದೇವೆಂದು ಹೇಳಿ ಸರಿಯಾಗಿ ಗೈಡ್ ಮಾಡಲಿಲ್ಲ. ಅಲ್ಲಿ ಎಂತೆಂಥ ಹುಡುಗರು ಆಯ್ಕೆಯಾಗಿದ್ದಾರೆ, ಅವರ ಬಗ್ಗೆ ನಾನು ಸರ್ಟಿಫೈ ಮಾಡಬೇಕೆಂದು ಅಲ್ಲ. ನೀವು ಶ್ರೀಮತಿ ಮಂಗಳಾ ಶ್ರೀಧರ್ ಅನ್ನು ತಕ್ಷಣ ಕಿತ್ತು ಹಾಕುತ್ತೀರಿ. ಅಲ್ಲಿ ನೀವು ಮಂಗಳ ಶ್ರೀಧರ್ ಎನ್ನುವವರನ್ನು ತಕ್ಷಣ ಕಿತ್ತು ಹಾಕುತ್ತೀರಿ. ಆ ಕಮಿಟಿಯಲ್ಲಿ marks ಹಾಕಬೇಕಾದರೆ ನಾಲ್ಕು ಜನ ಮೆಂಬರ್ಸ್ ಇದ್ದಾರೆ. ಇನ್ನು ಆ ಮೂರು ಜನರು ಇಲ್ಲೆ ಇರುವುದಕ್ಕೆ ಏಕೆ ಬಿಟ್ಟುಕೊಂಡಿದ್ದೀರಿ. ಅಲ್ಲಿ ಈ ಹೆಣ್ಣು ಮಗಳನ್ನು ಕಿತ್ತು ಹಾಕಿ, ಆ ಮೂರು ಜನರಿಗೆ ಏಕೆ ರಕ್ಷಣೆ ಕೊಟ್ಟಿದ್ದೀರಿ. ಅಲ್ಲಿ ಏನೇನು ವ್ಯವಹಾರಗಳು ನಡೆದಿವೆ? ಆ ಕುಟುಂಬದಲ್ಲಿ ಒಬ್ಬ handicap ಹುಡುಗ ಆಗಿದ್ದಾನೆ, ಮಾನಸಿಕವಾಗಿ ಅಸ್ವಸ್ಥತೆಗೆ ಒಳಗಾಗಿ ಆಸ್ಪತ್ರೆಗೆ ಸೇರಿದ, ಮಾನ್ಯ ಅಧ್ಯಕ್ಷರೆ, ಈಗ ನಿಮ್ಮ ಹತ್ತಿರ ಹೇಳುವುದೇನೆಂದರೆ, ನೀವು ಯಾರಿಗೆ ರಕ್ಷಣೆ ಕೊಡುವುದಕ್ಕೋಸ್ಕರವಾಗಿ 362 ಅಭ್ಯರ್ಥಿಗಳ ಕುಟುಂಬಗಳನ್ನು ಬೀದಿಗೆ ತಂದು ನಿಲ್ಲಿಸಿದ್ದು, ಅದರಲ್ಲಿ ಒಬ್ಬ ಹುಡುಗ ಏನು

ಹೇಳುತ್ತಾನೆಂದರೆ, ನಮ್ಮಪ್ಪ ಕ್ಯಾನ್ಸರ್ ಪೇಶೆಂಟ್, ನನ್ನ ತಾಯಿಗೆ spinal cord ಮುರಿದುಹೋಗಿದೆ, ಅವರು ಹಾಸಿಗೆ ಮೇಲೆ ಮಲಗಿದ್ದಾರೆ. ನಾನು ಇನ್ನು ಎಲ್ಲಿ ಓದಲಿ ಸಾರ್, ನಾನು ನಮ್ಮಪ್ಪನ ಕ್ಯಾನ್ಸರಿಗೆ ಚಿಕಿತ್ಸೆ ಕೊಡಿಸಲೋ, ನನ್ನ ತಾಯಿಯನ್ನು ನೋಡಿಕೊಳ್ಳಲೋ, ಎಂದು ಕಣ್ಣೀರು ಹಾಕುತ್ತಾನೆ. ಒಬ್ಬೊಬ್ಬರದ್ದು ಒಂದೊಂದು ಪರಿಸ್ಥಿತಿಯಾಗಿದೆ.

ಶ್ರೀ ಸಾ.ರಾ. ಮಹೇಶ್:– ತಾವು age bar ಆಗಿದೆಯೆಂದು ಹೇಳಿದಿರಲ್ಲಾ.. ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇವತ್ತು ಯಾರೋ ಮಾಡಿದ ತಪ್ಪಿಗೆ ಯಾವುದೋ ಒಂದು ಮೂಗರ್ಜಿಯನ್ನು ಇಟ್ಟುಕೊಂಡು ಇಂಥ ನಿರ್ಣಯವನ್ನು ಮಾಡಿಕೊಂಡಿರಲ್ಲಾ, ಇದೇ ಕಮಿಟಿ ಹಿಂದೆ ಎರಡು ಬ್ಯಾಚ್ ಅನ್ನು ಆಯ್ಕೆ ಮಾಡಿದರು, ಹಾಗಾದರೆ ಅವತ್ತು ಭ್ರಷ್ಟಾಚಾರ ನಡೆದಿರಲಿಲ್ಲವೇ? ಪಂಜಾಬ್‌ನ ಪಿ.ಎಸ್.ಸಿ. ಅಧ್ಯಕ್ಷರ ಮನೆಯನ್ನು ರೈಡ್ ಮಾಡಿದಾಗ, ಅವರ ಮನೆ ಒಳಗೆ ಕೋಟ್ಯಾಂತರ ರೂಪಾಯಿ ಸಿಕ್ಕಿದೆ. ಆ ರೀತಿ ಕೋಟ್ಯಾಂತರ ರೂಪಾಯಿ ದೊರೆತಂಥ ಸನ್ನಿವೇಶದಲ್ಲೂ ಅವತ್ತಿನ ದಿವಸ ಸರ್ಕಾರವೊ ಅಥವಾ ಸುಪ್ರೀಂ ಕೋರ್ಟ್ ಇರಬೇಕೆನೋ entire list ಅನ್ನು quash ಮಾಡಬಾರದೆಂದು ಆದೇಶ ಮಾಡಿದರು. ಅದು ಕೋಟ್ಯಾಂತರ ರೂಪಾಯಿಗಳು ಸಿಕ್ಕಂಥ ಪ್ರಕರಣದಲ್ಲಿ ಮಾಡಿತು. ಇಲ್ಲಿ ಹಣ ದೊರಕಿಲ್ಲ, ಲಂಚ ಸಾಬೀತಾಗಿಲ್ಲ, ಇವತ್ತು ಇಂಥ ಪರಿಸ್ಥಿತಿಯಲ್ಲಿ ಒಬ್ಬ ಅಭ್ಯರ್ಥಿಯ ದೂರಿನ ಮೇಲೆ ತೀರ್ಮಾನ ಮಾಡಿದ್ದಾರೆ. ಆ ಅಭ್ಯರ್ಥಿ ತಂದೆ ಕೊಟ್ಟಿರುವಂಥದ್ದನ್ನು ತೆಗೆದುಕೊಳ್ಳಿ ಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಕುಮಾರಸ್ವಾಮಿಯವರು ಕಾಗದ ಪತ್ರಗಳ ಕಟ್ಟನ್ನು ಮೇಜಿನ ಮೇಲಿಟ್ಟರು)

ಅಧ್ಯಕ್ಷರು:– ಈ ರೀತಿ ಇಡಬಾರದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಏನಾದರೂ ತಪ್ಪು ಮಾಡಿದ್ದರೆ ದಯವಿಟ್ಟು ಕ್ಷಮಿಸಬೇಕು. ನನ್ನ ನೋವು ಏಕೆಂದರೆ, ಈ

ಅಭ್ಯರ್ಥಿ ತಂದೆ ಏನು ದೂರು ಕೊಟ್ಟಿದ್ದಾರೆ, ಇವರು ರಾಮನಗರದಲ್ಲಿ Assistant Commissioner ಇದ್ದರು. ಇವರು ನಿವೃತ್ತಿ ಹೊಂದುವುದಕ್ಕೆ ಒಂದು ವಾರ, ಹದಿನೈದು ದಿವಸಗಳಿದ್ದಾಗ ಹಲವಾರು ರೈತರ ಕುಟುಂಬವನ್ನು ಬೀದಿಗೆ ನಿಲ್ಲಿಸಿ, ಅವರಿಗೆ notice ಕೊಡದೇ, ಬೇಕು ಬೇಕಾದ ಹಾಗೆ ಹಣ ತೆಗೆದುಕೊಂಡು ತೀರ್ಮಾನ ಕೊಟ್ಟು ಹೋಗಿರುವಂಥ ಪ್ರಕರಣಗಳಿವು. ತಾವು ಅಂಥ ಅಭ್ಯರ್ಥಿ ಮಗಳಿಗೆ ರಕ್ಷಣೆ ಕೊಡಬೇಕೇ? ಅವರು ಬಡವರನ್ನು ನೋಡುವವರೇ? ಅಲ್ಲಿ ತಂದೆ ಇಲ್ಲದೇ ಇರುವಂಥ ತಬ್ಬಲಿ ಹೆಣ್ಣುಮಗಳು, ಇವಳಿಗೆ 150 ಅಂಕಗಳನ್ನು ಕೊಟ್ಟಿರುವುದೇ ಇಲ್ಲಿ ತಪ್ಪೇ ಎಂದು ನಾನು ಕೇಳಬಯಸುತ್ತೇನೆ. ಈ ಪ್ರಕರಣದ ಬಗ್ಗೆ ತಮಗೆ ಕೊಡುತ್ತೇನೆ ನೋಡಿ, ಇವರು ಕೊಟ್ಟಂಥ ವರದಿಯಾಗಿದೆ. ನಾನು ಬಿಡದಿ ಹತ್ತಿರ ಕೆರೆ, ಸ್ಮಶಾನ ಎಲ್ಲವನ್ನೂ ಆವರಿಸಿಕೊಂಡು ಬಿಟ್ಟಿದ್ದೇನಂತೆ, ಆ ಭೂಮಿ ಮೇಲೆ ಆರು ಬಾರಿ ವಿಚಾರಣೆ ಆಯಿತು. ಈಗ ಮತ್ತೆ ಈ ಸರ್ಕಾರದವರು ಶುರು ಮಾಡಿಕೊಂಡಿದ್ದಾರೆ. ಇಲ್ಲಿ ಕಂದಾಯ ಕಾರ್ಯದರ್ಶಿಯವರು ಕುಳಿತಿದ್ದಾರೆ.

ಅಧ್ಯಕ್ಷರು:– ಇದು ಏನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇದು ಹಲವಾರು ರೈತರು ಭೂಮಿಯ ತಕರಾರುಗಳ ಬಗ್ಗೆ ಅರ್ಜಿಗಳನ್ನು ಏನು ಹಾಕಿಕೊಂಡಿದ್ದಾರೆ. ಅದಕ್ಕೆ ವಾದಿ, ಪ್ರತಿವಾದಿಗಳಿಗೆ notice ಕೊಟ್ಟಿಲ್ಲ.

ಅಧ್ಯಕ್ಷರು:– ಅವರು ಏತಕ್ಕೆ ಅರ್ಜಿಯನ್ನು ಹಾಕಿದ್ದರು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಭೂಮಿಯ civil dispute ಗಳ ಬಗ್ಗೆ ವಾದ, ಪ್ರತಿವಾದವಿಲ್ಲ. ಅವರು ಕಚೇರಿಗೂ ಬರಲಿಲ್ಲ, ಅಲ್ಲಿ ಎಲ್ಲೋ ಕುಳಿತುಕೊಂಡು ಯಾರ್‍ಯಾರು ಹಣವನ್ನು ಕೊಟ್ಟರು, ಅವರ ಪರವಾಗಿ ಮಾಡಿದರು. ಇದರಲ್ಲಿ ವಾದವೂ ಇಲ್ಲ, ಪ್ರತಿವಾದವೂ ಇಲ್ಲ. ಜಿಲ್ಲಾಧಿಕಾರಿಯವರು ಅಯ್ಯೋ ನನ್ನ ಕರ್ಮ, ಮತ್ತೆ ಇದೆಲ್ಲಾ ನನ್ನ ಮುಂದೆ ಬರುತ್ತಿವೆ. ಇದರ ತೀರ್ಮಾನಕ್ಕೆ ನಾನು

ಸಮಯವನ್ನು ಎಲ್ಲಿ ಮೀಸಲಿಡಲೆಂದು ಹೇಳುತ್ತಾರೆ. ನಾನು ಒಬ್ಬ ಮಾಜಿ ಮುಖ್ಯಮಂತ್ರಿಯೆಂದು ಬೇಡ, ನಾನು ಒಬ್ಬ ಶಾಸಕನಾಗಿದ್ದು, ನನ್ನನ್ನೆ ಆ ಹೆಣ್ಣು ಮಗಳು ನಡೆಸಿಕೊಂಡಂಥ ರೀತಿಯನ್ನು ನೋಡಿದ್ದೀರಿ. ತಾವು ಇಂಥ ಹೆಣ್ಣು ಮಗಳಿಗೆ Assistant Commissioner ಹುದ್ದೆ ಅನ್ನು ಕೊಟ್ಟು, ಈ ರಾಜ್ಯದ ಬಡ ರೈತರನ್ನು ಉಳಿಸುತ್ತೀರಾ? ಇಂಥವರಿಗೋಸ್ಕರವಾಗಿ 362 ಜನರ ಬಾಳಿನಲ್ಲಿ ಚೆಲ್ಲಾಟವಾಡಿದ್ದೀರಲ್ಲಾ, ಇವರನ್ನು ಉಳಿಸುತ್ತಿರಾ? ಈಗಲೂ ಕಾಲ ಮಿಂಚಿಲ್ಲ.

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ, ತಮಗೆ ಇನ್ನು ಎಷ್ಟು ಸಮಯ ಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮುಗಿಸುತ್ತೇನೆ. ನಾನು ಮಾತನಾಡುವಾಗ ತಾವು ಇನ್ನೂ ಬಂದಿರಲಿಲ್ಲ. ಆಗ ಬೇರೆ ಬೇರೆ ವಿಷಯಗಳ ಬಗ್ಗೆ ಬೆಳಕು ಚೆಲ್ಲಬೇಕಾಗಿತ್ತೆಂದು ಹೇಳಿದರು. ನಾನು ಇವತ್ತು ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆಯೆಂಬ ಬಗ್ಗೆ ಭಾಷಣದ ಪ್ರಾರಂಭದಲ್ಲಿ ಅರ್ಧ–ಮುಕ್ಕಾಲು ಗಂಟೆ ಆ ವಿಷಯದ ಮೇಲೆಯೇ ಮಾತನಾಡಿದ್ದೇನೆ. ನಾನು ಮೊದಲು ರೈತರ ಸಮಸ್ಯೆ ಬಗ್ಗೆ ಮಾತನಾಡಿದೆ. ನಾನು ಇನ್ನು ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ಏನೇನು ಆಗಿದೆಯೆಂಬ ಬಗ್ಗೆ ಚರ್ಚೆ ಮಾಡಬೇಕೆಂದರೆ, ಆ ಮಾಹಿತಿಯನ್ನು ನಾನು ತಂದಿದ್ದೇನೆ. ಆ ಬಗ್ಗೆಯೂ ಚರ್ಚೆ ಮಾಡಬೇಕೆಂದರೆ ಚರ್ಚೆ ಮಾಡುತ್ತೇನೆ, ನಾನು ಅದರ ಮಾಹಿತಿಯನ್ನು ಇಟ್ಟುಕೊಂಡಿದ್ದೇನೆ. ತಮ್ಮ ಗೃಹ ನಿರ್ಮಾಣ ಸಹಕಾರ ಸಂಘಗಳು, ಬೆಂಗಳೂರು ನಗರದಲ್ಲಿ ನಡೆದಿರುವಂಥ ಅವ್ಯವಹಾರಗಳು, ಅದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಇನ್ನು ಮೂರು ಗಂಟೆಗಳ ಕಾಲಾವಕಾಶ ಬೇಕು. ನನಗೆ ಮತ್ತೆ ನಾಳೆ 3 ಗಂಟೆಗಳ ಅವಕಾಶ ಕೊಡುತ್ತೇವೆಂದರೆ ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ. ಪರಿಸ್ಥಿತಿಗಳ ಬಗ್ಗೆ ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮಾತನಾಡಲು ನಾಳೆ 3 ಗಂಟೆಗಳ ಕಾಲಾವಕಾಶ ಕೊಟ್ಟರೆ, ಈ ರಾಜ್ಯದಲ್ಲಿ ಏನೇನು ನಡೆದಿದೆಯೆನ್ನುವುದನ್ನು ಹೇಳುತ್ತೇನೆ. ಇವತ್ತು ರೈತನಿಗೆ ಹಣವನ್ನು

ಕೊಡುವುದಕ್ಕೆ ಹಿಂದು–ಮುಂದು ನೋಡುತ್ತೀರಿ, ಅದು ದಾಕ್ಷಿಣ್ಯಕ್ಕೆ ಕೊಡುತ್ತಿದ್ದೇವೆನ್ನುವಂತೆ ನೋಡುತ್ತೀರಿ. ತಾವು ರೈತರಿಗೆ ಹಣವನ್ನು ಕೊಡುವುದಕ್ಕೆ ಸರ್ಕಾರ ಕಷ್ಟಪಟ್ಟು ಏನು ಕೊಡಬೇಕಾಗಿಲ್ಲ. ಬೆಂಗಳೂರು ನಗರದಲ್ಲಿ ಸರ್ಕಾರಿ ಭೂಮಿಯ ವಿಷಯದಲ್ಲಿ ಚೆಲ್ಲಾಟವಾಡಿರುವಂಥ ಕೆಲವು ಅಕ್ರಮಗಳು ಏನಿವೆ, ಅದನ್ನು ತಾವು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡರೆ, ಆ ರೈತರಿಗೆ ನೀವು ಏನು ಬೇಕಾದರೂ ಕೊಡಬಹುದು. ಈ ರಾಜ್ಯದ ಮೂಲ ಸೌಕರ್ಯಕ್ಕೆ ಏನು ಬೇಕಾದರೂ ಕೊಡಬಹುದು. ಆ ಬಗ್ಗೆ ಬೇಕಾದಷ್ಟು ಪ್ರಕರಣಗಳು ಇವೆ, ಅದನ್ನು ತಮ್ಮ ಮುಂದೆ ದಾಖಲೆಗಳ ಸಮೇತ ಇಡುತ್ತೇನೆ. ನನಗೆ ಮುಖವಾಡ ತೋರಿಸಿದ್ದಾರಲ್ಲಾ, ಪುಂಗಿ ಊದಿಸಿಕೊಂಡು, ನಾನು ಪುಂಗಿ ಆಡಿಸುವುದಕ್ಕೆ ಬಿಟ್ಟರೆ ತಮಗೆ ಎಷ್ಟು ದಾಖಲಾತಿ ಬೇಕು ಹೇಳಿ, ನಾನು ತಂದು ಕೊಡುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಆಸೀನರಾದರು)

ನಾನು ದಾಖಲಾತಿ ಇಲ್ಲದೇ ಯಾವುದೇ ವಿಷಯವನ್ನು ಚರ್ಚೆ ಮಾಡುವುದಿಲ್ಲ. ನಾನು ಮೊದಲಿನಿಂದಲೂ ಆ ಹವ್ಯಾಸವನ್ನು ಬೆಳೆಸಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಈಗ ಬೇಕಾದರೆ ಬೇರೆಯವರಿಗೆ ಮಾತನಾಡಲು ಅವಕಾಶ ಕೊಡಿ. ನಾನು ಈಗ ಬಹಳ ಸುದೀರ್ಘವಾಗಿ ಮಾತನಾಡಿದ್ದೇನೆ. ನಾನು ಮಾನ್ಯ ಕಾನೂನು ಸಚಿವರಿಗೆ, ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರಿಗೆ ಮತ್ತು ಮಾನ್ಯ ಮಹದೇವಪ್ಪನವರಿಗೆ ಕೈಮುಗಿದು ಹೇಳುತ್ತೇನೆ. ತಾವು ಮಾಡಿರುವ ತೀರ್ಮಾನದಲ್ಲಿ ತಪ್ಪು ಮಾಡಿಕೊಂಡಿದ್ದೀರಿ. ತಾವು ಇನ್ನು ಉಳಿದಂಥವರನ್ನು ಅಮಾನತ್ತುಗೊಳಿಸುವುದಕ್ಕೆ ಘನವೆತ್ತ ರಾಷ್ಟ್ರಪತಿಯವರಿಗೆ ಕಳುಹಿಸುವುದಕ್ಕೆ ಹೊರಟಿದ್ದೀರಿ. ಕಳೆದ ಆರೇಳು ತಿಂಗಳುಗಳಲ್ಲಿ ಅಂಥವರ ಕೈಯಲ್ಲಿ 2,800 ಜನರ ನೇಮಕಾತಿ ಮಾಡಿಸಿದ್ದೀರಿ. ಅಲ್ಲಿ ಭ್ರಷ್ಟಾಚಾರ ಆಗಲಿಲ್ಲವೇ? ಇಲ್ಲಿ ಈ 362 ಜನ ಹುಡುಗರು ಪಾಪಿಗಳೇ? ಈ ಹುಡುಗರೇ ಪಾಪಿಗಳಾ? ಇವರಲ್ಲಿ ಎಂತೆಂಥ ಬಡವರಿದ್ದಾರೆಂಬ ಹಿನ್ನೆಲೆ ತರಿಸಿಕೊಳ್ಳಿ

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಕುಮಾರಸ್ವಾಮಿಯವರೆ, ನಾನು ಒಂದು ಸೆಕೆಂಡ್ ಮಾತನಾಡುತ್ತೇನೆ. ಈಗ ಮಾನ್ಯ ಕುಮಾರಸ್ವಾಮಿಯವರು KPSC ಬಗ್ಗೆ ಬಹಳ ಸುದೀರ್ಘವಾಗಿ ಮಾತನಾಡುತ್ತಿದ್ದಾರೆ. ನಮಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ನಮಗೆ ಇಲ್ಲಿ ಒಂದು ಸಂಶಯ ಎದ್ದು ಕಾಣುವುದಕ್ಕೆ ಪ್ರಾರಂಭವಾಗಿದೆ. ಈಗ KAS, Class-I ಅಧಿಕಾರಿಗಳನ್ನು ಭರ್ತಿ ಮಾಡುವಂಥ ಅಧಿಕಾರ KPSC ಯಲ್ಲಿ ಇದೆಯಲ್ಲಾ, ಈಗ ಇಲ್ಲಿ ಗೃಹ ಸಚಿವರು ಇದ್ದಾರೆ. ಮಾನ್ಯ ಗೃಹ ಸಚಿವರೆ, ತಾವು ಈ ವಿಷಯವಾಗಿ ಸ್ವಲ್ಪ ಗಮನ ಕೊಡಿ. ಈಗ ಅಲ್ಲಿ ಸಬ್ ಇನ್ಸ್ಪೆಕ್ಟರ್‌ಗಳನ್ನು ಭರ್ತಿ ಮಾಡುವಂಥ ಪ್ರಕ್ರಿಯೆ ಪ್ರಾರಂಭವಾಗಿದೆ. ಅವರಿಗೆ ಈ viva ದೊಳಗೆ 10 ಅಂಕಗಳನ್ನು ಕೊಡುತ್ತಾರೆ, ಅಂದರೆ ಸಂದರ್ಶನಕ್ಕೆ ಕರೆದಾಗ ಅಲ್ಲಿ 150 ಅಂಕಗಳನ್ನು ಕೊಡುತ್ತಾರೆ. ಅದನ್ನು ವಿಧಾನಮಂಡಲದೊಳಗೆ ತಂದು ಕಾನೂನು ತಿದ್ದುಪಡಿ ಮಾಡಿ, ಅವರಿಗೆ 5 ಅಥವಾ 10 ಅಂಕಗಳನ್ನು ಕೊಡುವಂಥ ಅಧಿಕಾರಕ್ಕೆ, ನಾವು ಅರ್ಹರಿದ್ದಿವೊ, ಇಲ್ಲವೊ ಎಂಬ ಬಗ್ಗೆ ಸ್ವಲ್ಪ ಚಿಂತನೆಯಾಗಬೇಕು.

ಉಪಾಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ತಮ್ಮ ಭಾಷಣ ಮುಗಿಯಿತಲ್ಲವೇ? ತಾವು ಬಹಳ ವಿವರವಾಗಿ ಮಾತನಾಡಬೇಕಾದರೆ ಬಜೆಟ್ ಮೇಲೆ ಮಾತನಾಡುವಾಗ ಬೇರೆ ಬೇರೆ issues ಬಗ್ಗೆ ಆಗ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಅವರು ನಾಳೆ ಎರಡು ಗಂಟೆಗಳ ಕಾಲ ಮಾತನಾಡಲಿ, ಅವರಿಗೆ ಅವಕಾಶ ಕೊಡಿ, ನಮಗೆ ಏನು ಅವಕಾಶ ಬೇಡ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ನನಗೆ ಏನೆಂದರೆ, ನಿನ್ನೆ ಬಿ.ಜೆ.ಪಿ. ಸದಸ್ಯರು ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ಬಸ್ ದರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರು. ಅದು ಸಹ ಬಹಳ ಸೂಕ್ಷ್ಮವಾದ ವಿಚಾರವಾಗಿದೆ. ಅದಕ್ಕೆ ನಾಳೆ ಒಂದರೆರಡು ಗಂಟೆಗಲ ಅವಕಾಶ ಕೊಟ್ಟರೆ ಎಲ್ಲವನ್ನೂ ಮುಗಿಸುತ್ತೇನೆ.

ಉಪಾಧ್ಯಕ್ಷರು:- ಆಯಿತು, ನಾಳೆ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಮುಖವಾಗಿ ಈ ವಿಷಯವನ್ನು ತಮ್ಮ ಮುಂದೆ ಏಕೆ ಇಟ್ಟೆಯೆಂದರೆ, ಈ 362 ಜನರಿಗೆ ಮಾತ್ರ ಏಕೆ ಇಂಥ ಶಿಕ್ಷೆ? ಕೆಲವರು ನನ್ನನ್ನು ರೇಗಿಸುತ್ತಾರೆ. ಒಂದು ಸಾರಿ ಯಾರೋ ಒಬ್ಬ advocate ಹೇಳುತ್ತಿದ್ದರು. ಒಂದು ಸಾರಿ ಕೋರ್ಟ್‌ನಲ್ಲಿ ನ್ಯಾಯಾಧೀಶರ ಮುಂದೆ ವಾದ ಮಾಡಬೇಕಾದರೆ, ತಮಾಷೆಯಾಗಿ ಹೇಳುತ್ತಿದ್ದರು. ಬುದ್ಧಿ, your Honour ಇವನು ಪಾಪಿ, ಏನೋ ಒಂದು ಸಣ್ಣ ತಪ್ಪು ಮಾಡಿಕೊಂಡಿದ್ದಾನೆ. ಆ ಗಂಗಾ ಮಾತೆ ಯಾರಾದರೂ ನೀರಿನಲ್ಲಿ ಮುಳುಗಿದರೆ, ಮೂರು ಬಾರಿ ಜೀವ ಏನಾದರೂ ಉಳಿಸಿಕೊಂಡರೆ ಉಳಿಸಿಕೊಳ್ಳಲಿ, ಎಂದು ಮೇಲೆಳುತ್ತಾಳೆ. ಆ ರೀತಿ ಈ ಪಾಪಿಗೆ ಏನಾದರೂ ಒಂದು ಮೋಕ್ಷ ಕೊಟ್ಟು ಬಿಡಿ ಎಂದು ಯಾರೋ ಒಬ್ಬ ವಕೀಲರು ವಾದ ಮಾಡುತ್ತಿದ್ದರಂತೆ, ಹಾಗೆ ಇವರು ಏನು ಪಾಪ ಮಾಡಿದ್ದರು? ಇದರಲ್ಲಿ ಆಗಿರುವಂಥ error, ಮತ್ತೊಂದು, ಮಗದೊಂದನ್ನು ನಾನು ಹೇಳಿದೆ. ಸಿ.ಓ.ಡಿ. ರಿಪೋರ್ಟ್‌ನಲ್ಲಿ ಏನೇನು ಮಾಡಿಕೊಂಡಿದ್ದೀರಿ ಎಂದು ನಾನು ಹೇಳಿದೆ. ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆ ಹಾಕಿಕೊಳ್ಳಿ. ಅವರು ಕೊಟ್ಟಿರುವ ವರದಿಯ ಆಧಾರದ ಮೇಲೆ ತೀರ್ಮಾನ ಮಾಡುವಂಥ ವಿಷಯವೇ ಇದು. ಇದು ನೀವು ತೆಗೆದುಕೊಂಡಿರುವಂಥ ನಿರ್ಧಾರ. ಅದರಲ್ಲಿ ನನಗೆ ಯಾರೂ ನೆಂಟರಿಷ್ಟರು ಇಲ್ಲ. ನಾನು ಯಾರದ್ದೋ ಪರವಾಗಿ ವಕೀಲಿ ಮಾಡಬೇಕು ಎಂದು ಇಲ್ಲ. ಇಷ್ಟು ವರ್ಷ ಯಾರಿಗೂ ಆಗದೇ ಇರುವಂಥ ಶಿಕ್ಷೆ ಈ 362 ಜನರಿಗೆ ಮಾತ್ರ ಏಕೆ? ಈ 362 ಜನರಿಗೆ ಏಕೆ ಅನ್ಯಾಯ ಮಾಡುತ್ತೀರಿ? ಅದರಲ್ಲಿ ಒಬ್ಬ ಅಂಧ ತಹಶೀಲ್ದಾರ್‌ಆಗಿ ಆಯ್ಕೆಯಾಗಿದ್ದಾನೆ. ಅಂಥವನಿಗೆ ನೀವು ಒಂದು ಬಾಳು ಕೊಡತಕ್ಕಂಥವರಾಗಬೇಕು, ಅವನಿಗೆ ಬೆಳಕು ಕೊಡತಕ್ಕಂಥ ಕಣ್ಣಾಗಬೇಕಾದವರು ನೀವು. ಭಗವಂತ ಅವನ ಕಣ್ಣನ್ನು ಕಿತ್ತುಕೊಂಡಿದ್ದು ಅವನು ಕತ್ತಲೆಯಲ್ಲಿದ್ದಾನೆ. ಈಗ ನೀವು ಅವನ ಜೀವನವನ್ನು ಕಿತ್ತುಕೊಂಡು ಅವನನ್ನೂ ಸರ್ವಕಾಲಕ್ಕೂ ಕತ್ತಲಲ್ಲಿ ಇಡುವಂಥಾದ್ದನ್ನು ಮಾಡಬೇಡಿ.

ದಯವಿಟ್ಟು ಒಂದು ತೀರ್ಮಾನ ಮಾಡಿ. ನೀವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ. ನಾನು ನಾಳೆ ಉಳಿದ ಒಂದೆರಡು ವಿಚಾರಗಳನ್ನು ಮಾತನಾಡುತ್ತೇನೆ. ಈಗ ನೀವು ಬೇರೆಯವರಿಗೆ ಅವಕಾಶ ಕೊಡಬಹುದು. ಇಲ್ಲಿಯವರೆಗೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳು.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಲಾ ಮಿನಿಸ್ಟರ್‌ರವರು ಈಗ ಇಲ್ಲಿದ್ದಾರೆ. ದಯಮಾಡಿ ಒಂದು ಅಂಶವನ್ನು ಗಮನಕ್ಕೆ ತರಲು ಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಕೆರಗೋಡು ಎನ್ನುವ ಗ್ರಾಮದ ಪರಿಶಿಷ್ಟ ಜಾತಿಯ ಹುಡುಗನೊಬ್ಬ first rank ಬಂದಿದ್ದಾನೆ. ಅವನ ತಾಯಿ ಕೂಲಿ ಮಾಡುತ್ತಿದ್ದಾಳೆ. ಅಂಥವಳ ಮಗ ಇವತ್ತು first rank ಬಂದಿದ್ದು, ಅವನು Assistant Commissioner ಆಗಿ selection ಆಗಿದ್ದಾನೆ. ಅವನಿಗೆ ಯಾರ recommendation ಇಲ್ಲ. ಅವನಿಗೆ 50 marks ಕೊಟ್ಟರೂ selection ಆಗುತ್ತಾನೆ, ಅವನಿಗೆ 100 marks ಕೊಡಬೇಕಾಗಿಲ್ಲ. ಕೂಲಿ ಮಾಡುವ ಒಬ್ಬ ಹೆಣ್ಣುಮಗಳ ಮಗನಾದ ಅವನು ಕಷ್ಟಪಟ್ಟು 1,200 ನಂಬರ್ ತೆಗೆದಿದ್ದಾನೆ. ಆ ಹುಡುಗನೇನು ದುಡ್ಡು ಕೊಟ್ಟಿದ್ದಾನಾ? ಕೂಲಿ ಮಾಡುವ ಆ ಹೆಣ್ಣುಮಗಳು ದುಡ್ಡು ಕೊಟ್ಟಿದ್ದಾಳಾ? ನೀವು ಇವುಗಳನ್ನೆಲ್ಲ ಪರಿಶೀಲನೆ ಮಾಡಬೇಕು. ಜಯಚಂದ್ರರವರೇ ನಿಮ್ಮ ಬಳಿ ಎರಡು ಖಾತೆ ಇದೆ, ಒಂದು ದೇವರದ್ದು, ಇನ್ನೊಂದು ಕಾನೂನು ಇಲಾಖೆ. ಏನಾದರೂ ಹೆಚ್ಚು ಕಡಿಮೆ ಆದರೆ ದೇವರು ನಿಮಗೆ ಶಿಕ್ಷೆ ಕೊಡುತ್ತಾನೆ. ಹಾಗೆ ಆಗಬಾರದು ಎಂದು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನಷ್ಟೇ. ಆದ್ದರಿಂದ, ದಯಮಾಡಿ ನೀವು ಇಂಥವುಗಳನ್ನೆಲ್ಲ ಪರಿಶೀಲನೆ ಮಾಡಬೇಕು. ಸುಮ್ಮನೆ ಯಾರೋ ಹೇಳುತ್ತಾರೆ ಎಂದು ನೀವು opinion ಕೊಡುವುದಕ್ಕೆ ಹೋಗಬಾರದು. ದಯಮಾಡಿ ಅದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಮನವಿ ಮಾಡುತ್ತೇನೆ.

ಶ್ರೀ ಎಂ.ಕೆ. ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೆ, ನಿಯಮ 69ರಡಿಯಲ್ಲಿ ಚರ್ಚೆ ಮಾಡಲು ನಾಲ್ಕೈದು ದಿನಗಳಿಂದ ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:– ನಿಮಗೆ allow ಮಾಡುತ್ತೇನೆ, ಸ್ವಲ್ಪ ಇರಿ. ನಿಯಮ 69ರ ಮೇರೆಗೆ ಎರಡು ವಿಷಯಗಳಿವೆ. ಒಂದು ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ, ಇನ್ನೊಂದು ರಾಜ್ಯದ ಪೌರ ಕಾರ್ಮಿಕರ ದುಸ್ಥಿತಿಯ ಬಗ್ಗೆ ಇದೆ. ಏಳು ಗಂಟೆಯೊಳಗೆ ಚರ್ಚೆ ಮುಗಿಯಬೇಕು. ಹಾಗಾಗಿ, ಮೊದಲಿಗೆ ಒತ್ತುವರಿಯದನ್ನು ತೆಗೆದುಕೊಳ್ಳೋಣ. ಮಾತನಾಡುವವರು ಹತ್ತತ್ತು ನಿಮಿಷದಲ್ಲಿ ಮುಗಿಸಬೇಕು. ಬಹಳ ಹೊತ್ತು ಆಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಹಾಗೆಯೇ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂಥಾದ್ದಕ್ಕೆ ಉತ್ತರ ಕೊಡಿಸಿಲ್ಲ. ಲೋಕೋಪಯೋಗಿ ಮಂತ್ರಿಗಳಿದ್ದಾರೆ, ಅವರ ಕಡೆಯಿಂದ ಉತ್ತರ ಕೊಡಿಸಬೇಕು. ಅದು ಐದು ನಿಮಿಷದ ಕೆಲಸ. ಅದಕ್ಕೆ ನಾಲ್ಕು ದಿವಸಗಳಿಂದ ಕಾಯುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ಮುಖ್ಯವಾದಂಥಾದ್ದು ಎಂದರೆ ಇವತ್ತು ಬೆಳಗ್ಗೆ ನಿಲುವಳಿ ಸೂಚನೆ ಪ್ರಕಾರ ಬಿ.ಬಿ.ಎಂ.ಪಿ. ಕಡತಗಳಿಗೆ ಸಂಬಂಧಿಸಿದಂತೆ ಚರ್ಚೆಯಾಯಿತಲ್ಲ, ಅದನ್ನು ಬೇರೆ ರೀತಿಯಲ್ಲಿ convert ಮಾಡಿ ಚರ್ಚೆಗೆ ಕೊಡುತ್ತೇವೆ ಎಂದು ಸ್ಪೀಕರ್‌ರವರು ಹೇಳಿದ್ದಾರೆ, ಅದು ನಾಳೆ agenda ದಲ್ಲಿ ಅದು ಬರಬೇಕು.

ಶ್ರೀ ಟಿ.ಬಿ. ಜಯಚಂದ್ರ:– ರಾಜ್ಯಪಾಲರ ವಂದನಾ ನಿರ್ಣಯದಲ್ಲೇ ಅದನ್ನು ಸೇರಿಸಿ ಚರ್ಚೆ ಮಾಡಿ ಎಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಲ್ಲ, ಬೇರೆ ರೂಪದಲ್ಲಿ convert ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು:– Governor's address ಮೇಲೆ ಮಾತನಾಡುವಾಗ ಅದನ್ನು ಸೇರಿಸಿ ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು:– ಇಂಥ ಗಂಭೀರವಾದ ವಿಷಯವನ್ನು ಗುಂಪಿನಲ್ಲಿ ಗೋವಿಂದ ಮಾಡುವುದಕ್ಕೆ ಹೊರಟಿದ್ದೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದನ್ನು ನಿಯಮ 69ಕ್ಕೆ convert ಮಾಡಿಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಶೂನ್ಯವೇಳೆ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿ ನಾಲ್ಕು ದಿವಸವಾಯಿತು.

ಉಪಾಧ್ಯಕ್ಷರು:– ಅದಕ್ಕೆ ಉತ್ತರವನ್ನು ನಾಳೆ ಕೊಡಿಸುತ್ತೇವೆ ಬಿಡಿ.

ಶ್ರೀ ಎಸ್.ಟಿ. ಸೋಮಶೇಖರ್:– ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು:– ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಮೊದಲಿಗೆ ಕಾಗೇರಿಯವರು.